ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಸೆಪ್ಟೆಂಬರ್ 2 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 138 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಎಸ್‌ಸಿಎ ಮಹಾರಾಜ ಟ್ರೋಫಿ–2024

ಮೈಸೂರು ವಾರಿಯರ್ಸ್ ಚಾಂಪಿಯನ್



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಮಹಾರಾಜ ಟ್ರೋಫಿ ಗೆದ್ದ ಸಂಭ್ರಮದಲ್ಲಿ ಮೈಸೂರು ವಾರಿಯರ್ಸ್.

- ಕರುಣ್ ನಾಯರ್ ಸರಣಿಶ್ರೇಷ್ಠ
- ಎಸ್.ಯು.ಕಾರ್ತಿಕ್ ಪಂದ್ಯಶ್ರೇಷ್ಠ

ಬೆಂಗಳೂರು, ಸೆ.1– ಪ್ರಸಕ್ತ ಸಾಲಿನ ಕೆಎಸ್‌ಸಿಎ ಮಹಾರಾಜ ಟ್ರೋಫಿ–2024ರ 3ನೇ ಆವೃತ್ತಿಯ ಚಾಂಪಿಯನ್ ಆಗಿ ಮೈಸೂರು ವಾರಿಯರ್ಸ್ ಹೊರ ಹೊಮ್ಮಿದೆ.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು 45 ರನ್‌ಗಳಿಂದ ಮಣಿಸಿ, ಮೈಸೂರು ವಾರಿಯರ್ಸ್ ಚೊಚ್ಚಲು ಚಾಂಪಿಯನ್ಸ್ ಪಟ್ಟ ಅಲಂಕರಿಸಿದರೆ, ಬೆಂಗಳೂರು ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟು ಕೊಂಡಿತು. ಆ ಮೂಲಕ ಕಳೆದ 15 ದಿನಗಳಿಂದ ನಡೆದ ಟಿ20 ಪಂದ್ಯಾವಳಿಗೆ ವರ್ಣರಂಜಿತ ತೆರೆಬಿದ್ದಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ಆರಂಭ ಉತ್ತಮವಾಗಿರಲಿಲ್ಲ. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಿ.ಎ. ಕಾರ್ತಿಕ್ ಕೇವಲ 3 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಜೊತೆಯಾದ ಎಸ್.ಯು. ಕಾರ್ತಿಕ್ ಹಾಗೂ ನಾಯಕ ಕರುಣ್ ನಾಯರ್ 81 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಪಂದ್ಯದಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿ ಅರ್ಧಶತಕ ಸಿಡಿಸಿ ಮಿಂಚಿದ ಎಸ್.ಯು. ಕಾರ್ತಿಕ್ 44 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಒಳ ಗೊಂಡ 71 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಹರ್ಷಿಲ್ ಧರ್ಮನಿ ಕೇವಲ 6 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ನಾಯಕನಿಗೆ ■9ನೇ ಪುಟಕ್ಕೆ



ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್‌ಗೆ ಟ್ರೋಫಿ ವಿತರಿಸಿದರು.

ಸಿದ್ದರಾಮಯ್ಯ ಅನುಮತಿ ನೀಡಿದರೆ

ನಾನೂ ಸಿಎಂ ಆಗುವೆ...!

ಕಾಂಗ್ರೆಸ್ ಹಿರಿಯ ನಾಯಕ ಆರ್.ವಿ.ದೇಶಪಾಂಡೆ ಅಚ್ಚರಿ ಹೇಳಿಕೆ

ಮೈಸೂರು, ಸೆ.1(ಬಿಎಲ್‌ಯು)– ಸಿದ್ದರಾಮಯ್ಯ ಅನುಮತಿ ನೀಡಿದರೆ ನಾನೂ ಮುಖ್ಯಮಂತ್ರಿ ಆಗುತ್ತೇನೆ ಎಂದು ಹಿರಿಯ ಕಾಂಗ್ರೆಸ್ ನಾಯಕರೂ ಆದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಅಚ್ಚರಿ ಹೇಳಿಕೆ ನೀಡಿದ್ದಾರೆ.

ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯಗಿಂತ ನಾನು ವಯಸ್ಸಿನಲ್ಲಿ ಎರಡು ವರ್ಷ ದೊಡ್ಡವನು. ನಾನು ಮುಖ್ಯಮಂತ್ರಿ ಆಗಲು ಹೈಕಮಾಂಡ್ ಅವಕಾಶ ಕೊಟ್ಟರೂ ಸಿದ್ದರಾಮಯ್ಯ ಅನುಮತಿ ನೀಡಬೇಕಲ್ಲವೆ? ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅನುಮತಿ ನೀಡಿದರೆ ನಾನು ಮುಖ್ಯಮಂತ್ರಿ ಆಗುತ್ತೇನೆ ಎಂದು ದೇಶಪಾಂಡೆ ತಮ್ಮ ಮನದಾಳದ ಮಹದಾಸೆ ವ್ಯಕ್ತಪಡಿಸಿದರು. ನಾನು ಸಚಿವನಾಗಿ ದಣಿದಿದ್ದೇನೆ. ಇನ್ನೇನಿದ್ದರೂ ಮುಖ್ಯಮಂತ್ರಿ ಆಗಬೇಕಷ್ಟೆ. ■9ನೇ ಪುಟಕ್ಕೆ



ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ವಿ. ದೇಶಪಾಂಡೆ.

> ಬಹಳ ಸಂತೋಷ. ಅವರು ಸೀನಿಯರ್ ಇದ್ದಾರೆ. ಏಕೆ ಆಗಬಾರದು, ಆಗಲಿ.
> –ಡಿಸಿಎಂ ಡಿ.ಕೆ.ಶಿವಕುಮಾರ್

> ಮುಖ್ಯಮಂತ್ರಿ ಆಗಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಇದರಲ್ಲಿ ತಪ್ಪೇನಿದೆ?. ನನಗೂ ಆಸೆ ಇಲ್ವಾ. ಹಾಗೆಯೇ ಅವರಿಗೂ ಆಸೆ ಇರಬಹುದು. ಆದರೆ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. –ಸಚಿವ ಜಮೀರ್ ಅಹಮದ್

ಆರೋಪ ಕೇಳಿ ಬಂದ ಕೂಡಲೇ ರಾಮಕೃಷ್ಣ ಹೆಗಡೆ ರಾಜೀನಾಮೆ ನೀಡಿದ್ದರು

ಇದೇ ವೇಳೆ ಟೆಲಿಫೋನ್ ಕದ್ದಾಲಿಕೆಯ ಆರೋಪ ಬಂದ ಕೂಡಲೇ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು ಎಂದು ಆರ್.ವಿ.ದೇಶಪಾಂಡೆ ಹೇಳುವ ಮೂಲಕ ಪ್ರಸಕ್ತ ಪರಿಸ್ಥಿತಿಯಲ್ಲಿ ಸಿದ್ದರಾಮಯ್ಯರ ನಿಲುವಿನ ಬಗ್ಗೆ ಪರೋಕ್ಷವಾಗಿ ಸೂಚ್ಯವಾಗಿ ನುಡಿದಂತಿತ್ತು. ಈ ಮೂಲಕ ಅಂದು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದರು, ಹಾಗೆಯೇ ಮೌಲ್ಯಾಧಾರಿತ ರಾಜಕಾರಣದಂತೆ ನಡೆದುಕೊಂಡರು ಕೂಡ ಎಂದರು.

ಆದರೆ ಈಗ ಪ್ರತಿ ದಿನ ಟೆಲಿಫೋನ್ ಕದ್ದಾಲಿಕೆ ನಡೆಯುತ್ತಿದೆ. ಆದರೆ ಮೌಲ್ಯಾಧಾರಿತ ರಾಜಕಾರಣ ನಡೆಯುತ್ತಿಲ್ಲ ಎಂದು ಹೇಳಿ ವಿಷಯಕ್ಕೆ ತೆರೆ ಎಳೆದರು. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಅವರು ಹಗರಣದಲ್ಲಿ ಭಾಗಿಯಾಗಿದ್ದಾರೆಂದು ದಾಖಲೆ ಕೊಟ್ಟರೆ ನಾನೇ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ ಎಂದು ದೇಶಪಾಂಡೆ ತಿಳಿಸಿದರು.

ಮುಡಾ ನಿವೇಶನ ಹಗರಣ

ಸಿದ್ದರಾಮಯ್ಯರ ಪಾಲಿಗೆ ಇಂದು ಮಹತ್ವದ ದಿನ

ಇಂತಹ ಆತಂಕದ ನಡುವೆಯೂ ಹೊಸ ಸಿಎಂ ಪ್ರಸ್ತಾಪ; ಸಿದ್ದರಾಮಯ್ಯ ದೇವರ ಮೊರೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ಪ್ರಾಸಿಕ್ಯೂಷನ್ ಸುಳಿಗೆ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ನಾಳೆ ಮಹತ್ವದ ದಿನ. ಕೋರ್ಟ್‌ನಲ್ಲಿ ಏನಾಗುತ್ತದೆಯೋ ಎಂಬ ಆತಂಕದಲ್ಲಿದ್ದಾರೆ. ಈ ಮಧ್ಯೆ ನಾಡ ಅಧಿದೇವತೆ ಮೊರೆ ಹೋಗಿದ್ದಾರೆ.



ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿರುವ ಪ್ರಕರಣದಲ್ಲಿ ನಾಳೆ ಸಿದ್ದರಾಮಯ್ಯರಿಗೆ ನಿರ್ಣಾಯಕ ದಿನ. ಈಗಾಗಲೇ ಎರಡು ದಿನ ವಾದ–ಪ್ರತಿ ವಾದ ನಡೆದು, ಕೊನೆಯ ಹಂತ ತಲುಪಿದ್ದು, ಸೋಮವಾರವೇ ತೀರ್ಪು ಹೊರ ಬರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಮಂಗಳವಾರ ಮೈಸೂರಿಗೆ ತೆರಳುತ್ತಿದ್ದು ನಾಡ ಅಧಿದೇವತೆ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ತಮ್ಮನ್ನು ಈ ಕೇಸ್‌ನಿಂದ ಪಾರು ಮಾಡುವಂತೆ ಪ್ರಾರ್ಥಿಸಲಿದ್ದಾರೆ.

ಈ ಮಧ್ಯೆ ಕಾಂಗ್ರೆಸ್‌ನಲ್ಲಿ ಸಿಎಂ ಬದಲಾವಣೆ ಕೂಗು ಸದ್ಯ ತಣ್ಣಗಾಗಿತ್ತು. ಆದರೆ ಈಗ ಮತ್ತೆ ಹಲವರಲ್ಲಿ ಸಿಎಂ ಖುರ್ಚಿ ಆಸೆ ಗರಿಗೆದರಿದೆ. ಡಿಸಿಎಂ ಡಿಕೆಶಿ–ಸಚಿವ ಸತೀಶ್ ಜಾರಕಿಹೊಳಿ ಭೇಟಿ, ಸತೀಶ್ ಜಾರಕಿಹೊಳಿ–ಗೃಹ ಸಚಿವ ಪರಮೇಶ್ವರ್ ಭೇಟಿ ನಂತರ ಇದೀಗ ಕಾಂಗ್ರೆಸ್‌ನ ಹಿರಿಯ ಶಾಸಕ ಮಾಜಿ ಸಚಿವ ಆರ್.ವಿ ದೇಶಪಾಂಡೆ ತಾವು ಸಿಎಂ ಆಗುವ ಆಸೆ ವ್ಯಕ್ತಪಡಿಸಿದ್ದಾರೆ.

ಗೃಹ ಸಚಿವ ಪರಮೇಶ್ವರ್ ಸಹ ಸಿಎಂ ಬದಲಾವಣೆ ಬಗ್ಗೆ ಸುಳಿವು ನೀಡಿದ್ದಾರೆ. ಮುಂದಿನ ಬೆಳವಣಿಗೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಹೈಕಮಾಂಡ್ ಕೆಲವು ವಿಷಯ ಹೇಳಿದೆ. ಅದರ ಬಗ್ಗೆಯೂ ಚರ್ಚೆ ನಡೆಸಿದ್ದೇವೆ. ಇಲ್ಲಿನ ವಿದ್ಯಮಾನ, ಕೋರ್ಟ್ ನಡೆ ನೋಡಿಕೊಂಡು ನಂತರ ರಾಷ್ಟ್ರಪತಿಗಳ ಭೇಟಿ ಬಗ್ಗೆ ■9ನೇ ಪುಟಕ್ಕೆ

50:50 ಅನುಪಾತದಡಿ ನಿವೇಶನಗಳ ಅಕ್ರಮ ಮಂಜೂರಾತಿ ರದ್ದು ಮಾಡಿ

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ರಘು ಕೌಟಿಲ್ಯ ಪತ್ರ

- ನಿಮ್ಮ ಮೌನ ನೋಡಿದ್ರೆ ಹಗರಣದಲ್ಲಿ ನೀವು ಭಾಗಿದಾರರೇ...
- ನಿಮ್ಮನ್ನು ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಬೇಕಾಗುತ್ತೆ...
- ಅಧಿಕಾರಿಗಳ ಬಡ್ತಿಗೆ ಭ್ರಷ್ಟಾಚಾರ ಮಾನದಂಡವೆ... !

ಮೈಸೂರು, ಸೆ.1(ಬಿಎಲ್‌ಯು)– ಮುಡಾದಲ್ಲಿ ಶೇಕಡ 50:50 ಅನುಪಾತದಲ್ಲಿ ನಿಯಮಬಾಹಿರವಾಗಿ ಹಂಚಿಕೆ ಮಾಡಿರುವ ಎಲ್ಲಾ ನಿವೇಶನಗಳನ್ನು ರದ್ದು ಮಾಡಿ ಅಧಿಸೂಚನೆ ಹೊರಡಿಸಬೇಕು ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಆಗ್ರಹಿಸಿದ್ದಾರೆ.



ಮೈಸೂರು ಬಿಜೆಪಿ ಕಚೇರಿಯಲ್ಲಿ ಭಾನುವಾರ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶೇಕಡ 50:50 ಅನುಪಾತದಲ್ಲಿ 10 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಮಂಜೂರಾತಿ ಮಾಡಿದ್ದು, ಇವುಗಳನ್ನು ರದ್ದು ಮಾಡಿ ಅಧಿಸೂಚನೆ ಹೊರಡಿಸಬೇಕು ಎಂದು ಮುಖ್ಯಕಾರ್ಯದರ್ಶಿಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಶೇಕಡ 50:50 ಅನುಪಾತದಲ್ಲಿ ಅಭಿವೃದ್ಧಿ ಹೊಂದಿರುವ ಬಡಾವಣೆಗಳಲ್ಲಿ ನಿವೇಶನ ನೀಡುವ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಕೂಡ ಪಡೆಯದೆ ಅಕ್ರಮವಾಗಿ ಮಂಜೂರು ಮಾಡಲಾಗಿದೆ. ನಕಲಿ ದಾಖಲಾತಿ ಸೃಷ್ಟಿಸಿ ಜಿಪಿಎ ಹೋಲ್ಡರ್ ಹೆಸರಿನಲ್ಲಿ ಸ್ವೇಚ್ಛಾಚಾರವಾಗಿ 10 ಸಾವಿರಕ್ಕೂ ಹೆಚ್ಚು ನಿವೇಶನ ಕ್ರಯ ಮಾಡಲಾಗಿದೆ. ಈ ಮೂಲಕ ಮುಡಾದ ಸಾವಿರಾರು ಕೋಟಿ ರೂಪಾಯಿ ಆಸ್ತಿ ಲೂಟಿ ಮಾಡಲಾಗಿದೆ ಎಂದು ರಘು ಕೌಟಿಲ್ಯ ಆರೋಪಿಸಿದ್ದಾರೆ.

ಯಾರ ವಿರುದ್ಧವೂ ಕ್ರಮವಾಗಿಲ್ಲ: ಸರ್ಕಾರವೇ ರಚಿಸಿದ ತಾಂತ್ರಿಕ ಪರಿಣತರ ಸಮಿತಿ ಮುಡಾದಲ್ಲಿ ನಡೆದಿರುವ ಬದಲಿ ನಿವೇಶನ ಮಂಜೂರಾತಿ ಸೇರಿದಂತೆ ಇತರೆ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ನವೆಂಬರ್ 3, 2023 ರಂದು ವರದಿ ಕೂಡ ನೀಡಿದೆ. ಅಂದಿನ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಕ್ರಮದ ಬಗ್ಗೆ ಸರ್ಕಾರಕ್ಕೆ ಸರಣಿ ಪತ್ರ ಬರೆದು ಗಮನಕ್ಕೆ ತಂದರೂ ಈ ತನಕ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ ಎಂದು ದೂರಿದರು. ತಾಂತ್ರಿಕ ಪರಿಣತರ ಸಮಿತಿ ನೀಡಿರುವ ವರದಿ ಆಧರಿಸಿ ■9ನೇ ಪುಟಕ್ಕೆ

ನಟೇಶ್, ದಿನೇಶ್‌ಕುಮಾರ್ ವಿರುದ್ಧ ಲೋಕಾಯುಕ್ತರಿಗೆ ದೂರು

ಮೈಸೂರು, ಸೆ.1(ಬಿಎಲ್‌ಯು)– ಅಕ್ರಮದಲ್ಲಿ ಭಾಗಿಯಾಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಆಯುಕ್ತರಾದ ಡಾ.ಡಿ.ಬಿ. ನಟೇಶ್ ಹಾಗೂ ಜಿ.ಟಿ. ದಿನೇಶ್‌ಕುಮಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಬಂಧಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಲೋಕಾಯುಕ್ತರಿಗೆ ದೂರು ನೀಡಿದ್ದಾರೆ.



ಟಿ.ಎಸ್.ಶ್ರೀವತ್ಸ

ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಲ್ಲಿ ದೂರು ದಾಖಲಿಸಿರುವ ಶ್ರೀವತ್ಸ ನಟೇಶ್ ಹಾಗೂ ದಿನೇಶ್ ಕುಮಾರ್ ಎಸಗಿರುವ ಅಕ್ರಮಗಳ ಬಗ್ಗೆ ವಿವರ ನೀಡಿದ್ದಾರೆ. ಶೇಕಡ 50:50 ಅನುಪಾತದಲ್ಲಿ 5 ಲಕ್ಷ ಚದರ ಅಡಿಗೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ.



ಡಿ.ಬಿ.ನಟೇಶ್ ದಿನೇಶ್‌ಕುಮಾರ್

ಇಂತಹ ಅಕ್ರಮ ಮಂಜೂರಾತಿ ರದ್ದು ಮಾಡಿ, ನಟೇಶ್ ಹಾಗೂ ದಿನೇಶ್‌ಕುಮಾರ್ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಕ್ತ ದಾಖಲಾತಿಗಳೊಂದಿಗೆ ಈ ಹಿಂದೆ ಪತ್ರ ಬರೆದಿದ್ದೆ. ಆದರೆ ಈ ತನಕ ಸರ್ಕಾರದಿಂದ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಶ್ರೀವತ್ಸ ಹೇಳಿದ್ದಾರೆ. ನಿವೇಶನಗಳ ಅಕ್ರಮ ಮಂಜೂರಾತಿಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ನಟೇಶ್, ದಿನೇಶ್‌ಕುಮಾರ್ ಸೇರಿದಂತೆ ಇತರೆ ಅಧಿಕಾರಿಗಳನ್ನು ಬಂಧಿಸಬೇಕು. ಜೊತೆಗೆ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಅಧಿಕಾರಿಗಳಿಂದಲೇ ಭರಿಸಬೇಕು ಎಂದು ಆದೇಶ ಹೊರಡಿಸುವಂತೆ ಶ್ರೀವತ್ಸ ಲೋಕಾಯುಕ್ತ ಎಡಿಜಿಪಿ ಅವರಿಗೆ ಸಲ್ಲಿಸಿರುವ ದೂರಿನಲ್ಲಿ ಕೋರಿದ್ದಾರೆ.

ಮೈಸೂರು ಮಿತ್ರ ಸೋಮವಾರ 2 ಸೆಪ್ಟೆಂಬರ್ 2024

ವರದಕ್ಷಿಣೆ ಕಿರುಕುಳ; ಗೃಹಿಣಿ ಆತ್ಮಹತ್ಯೆ

● ಪತಿ, ಅತ್ತೆ, ನಾದಿನಿ, ಆಕೆ ಪತಿ, ಪುತ್ರ, ಸಂಬಂಧಿ ವಿರುದ್ಧ ಪ್ರಕರಣ ದಾಖಲು ● ರಸಾಯನಿಕ ಗೊಬ್ಬರ ತಿನ್ನಿಸಿ, ಔಷಧಿ ಕುಡಿಸಿ ಎರಡು ಬಾರಿ ಹತ್ಯೆ ಯತ್ನ ● 21 ಪುಟದ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣು

ಮೈಸೂರು, ಸೆ.1(ಎಂಕೆ)– ವರದಕ್ಷಿಣೆ ಕಿರುಕುಳ ತಾಳದೇ ಗೃಹಿಣಿಯೊಬ್ಬರು ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಟಿ.ನರಸೀಪುರ ತಾಲೂಕು ಬನ್ನೂರಿನ ಬಿ.ಬೆಟ್ಟಹಳ್ಳಿಯಲ್ಲಿ ನಡೆದಿದೆ.


ಎನ್.ದೀಕ್ಷಿತಾ

ಇಲ್ಲಿನ ನಿವಾಸಿ ರೇಣುಕಾ ಮತ್ತು ಲೇಟ್ ನಾಗರಾಜು ಅವರ ಪುತ್ರಿ ಎನ್.ದೀಕ್ಷಿತಾ(21) ಆತ್ಮಹತ್ಯೆಗೆ ಶರಣಾದ ದುರ್ದೈವಿ. ದೀಕ್ಷಿತಾ ಪತಿ ಎಂ.ಆರ್.ಮನೋಹರ್, ಅತ್ತೆ ನಾಗಮ್ಮ, ನಾದಿನಿ ಮಂಜುಳ, ಆಕೆಯ ಪತಿ ನಟರಾಜ್ ಮತ್ತು ಅವರ ಪುತ್ರ ಉಜ್ವಲ್‌ಗೌಡ ಹಾಗೂ ಮನೋಹರ್ ಸಂಬಂಧಿ ಸಿದ್ದೇಗೌಡ ವಿರುದ್ಧ ವರದಕ್ಷಿಣೆ ಕಿರುಕುಳ ಆರೋಪದಡಿ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಎರಡು ವರ್ಷಗಳ ಹಿಂದೆಯಷ್ಟೇ ಟಿ.ನರಸೀಪುರ ತಾಲೂಕಿನ ಮಾದಿಗಹಳ್ಳಿ ಗ್ರಾಮದ ನಾಗಮ್ಮ ಮತ್ತು ಲೇಟ್ ರಾಮಲಿಂಗು(ಡೈರಿ ಬಾಬು) ಪುತ್ರ ಎಂ.ಆರ್.ಮನೋಹರ್ ಜೊತೆ ವಿವಾಹವಾಗಿದ್ದ ದೀಕ್ಷಿತಾ, ಕೇವಲ 15 ದಿನಗಳಷ್ಟೇ ಪತಿಯೊಂದಿಗೆ ಅನ್ಯೋನ್ಯವಾಗಿದ್ದು ನಂತರ ಅತ್ತೆ ನಾಗಮ್ಮ, ನಾದಿನಿ ಮಂಜುಳ ಹಾಗೂ ಆಕೆಯ ಗಂಡ ನಟರಾಜ್ ಮತ್ತು ಅವರ ಪುತ್ರ ಉಜ್ವಲ್‌ಗೌಡ ವರದಕ್ಷಿಣೆ ತರುವಂತೆ ದೈಹಿಕವಾಗಿ ಹಲ್ಲೆ ನಡೆಸಿ, ತವರು ಮನೆಗೆ ಕಳಿಸಿದ್ದರು. ಬಳಿಕ ಬುದ್ಧಿ ಮಾತು ಹೇಳಿ ವಾಪಸ್ ಕರೆದುಕೊಂಡು ಹೋಗಿ ಬಿಡಲಾಗಿತ್ತು. ಕೆಲ ದಿನಗಳಲ್ಲೇ ಮತ್ತೆ ಹಲ್ಲೆ ಮಾಡಿ, ರಾಸಾಯನಿಕ ಗೊಬ್ಬರ ತಿನ್ನಿಸಿದ್ದರು. ಇದರಿಂದ ಅನಾರೋಗ್ಯಕ್ಕಿಡಾಗಿದ್ದ ದೀಕ್ಷಿತಾಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು.

ಗುಣಮುಖರಾದ ಬಳಿಕ ಪೊಲೀಸರ ಮುಂದೆ ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಪುನಃ ಕರೆದುಕೊಂಡು ಹೋಗಿ ಬಲವಂತವಾಗಿ ಔಷಧಿ ಕುಡಿಸಿದ್ದು, ಗಂಭೀರ ಸ್ಥಿತಿಯಲ್ಲಿ ದೀಕ್ಷಿತಾಳಿಗೆ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಮತ್ತೆ ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಕರೆದು ಕೊಂಡು ಹೋದವರು ದೈಹಿಕವಾಗಿ ಹಲ್ಲೆ ನಡೆಸಿ, ಅವಾಚ್ಯ ಪದಗಳಿಂದ ನಿಂದಿಸಿ, ಹಣ ತರುವಂತೆ ತವರು ಮನೆಗೆ ಕಳಿಸಿದ್ದಾರೆ. ಇದರಿಂದ ಮನನೊಂದ ದೀಕ್ಷಿತಾ, ಆ.27ರಂದು ಬೆಳಗ್ಗೆ 8.30ರ ವೇಳೆ 21 ಪುಟಗಳ ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದೀಕ್ಷಿತಾ ಆತ್ಮಹತ್ಯೆಗೆ ಕಾರಣರಾದ ಆಕೆಯ ಪತಿ ಎಂ.ಆರ್.ಮನೋಹರ್, ಅತ್ತೆ ನಾಗಮ್ಮ, ನಾದಿನಿ ಮಂಜುಳ, ಆಕೆಯ ಪತಿ ನಟರಾಜ್ ಮತ್ತು ಅವರ ಪುತ್ರ ಉಜ್ವಲ್‌ಗೌಡ ಹಾಗೂ ಮನೋಹರ್ ಸಂಬಂಧಿ ಸಿದ್ದೇಗೌಡ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದೀಕ್ಷಿತಾ ಚಿಕ್ಕಪ್ಪ ಬಿ.ಟಿ. ರಾಜೇಂದ್ರ ಬನ್ನೂರು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಕೋರಿದ್ದಾರೆ.

ನಮ್ಮ ಸನಾತನ ಹಿಂದೂ ಧರ್ಮವನ್ನು ಉಳಿಸಿ; ಬೆಳೆಸಿ

● ಮಕ್ಕಳಿಗೆ ಶ್ರೀ ಗಣಪತಿ ಸ್ವಾಮೀಜಿ ಕಿವಿಮಾತು ● ಸಾಮೂಹಿಕ ಭಜನಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ವತಿಯಿಂದ ನಡೆದ 10ನೇ ಕರ್ನಾಟಕ ರಾಜ್ಯ ಮಟ್ಟದ ಅಂತರಶಾಲಾ ಸಾಮೂಹಿಕ ಭಜನೆ ಸ್ಪರ್ಧೆಯ ವಿಜೇತರಿಗೆ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬಹುಮಾನ ವಿತರಿಸಿದರು.

ಮೈಸೂರು, ಸೆ.1– ನಮ್ಮ ಧರ್ಮ ಅತ್ಯಂತ ಹಳೆಯದಾದ ಸನಾತನ ಧರ್ಮ, ಇದನ್ನು ಉಳಿಸಲು ಮಕ್ಕಳು ಪಣ ತೊಡಬೇಕು ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ ನೀಡಿದರು.

ಅವಧೂತ ದತ್ತಪೀಠದ ವತಿಯಿಂದ ನಡೆದ 10ನೇ ಕರ್ನಾಟಕ ರಾಜ್ಯ ಮಟ್ಟದ ಅಂತರಶಾಲಾ ಸಾಮೂಹಿಕ ಭಜನೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ನಮ್ಮ ಧರ್ಮವನ್ನು ಬಿಟ್ಟು ಬೇರೆಡೆಗೆ ಹೋಗಬಾರದು. ಹಾಗೆ ಹೋದರೆ ನಮ್ಮನ್ನು ನಾವು ಕೊಂದುಕೊಂಡಂತೆ ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ಮಕ್ಕಳಿಂದ ಹಿಡಿದು ಮನೆ ಮಂದಿಯೆಲ್ಲಾ ಭಗವದ್ಗೀತೆ ಓದಬೇಕು, ಕೇಳಬೇಕು. ನಮ್ಮ ದೇಶವನ್ನು ಪ್ರೀತಿಸಬೇಕು. ಬೇರೆ ದೇಶಗಳಲ್ಲಿ ನಾವು ಸ್ವತಂತ್ರವಾಗಿ ಬದುಕುವುದು ಕಷ್ಟ ಎಂದು ತಿಳಿ ಹೇಳಿದರು.

ಅಮೆರಿಕದಲ್ಲಿ ಶಾಲೆಯಲ್ಲೇ ಭಗವದ್ಗೀತೆ ಕಲಿಸುತ್ತಾರೆ. ಅಲ್ಲಿನ ಮಕ್ಕಳು ಭಗವದ್ಗೀತೆಯನ್ನು ಕಂಠಪಾಠ ಮಾಡಿದ್ದಾರೆ. ಇದರಿಂದ ಅವರ ಜ್ಞಾಪಕ ಶಕ್ತಿ ಹೆಚ್ಚಾಗುತ್ತದೆ. ಭಗವದ್ಗೀತೆಯನ್ನು ನಮ್ಮ ಶಾಲೆಗಳಲ್ಲಿ ತಪ್ಪದೇ ಪಠನ ಮಾಡಬೇಕು ಎಂದು ಶಿಕ್ಷಕರಿಗೆ ಇದೆ ವೇಳೆ ಶ್ರೀಗಳು ತಿಳಿ ಹೇಳಿದರು.

ಅಮೆರಿಕದಲ್ಲಿ ಮೂರು ವರ್ಷದ ಮಗು ಭಗವದ್ಗೀತೆಯನ್ನು ಕಂಠಪಾಠ ಮಾಡಿದರೆ, ನಾಲ್ಕು ವರ್ಷದ ಮಗು ಸೌಂದರ್ಯ ಲಹರಿಯನ್ನು ಕಲಿತಿದೆ. ಮಾತು ಬಾರದ ಆಟಿಸಂ ಕಾಯಿಲೆ ಉಳ್ಳ ಮಗು ಭಗವದ್ಗೀತೆಯ ಎಲ್ಲಾ ಶ್ಲೋಕಗಳನ್ನು ಕಲಿತು, ಪಠಿಸುತ್ತದೆ. ನನಗೆ ಇದು ಅದ್ಭುತ ಎನಿಸುತ್ತದೆ. ಇದಕ್ಕೆ ಭಗವದ್ಗೀತೆಯಲ್ಲಿರುವ ಶಕ್ತಿಯೇ ಕಾರಣ. ಹಾಗಾಗಿ ಎಲ್ಲರೂ ಭಗವದ್ಗೀತೆಯನ್ನು ಕೇಳಿ, ಕಲಿಯಿರಿ ಎಂದು ಶ್ರೀಗಳು ಕಿವಿಮಾತು ಹೇಳಿದರು.

ಆಶ್ರಮದ ವತಿಯಿಂದಲೂ ಆನ್‌ಲೈನ್ ಮೂಲಕ ಉಚಿತವಾಗಿ ಭಗವದ್ಗೀತೆಯನ್ನು ಕಲಿಸಿಕೊಡಲಾಗುತ್ತದೆ. ಇದಕ್ಕೆ ನೋಂದಣಿ ಮಾಡಿಕೊಳ್ಳಿ ಎಂದರು.

ದಿವ್ಯ ನಾಮ ಸಂಕೀರ್ತನೆ ಭಗವಂತನೆಡೆಗೆ ತೆರಳಲು ಸುಲಭ ಮಾರ್ಗವಾಗಿದೆ. ಜೊತೆಗೆ ಜ್ಞಾನ ವೃದ್ಧಿಸಿಕೊಳ್ಳಲು ಸಹಕಾರಿಯಾಗಿದೆ. ಹಾಗಾಗಿ ಇದನ್ನು ಹೆಚ್ಚು ಪ್ರಚಾರ ಮಾಡಬೇಕು. ಕೆಟ್ಟ ಹಾದಿ ಹಿಡಿಯದೇ ನಮ್ಮ ಧರ್ಮ, ಸಂಸ್ಕೃತಿಯನ್ನು ಕಾಪಾಡಿ ಎಂದು ಹೇಳಿದರು.

ತನಗೆ ಬಹುಮಾನ ಬರಲಿಲ್ಲ ಎಂದು ಚಿಂತೆ ಮಾಡಬಾರದು. ಇಲ್ಲಿ ಬಂದು ಪ್ರಯತ್ನ ಮಾಡಿರುವುದೇ ಒಂದು ಪುಣ್ಯದ ಕೆಲಸ. ಹಾಗಾಗಿ ಮತ್ತೆ ಮತ್ತೆ ಪ್ರಯತ್ನ ಮಾಡಿದರೆ ಹಿಡಿದ ಕಾರ್ಯ ಸಾಧ್ಯ ಎಂದು ಮಕ್ಕಳಿಗೆ ಗಣಪತಿ ಸ್ವಾಮೀಜಿ ಹಿತವಚನ ಹೇಳಿದರು

> “ಮಕ್ಕಳೇ, ಮೊಬೈಲ್ ಫೋನ್‌ಗಳನ್ನು ಹೆಚ್ಚಾಗಿ ನೋಡಬೇಡಿ, ಅದನ್ನು ಮುಟ್ಟಲೂ ಬೇಡಿ. ಇದರಿಂದ ಸಮಯ ಹಾಳು, ಮನಸ್ಸು ಹಾಳು, ಜೀವನವೇ ನಾಶವಾಗಿ ಬಿಡುತ್ತದೆ. ತಂದೆ–ತಾಯಿಗಳೂ ಮಕ್ಕಳಿಗೆ ಮೊಬೈಲ್ ಫೋನ್ ಕೊಟ್ಟು ಅಭ್ಯಾಸ ಮಾಡಬೇಡಿ. ಹೆಣ್ಣು ಮಕ್ಕಳು, ಮಹಿಳೆಯರು ಹಣೆಗೆ ಬೊಟ್ಟು ಇಟ್ಟುಕೊಳ್ಳುವುದು ನಮ್ಮ ಸಂಸ್ಕೃತಿಯ ಪ್ರತೀಕ. ಹೀಗೆ ಮಾಡುವುದರಿಂದ ನಮ್ಮ ಜ್ಞಾಪಕ ಶಕ್ತಿ ಹೆಚ್ಚಾಗುತ್ತದೆ. ಇದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ.
> –ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಕುಮಾರಿ ಜನನಿ, ಅಕ್ಷತಾ ಭಟ್ ಶ್ರೀಮತಿ ಲಲಿತಾಶ್ರೀ ಮತ್ತು ರಮ್ಯ ಅನಿಲ್ ಪ್ರಾರ್ಥನೆ ಮಾಡಿದರು.

ಮೊದಲು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಿಗೆ ಫಲಪುಷ್ಪ ಸಮರ್ಪಣೆ ಮಾಡಲಾಯಿತು.

ಕರ್ನಾಟಕದ 25 ಜಿಲ್ಲೆಗಳಲ್ಲಿ ಜುಲೈ–ಆಗಸ್ಟ್‌ನಲ್ಲಿ ನಡೆದ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಜಿಲ್ಲಾ ಮಟ್ಟದ ಸ್ಪರ್ಧೆಯ ವಿಜೇತರಿಗೆ ಬಹುಮಾನವನ್ನು ಶ್ರೀಗಳು ವಿತರಿಸಿ, ಮಕ್ಕಳನ್ನು ಆಶೀರ್ವದಿಸಿದರು. ರಾಜ್ಯಮಟ್ಟದ ಅಂತಿಮ ಭಜನೆ ಗಾಯನ ಸ್ಪರ್ಧೆಯ ಜೂನಿಯರ್ ಮತ್ತು ಸೀನಿಯರ್ ವಿಭಾಗದ ಫಲಿತಾಂಶವನ್ನು ದತ್ತಪೀಠ ಆಸ್ಥಾನ ವಿದ್ವಾನ್ ಶ್ರೀ ಶಂಕರ್ ರಮೇಶ್ ನೀಡಿದರು.

ಭಜನೆ ಸೀನಿಯರ್ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಹುಬ್ಬಳ್ಳಿಯ ಚಿನ್ಮಯ ವಿದ್ಯಾಲಯ ಶಾಲೆ, ದ್ವಿತೀಯ ಬಹುಮಾನವನ್ನು ಮೈಸೂರಿನ ಡಿಎವಿ ಪಬ್ಲಿಕ್ ಸ್ಕೂಲ್, ಮೂರನೇ ಬಹುಮಾನವನ್ನು ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಪಡೆದುಕೊಂಡಿತು. ಜೂನಿಯರ್ ವಿಭಾಗದಲ್ಲಿ ಮೊದಲನೇ ಬಹುಮಾನವನ್ನು ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಪಡೆದುಕೊಂಡರೆ, ದ್ವಿತೀಯ ಬಹುಮಾನವನ್ನು ಬೆಂಗಳೂರಿನ ವಿಇಎಸ್ ಮಾಡೆಲ್ ಕಾನ್ವೆಂಟ್ ಮತ್ತು ಮಂಗಳೂರಿನ ಶಾರದ ವಿದ್ಯಾಲಯ ಪಡೆದುಕೊಂಡವು. ಮೂರನೇ ಬಹುಮಾನವನ್ನು ಬಳ್ಳಾರಿಯ ಡ್ರೀಮ್ ವರ್ಲ್ಡ್ ಸ್ಕೂಲ್ ಪಡೆದುಕೊಂಡಿತು. ಇದೇ ವೇಳೆ ಪಕ್ಕವಾದ್ಯ ನುಡಿಸಿದ ಎಲ್ಲರಿಗೂ ವಿಶೇಷ ಬಹುಮಾನವನ್ನು ವಿತರಿಸಲಾಯಿತು.

ಶ್ರೀ ಅವಧೂತ ದತ್ತಪೀಠದಲ್ಲಿ ಸಾಧಕರಿಗೆ ಆದರ್ಶ ಪ್ರಶಸ್ತಿ ಪ್ರದಾನ



ಆದರ್ಶ ಸೇವಾ ಸಂಘದ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ವಾಸಿ ಅನಘ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಸಂಘದ ಜಿ.ಆರ್.ನಾಗರಾಜ್, ಶಾಸಕ ಶ್ರೀವತ್ಸ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಕಾಂಗ್ರೆಸ್ ಹಿರಿಯ ನಾಯಕ ಆರ್.ವಿ.ದೇಶಪಾಂಡೆ, ಸಂಘದ ಗಣೇಶ್, ಆಶ್ರಮದ ಟ್ರಸ್ಟಿ ವಿನಯ ಬಾಬು ಮತ್ತಿತರರಿದ್ದರು.

ಮೈಸೂರು, ಸೆ.1(ಎಂಕೆ)– ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಶ್ರೀ ಅವಧೂತ ದತ್ತಪೀಠದಲ್ಲಿ ಆದರ್ಶ ಸೇವಾ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ ನಡೆಯಿತು.

ಲೇಖಕ ಹುರಗಲವಾಡಿ ಲಕ್ಷ್ಮಿನರಸಿಂಹ ಶಾಸ್ತ್ರಿ, ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ಚಲನಚಿತ್ರ ನಿರ್ದೇಶಕ ಸುನೀಲ್‌ಕುಮಾರ್ ದೇಸಾಯಿ ಹಾಗೂ ಆದರ್ಶ ಸೇವಾ ಸಂಘದ ಹಿರಿಯ ಸದಸ್ಯೆ ಕುಸುಮಾ ವೆಂಕಟೇಶ್ ಅವರಿಗೆ ‘ಆದರ್ಶ ಸೇವಾರತ್ನ ಪ್ರಶಸ್ತಿ, ಶಿಕ್ಷಣ ತಜ್ಞೆ ಡಾ.ಮೀನಾ ಜಯಚಂದ್ರ, ಕಿನ್ನಾಳ ಕಲಾವಿದೆ ಡಾ. ಎಲ್.ಸುಬ್ಬಲಕ್ಷ್ಮಿ, ಸಂಗೀತ ಕಲಾವಿದೆ ಜಿ.ಕವಿತಾ ಕಾಮತ್, ಮಕ್ಕಳ ತಜ್ಞ ಡಾ.ಬಿ.ವಿ.ರಘುನಾಥ್ ಅವರಿಗೆ ‘ಆದರ್ಶ ಪ್ರತಿಭಾರತ್ನ ಪ್ರಶಸ್ತಿ ಹಾಗೂ ವಿದುಷಿ ಅನಘ, ಚೆಸ್‌ಪಟುಗಳಾದ ಧಾತ್ರಿ ಉಮೇಶ್ ಮತ್ತು ದಿಯಾ ಉಮೇಶ್, ವಿದುಷಿ ಯೋಗಶ್ರೀ ಅವರಿಗೆ ‘ಆದರ್ಶ ಯುವ ಪ್ರತಿಭಾರತ್ನ’ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಸಮಾರಂಭ ಉದ್ಘಾಟಿಸಿದ ರಾಜ್ಯ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರೂ ಆದ ಕಾಂಗ್ರೆಸ್ ಹಿರಿಯ ನಾಯಕ ಆರ್.ವಿ.ದೇಶಪಾಂಡೆ ಮಾತನಾಡಿ, ಯುವ ಪ್ರತಿಭೆಗಳನ್ನು ಗುರ್ತಿಸಿ ಪ್ರೋತ್ಸಾಹಿಸಬೇಕು. ಕಳೆದ 35 ವರ್ಷಗಳಿಂದ ಆದರ್ಶ ಸೇವಾ ಸಂಘ ಪ್ರತಿಭಾನ್ವಿತರನ್ನು ಹಾಗೂ ಸಾಧಕರನ್ನು ಗುರ್ತಿಸಿ ಅಭಿನಂದನೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ನಾನು ಕೂಡ ಸಂಘ ಚಟುವಟಿಕೆಗಳಿಗೆ ಸ್ಪಂದಿಸಲಾಗುವುದು ಎಂದು ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರಿನಲ್ಲಿ ಬಾಲ ಪ್ರತಿಭೆಗಳಿಗೆ ಕೊರತೆ ಇಲ್ಲ. ನಿರಂತರವಾಗಿ 14 ಗಂಟೆಗಳ ಕಾಲ ಕೀ ಬೋರ್ಡ್ ನುಡಿಸಿರುವ, 11 ಗಂಟೆಗಳ ಕಾಲ ಸ್ವಾಮಿ ವಿವೇಕಾನಂದರ ಕುರಿತು ಭಾಷಣ ಮಾಡಿರುವ ಹಾಗೂ 30 ನಿಮಿಷದಲ್ಲಿ 150 ಶ್ಲೋಕಗಳನ್ನು ಹೇಳಿರುವ ಪ್ರತಿಭೆಗಳು ಮೈಸೂರಿನಲ್ಲಿದ್ದಾರೆ. ಹಾಗೆಯೇ ಹಲವಾರು ಬಾಲ ಪ್ರತಿಭೆಗಳು ಸಾಂಸ್ಕೃತಿಕ ರಾಜಧಾನಿಯಲ್ಲಿದ್ದು, ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಬೇಕಿದೆ ಎಂದು ಸಲಹೆ ನೀಡಿದರು. ಇದೇ ವೇಳೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕೆಲವರನ್ನು ಅಭಿನಂದಿಸಲಾಯಿತು.

ಶ್ರೀ ಅವಧೂತ ದತ್ತಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜ ರಾವ್, ಹೈಕೋರ್ಟ್ ವಿಶ್ರಾಂತ ನ್ಯಾಯಾಮೂರ್ತಿ ಎನ್.ಕುಮಾರ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ, ಸಂಘದ ಗಣೇಶ್, ಆಶ್ರಮದ ಟ್ರಸ್ಟಿ ವಿನಯ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು; ವಿಶೇಷ ಉಪನ್ಯಾಸ


‘ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು’ ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿ ಡಾ.ಶೇಷಗಿರಿರಾವ್ ಮಾತನಾಡಿದರು.

ಮೈಸೂರು,ಸೆ.1–ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಭೌತಶಾಸ್ತ್ರ, ಜೀವ ತಂತ್ರಜ್ಞಾನಶಾಸ್ತ್ರ, ಎಂಟ್ರಿ–ಟು–ಸರ್ವೀಸ್, ಐಕ್ಯೂಎಸಿ ಹಾಗೂ HCross ಸಂಸ್ಥೆ ಸಹಯೋಗದಲ್ಲಿ ಕ್ರಿಯಾತ್ಮಕ ಜಗತ್ತಿನಲ್ಲಿ ಬೆಳೆಯಲು ಇರುವ ಅವಕಾಶಗಳು ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ H Cross ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರು ಹಾಗೂ ಸಂಪನ್ಮೂಲ ವ್ಯಕ್ತಿ ಡಾ.ಶೇಷಗಿರಿರಾವ್ ಮಾತನಾಡಿ, ಬಿ.ಎಸ್ಸಿ ಪದವಿಯ ನಂತರ ವಿದ್ಯಾರ್ಥಿಗಳಿಗಿರುವ ವಿಫುಲ ಅವಕಾಶಗಳ ತಿಳಿಸುತ್ತಾ, ಉನ್ನತ ಅಧ್ಯಯನದ ಎಂಎಸ್ಸಿ, ಎಂ.ಎಸ್ ಹಾಗೂ ಇಂಟಿಗ್ರೇಟೆಡ್ ಪಿಹೆಚ್.ಡಿ ಪದವಿ ಸೇರಿದಂತೆ ರಾಜ್ಯ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳು ನಡೆಸುವ ಪ್ರವೇಶ ಪರೀಕ್ಷೆಗಳಾದ JAM, JEST, CUCET ಪರೀಕ್ಷೆಗಳ ಕಡೆಗೂ ವಿದ್ಯಾರ್ಥಿಗಳು ಗಮನಹರಿಸುವಂತೆ ತಿಳಿಸಿದರು.

ಈ ಪರೀಕ್ಷೆಗಳು ನಡೆಯುವ ಸಂಭವನೀಯ ದಿನಾಂಕಗಳು ಹಾಗೂ ಈ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹೇಗೆ ಸಿದ್ಧತೆ ನಡೆಸಿಕೊಳ್ಳಬೇಕೆಂಬ ಮಾಹಿತಿ ಹಂಚಿಕೊಂಡರು. ಇದರ ಜೊತೆಗೆ ವಿಸ್ತಾರವಾದ ಉದ್ಯೋಗದ ಅವಕಾಶಗಳನ್ನು ಪಡೆಯಲು ವಿದ್ಯಾರ್ಥಿಗಳು ISRO, DRDO, NRSA, BEL ನಂತಹ ಸುಪ್ರಸಿದ್ಧ ಸಂಸ್ಥೆಗಳನ್ನು ನಡೆಸುವ ಪರೀಕ್ಷೆಗಳಿಗೆ ಹಾಜರಾಗಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. 2000 ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸ್ಟಾರ್ಟ್ ಅಪ್ ಕಂಪನಿಗಳಿಗೂ ಅರ್ಜಿ ಹಾಕುವಂತೆ ಸೂಚಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಹೆಚ್, ಭೌತಶಾಸ್ತ್ರ ಮುಖ್ಯಸ್ಥ ಡಾ.ಪೂರ್ಣಿಮಾ, ಜೀವ ತಂತ್ರಜ್ಞಾನ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರಿಯಾಂಕ ಶೆಣೈ, ವಿಜ್ಞಾನ ವಿಭಾಗಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿ ಹಾಜರಿದ್ದರು.

ಫಲಪುಷ್ಪ ಪ್ರದರ್ಶನ: ಕೈ ತೋಟಗಳ ಸ್ಪರ್ಧೆಗೆ ಅರ್ಜಿ



ಮೈಸೂರು,ಸೆ.1–ತೋಟಗಾರಿಕೆ ಇಲಾಖೆ ಮತ್ತು ಜಿಲ್ಲಾ ತೋಟಗಾರಿಕೆ ಸಂಘ, ಕರ್ಜನ್ ಪಾರ್ಕ್ ಇವರ ಸಂಯುಕ್ತಾಶ್ರಯದಲ್ಲಿ 2024–25ನೇ ಸಾಲಿನ ದಸರಾ ಫಲಪುಷ್ಪ ಪ್ರದರ್ಶನದ ಭಾಗವಾಗಿ ಮೈಸೂರು ನಗರ ವ್ಯಾಪ್ತಿಯ ಸಾರ್ವಜನಿಕ, ಖಾಸಗಿ ಮನೆ, ಕೈಗಾರಿಕೆ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಆಡಳಿತಾಧಿಕಾರಿ ಕಚೇರಿ, ಆಸ್ಪತ್ರೆ, ಅಪಾರ್ಟ್‌ಮೆಂಟ್, ಹೋಟೆಲ್ ಕೈ ತೋಟಗಳು ಸೇರಿದಂತೆ ಇತರೆ ಕೈ ತೋಟಗಳ ಸ್ಪರ್ಧೆಗೆ ಅರ್ಜಿ ಆಹ್ವಾನಿಸಲಾಗಿದೆ. ಕರ್ಜನ್ ಪಾರ್ಕ್ ಆವರಣದಲ್ಲಿರುವ ಜಿಲ್ಲಾ ತೋಟಗಾರಿಕೆ ಸಂಘದ ಕಚೇರಿಯಲ್ಲಿ ಸೆ.2ರಿಂದ 20ರವರೆಗೆ ಅರ್ಜಿಗಳನ್ನು ವಿತರಿಸಲಾಗುವುದು. ಆಸಕ್ತರು ನಿಗದಿತ ಶುಲ್ಕವನ್ನು ಗೂಗಲ್ ಪೇ, ಫೋನ್ ಪೇ, ಚೆಕ್, ಡಿಡಿ ಅಥವಾ ಇನ್ಯಾವುದೇ ರೀತಿಯ ಇ–ಪೇಮೆಂಟ್ ಮೋಡ್ ಮೂಲಕ ಮಾತ್ರ ಶುಲ್ಕ ಪಾವತಿಸಿ ತೋಟಗಳ ಸ್ಪರ್ಧೆಗೆ ಅರ್ಜಿ ಸಲ್ಲಿಸಿ ಹೆಸರು ನೋಂದಾಯಿಸಿಕೊಳ್ಳಬಹುದು. ಸೆ.25ರಿಂದ 27ರವರೆಗೆ ತೀರ್ಪುಗಾರರು ಸಂಘದ ಕಚೇರಿಯಲ್ಲಿ ನೋಂದಾಯಿಸಿಕೊಂಡ ತೋಟಗಳಿಗೆ ಭೇಟಿ ನೀಡಲಿದ್ದಾರೆ. ಮಾಹಿತಿಗೆ ದೂ.ಸಂ.: 0821–2977572 ಸಂಪರ್ಕಿಸಬಹುದು.

ಸೆ.13, ರಾಜ್ಯಾದ್ಯಂತ ‘ವಿಕಾಸ ಪರ್ವ’ ಚಿತ್ರ ಬಿಡುಗಡೆ

ಮೈಸೂರು, ಸೆ.1(ಜಿಎ)–ಸದಭಿರುಚಿಯ ಕಥೆಯುಳ್ಳ ‘ವಿಕಾಸ ಪರ್ವ’ ಚಲನಚಿತ್ರ ಸೆ.13ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಿರ್ದೇಶಕ ಅನ್ಬು ಅರಸ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ಮೂರು ಹಾಡುಗಳಿವೆ. ಸುಮಾರು 35 ದಿನ ಚಿತ್ರೀಕರಣ ನಡೆದು ಪೂರ್ಣಗೊಂಡಿದೆ. ಭೌತಿಕವಾಗಿ ನಾವು ವಿಕಸನ ಹೊಂದಿದರೂ ಮಾನಸಿಕವಾಗಿ ಹಿಂದುಳಿದಿದ್ದೇವೆ. ಎಲ್ಲರ ಕುಟುಂಬದಲ್ಲಿಯೂ ಸಮಸ್ಯೆಗಳು ಬರುತ್ತವೆ. ಇದರಿಂದ ಹೊರಬರುವುದು ಹೇಗೆ ಎಂಬ ಎಳೆಯ ಮೇಲೆ ಚಿತ್ರ ಸಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಿತ್ರ ತಂಡದ ಸ್ವಾತಿ, ಅಶ್ವಿನ್ ಹಾಸನ್, ಕೆ.ಎಸ್. ಅಮಿತ್, ರೋಹಿತ್ ನಾಗರಾಜ್, ವಿಶ್ರುತ್ ನಾಯಕ್ ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳಿಂದ ಸನ್ಮಾನ...



ಶ್ರೀ ಸುತ್ತೂರು ಮಠದಲ್ಲಿ ನಡೆದ ರಾಜೇಂದ್ರ ಶ್ರೀಗಳ ಜಯಂತಿ ಮಹೋತ್ಸವದ ಸಂದರ್ಭದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಏರ್ಪಡಿಸಿದ್ದ ‘ಮೇರಿ ಮಿಟ್ಟಿ ಮೇರಾ ದೇಶ್’ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡಿದ್ದ ಜೆಎಸ್‌ಎಸ್ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿ ಆರ್.ಕಿರಣ್ ಮತ್ತು ಕು.ಎಸ್.ಎಂ.ಅನನ್ಯ ಅವರನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿ, ಆಶೀರ್ವದಿಸಿದರು.

ಎಂ.ಕೆ.ಸೋಮಶೇಖರ್‌ಗೆ ಅಭಿನಂದನೆ...


ಮೈಸೂರು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿಗೆ ಎಂ.ಡಿ. ಫಾರುಖ್, ಶ್ರೀಮತಿ ಲೀಲಾ ಪಂಪಾವತಿ, ಗುಣಶೇಖರ್, ಕೆ.ಸೋಮು (ಸೋಮಣ್ಣ) ನಾಮ ನಿರ್ದೇಶನಗೊಂಡಿದ್ದು, ತಮ್ಮ ನೇಮಕಕ್ಕೆ ಕಾರಣರಾದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.09.2024 ಸೋಮವಾರ, ಮಳೆ ನಕ್ಷತ್ರ: ಪುಬ್ಬ, 31.08.2024ರಿಂದ 12.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಮಖ, ರಾಹುಕಾಲ : ಬೆಳಗ್ಗೆ 7.30ರಿಂದ 9ರವರೆಗೆ

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸಂಜೆ 7.30 ಗಂಟೆಗೆ ಗೌರಿ ಅಮಾವಾಸ್ಯೆ ಪ್ರಯುಕ್ತ ಪ್ರಾಂಗಣದ ಉತ್ಸವ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ‘ಬಂಜೆತನ, ಮುಟ್ಟಿನ ಸಮಸ್ಯೆ’ ಹಾಗೂ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಓಟಿಕೇರ್ ಸ್ಪೀಚ್ ಅಂಡ್ ಹಿಯರಿಂಗ್ ಹಾಸ್ಪಿಟಲ್:** ಉಚಿತ ಕಿವಿ ಪರೀಕ್ಷೆ, ಸ್ಥಳ: ಓಟಿಕೇರ್ ಆಸ್ಪತ್ರೆ, ರಾಮಾನು ರಸ್ತೆ, ಅಗ್ರಹಾರ, ಬೆಳಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಅರಿವು ಸಂಶೋಧನಾ ವಿದ್ಯಾರ್ಥಿ ವೇದಿಕೆ :** ಪ್ರಬಂಧ ಮಂಡನಾ ಕಾರ್ಯಕ್ರಮ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಮುಖ್ಯ ಅತಿಥಿ: ಮೈಸೂರು ವಿವಿ ಹಣಕಾಸು ಅಧಿಕಾರಿ ಶ್ರೀಮತಿ ರೇಖಾ ಕೆ.ಎಸ್., ಖ್ಯಾತ ವಿಮರ್ಶಕ ಡಾ.ಹೆಚ್.ಎಸ್.ಸತ್ಯನಾರಾಯಣ, ಸ್ಥಳ: ಸಮಿತಿಯ ಕೊಠಡಿ, ಬೆಳಗ್ಗೆ 11 ಗಂಟೆಯಿಂದ

■ **ನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ, ಮೈಸೂರು ಆರ್ಟ್ ಗ್ಯಾಲರಿ :** ಹಿರಿಯ ಚಿತ್ರ ಕಲಾವಿದರಾದ ಎಲ್.ಶಿವಲಿಂಗಪ್ಪನವರು ರಚಿಸಿರುವ ಅತ್ಯಮೂಲ್ಯವಾದ ವಚನಧಾಂತ ಚಿತ್ರಗಳು, ಸಾಂಸ್ಕೃತಿಕ ನಗರಿ ಮೈಸೂರಿನಿಂದ ಸಾಹಿತ್ಯದ ತವರೂರು ಧಾರವಾಡಕ್ಕೆ, ಸಾನಿಧ್ಯ: ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸ್ಥಳ: ನಂಜರಾಜ ಸಭಾ ಭವನ, ಶಂಕರ ಮಠದ ರಸ್ತೆ, ಬೆಳಗ್ಗೆ 11 ಗಂಟೆಯಿಂದ.

■ **ಹಿರಿಯ ನಾಗರಿಕರ ಮಂಡಲಿ:** ಮಾಸಿಕ ಸರಣಿಯ ಭಾಗವಾಗಿ ಉಪನ್ಯಾಸ ಕಾರ್ಯಕ್ರಮ, ಮೆಡಿವೆವ್ ಫರ್ಟಿಲಿಟಿ ರಿಸರ್ಚ್ ಆಸ್ಪತ್ರೆ ವೈದ್ಯ ಡಾ.ಸಿ.ವಿ.ಶರತ್‌ಕುಮಾರ್ ಅವರಿಂದ ಉತ್ತಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ವಿಷಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಹಿರಿಯ ನಾಗರಿಕ ಮಂಡಳಿಯ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು, ಸ್ಥಳ: ಸರಸ್ವತಿ ಸಮುದಾಯ ಭವನ, ಹಿರಿಯ ನಾಗರಿಕರ ಮಂಡಳಿ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಸಮಾರೋಪ ಕಾರ್ಯಕ್ರಮ, ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಅವರಿಂದ ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ ವಿಷಯ ಕುರಿತು ಉಪನ್ಯಾಸ, ಸ್ಥಳ: ಪುಟ್ಟರಾಜಪ್ಪ, ಅಕ್ಕ ಮಹಾದೇವಿ ಪುತ್ಥಳಿ ಆವರಣ, ಸಂಜೆ 5.30ಕ್ಕೆ

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿದುಷಿ ಧರಿತ್ರಿ ಆನಂದರಾವ್ ಅವರಿಂದ ವಾಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣ ಮಾಸದ ಪ್ರಯುಕ್ತ ಏಕದಶ ರುದ್ರಾಭಿಷೇಕ, ಕುಂಕುಮಾರ್ಚನೆ, ಪಂಸಮಾಪ್ತಿ, ಸ್ಥಳ: ಆಶ್ರಮದ ಆವರಣ, ಬೆಳಗ್ಗೆಯಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಸೆಪ್ಟೆಂಬರ್ ತಿಂಗಳ ಮೊದಲ ಸಂಗೀತ ಕಾರ್ಯಕ್ರಮ, ವಿ। ಅನನ್ಯಾ ರಾಮಾನುಜಮ್ ಅವರಿಂದ ಗಾಯನ, ವಿ। ಪೃಥ್ವಿ ಭಾಸ್ಕರ್–ಪಿಟೀಲು, ವಿ। ಜಿ.ಎಸ್.ರಾಮಾನುಜನ್–ಮೃದಂಗ, ವಿ। ವಿ.ಎಸ್.ರಮೇಶ್–ಘಟ, ಸ್ಥಳ: ಶ್ರೀ ರಾಮಮಂದಿರ, ಜಯನಗರ, ಸಂಜೆ 6ರಿಂದ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ, ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಅಮೃತಾ ನಿತಿನ್ ಶಾಸ್ತ್ರಿ, ಪಿ. ಸುರಭಿ, ವ್ಯಾಖ್ಯಾನ: ಡಾ.ಲತಾ ಮೈಸೂರು, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಕನ್ನಡ ಚಿತ್ರಗೀತೆಗಳು, 9.05–ಸಾರ್ಕೋಮ ಜಾಗೃತಿ ಕುರಿತು ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10–ನೆನಪಿನಂಗಳ ಧ್ವನಿ ಭಂಡಾರದಿಂದ, 1. ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಎಂ.ಎನ್.ಪಾರ್ವತಮ್ಮ ಅವರೊಂದಿಗೆ ಮಂಜುಳಾ ಪುರಾಣಿಕ್ ನಡೆಸಿದ್ದ ಸಂವಾದ 2. ಸ್ವಾತಂತ್ರ್ಯದ ಚೇತನ ಗಾಂಧೀಜಿ–ಅಗರಂ ರಂಗಯ್ಯ ಅವರ ಭಾಷಣದ ಧ್ವನಿಮುದ್ರಣ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಲಾಜಿ ಶಂಕರ್–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, 12.05 ವನಿತಾ ವಿಹಾರ, 12.30–ದೇವರನಾಮ–ಇಂದ್ರಾಣಿ ಅನಂತ ರಾವ್, 12.45–ನಮ್ಮ ಆರೋಗ್ಯ: ರಾಷ್ಟ್ರೀಯ ದೃಷ್ಟಿದಾನ ಪಾಕ್ಷಿಕದ ಸಂದರ್ಭದಲ್ಲಿ ‘ನೇತ್ರದಾನ ಮಹಾದಾನ’ ಕುರಿತು ಮಂಡ್ಯ ಜಿಲ್ಲೆ ಬೆಳ್ಳೂರಿನ ಆದಿಚುಂಚನ ಗಿರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಕಣ್ಣಿನ ವಿಭಾಗದ ಪ್ರೊಫೆಸರ್ ಡಾ.ಪ್ರಕಾಶ್ ಡಿ.ಎನ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಪ್ರಭುಸ್ವಾಮಿ ಮಳಿಮಠ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು, ಸೌಮ್ಯ ಬಿ.ಪಿ, 2.40–ಚಿತ್ರಗೀತೆಗಳು, 3.00– ಕರ್ನಾಟಕ ಶಾಸ್ತ್ರೀಯ ಸಂಗೀತ: ಗೀತಾ ವೈ.ಪುಟ್ಟಿ–ಹಾಡುಗಾರಿಕೆ, 4.00–ಮಹಿಳಾರಂಗ: “ನಾನು ನನ್ನ ಕಂಪನಿ” ಕೈಗಾರಿಕಾ ಸುರಕ್ಷತಾ ಉತ್ಪನ್ನಗಳ ತಯಾರಿಕಾ ಘಟಕದ ಉದ್ಯಮಿ ಶ್ರೀನಿಧಿ ಮೂರ್ತಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಶಾಂತಾ. ಡಿ. ಕಿಣಿ, 6.50–ಕೃಷಿರಂಗ: ಸಂಸ್ಕೃತ ಸಾಹಿತ್ಯದಲ್ಲಿ ಕೃಷಿಯ ಉಲ್ಲೇಖ. ಈ ಕುರಿತು ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಂಶೋಧನಾ ಸಹಾಯಕರಾದ ಡಾ.ದಿಡಗಿ ವಂಶೀಕೃಷ್ಣ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಲಸಾಯಿ ಬಿ.ವಿ. – ಕೊಳಲು, 10.00–ನಾಟಕ – “ಬಲಿಪಶು” ರಚನೆ–ಡಾ.ಎಲ್. ಮಂಜುನಾಥ್ ಹಾಗೂ ಡಾ.ಕೆ.ಸತ್ಯನಾರಾಯಣ, ನಿರ್ಮಾಣ, ಪ್ರಭುಸ್ವಾಮಿ ಮಳಿಮಠ್, 10.30–ಸವಿನೆನಪು.

ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಟೋಲ್ ಸಂಗ್ರಹಕ್ಕೆ

ಫಾಸ್ಟ್‌ಟ್ಯಾಗ್ ಬದಲು ಶೀಘ್ರವೇ ಗ್ಲೋಬಲ್ ನ್ಯಾವಿಗೇಷನ್ ಸೆಟ್‌ಲೈಟ್ ನೂತನ ವ್ಯವಸ್ಥೆ



ಮೈಸೂರು, ಸೆ.1(ಆರ್‌ಕೆ)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಫಾಸ್ಟ್‌ಟ್ಯಾಗ್ ಮೂಲಕ ಟೋಲ್ ಸಂಗ್ರಹಿಸುತ್ತಿರುವ ವಿಧಾನವನ್ನು ಶೀಘ್ರ ಗ್ಲೋಬಲ್ ನ್ಯಾವಿಗೇಷನ್ ಸೆಟಲೈಟ್ ವ್ಯವಸ್ಥೆಗೆ (GNSS) ಪರಿವರ್ತನೆಗೊಳಿಸಲು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI)ದ ಅಂಗ ಸಂಸ್ಥೆಯಾದ ದೆಹಲಿ ಮೂಲದ ಭಾರತ ಹೆದ್ದಾರಿಗಳ ನಿರ್ವಹಣಾ ಕಂಪನಿ ಲಿಮಿಟೆಡ್ (IHMCL) ಮುಂದಾಗಿದೆ.

ವಾಹನಗಳು ಸಂಚರಿಸಿದ ಅಂತರಕ್ಕೆ ಟೋಲ್ ಫೀ ಪಾವತಿಸಬೇಕಾದ ಮೊತ್ತವನ್ನು ಜಿಎನ್‌ಎಸ್‌ಎಸ್ ಪದ್ಧತಿಯು ಸ್ವಯಂಚಾಲಿತವಾಗಿ ಲೆಕ್ಕಾಚಾರ ಮಾಡಲಿದೆ. ಅದರಿಂದ ಟೋಲ್ ಬೂತ್ ಬಳಿ ವಾಹನಗಳು ಸರದಿ ಸಾಲಿನಲ್ಲಿ ನಿಂತು ಆ ಮೂಲಕ ವಾಹನ ಸಂಚಾರ ದಟ್ಟಣೆಯಾಗುವುದು ತಪ್ಪುತ್ತದೆ. ಹೊಸ ನ್ಯಾವಿಗೇಷನ್ ಸಿಸ್ಟಂ ಜಾರಿಗೆ ಈಗಾಗಲೇ ಹೆದ್ದಾರಿಯ ಟೋಲ್ ಪ್ಲಾಜಾಗಳಲ್ಲಿ ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಲಾಗಿದ್ದು, ಅದರ ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಹರಿಯಾಣದ ಪಾಣಿಪಟ್–ಹಿಸಾರ ರಾಷ್ಟ್ರೀಯ ಹೆದ್ದಾರಿ 709 ಮತ್ತು ಕರ್ನಾಟಕದ ಹೆದ್ದಾರಿಗಳನ್ನು ಈ ಹೊಸ ವ್ಯವಸ್ಥೆಯಡಿ ತರಲು ಪೈಲಟ್ ಯೋಜನೆಯಾಗಿ ಆಯ್ಕೆ ಮಾಡಲಾಗಿದೆ. ಒಮ್ಮೆ ಅನುಮೋದನೆಯಾದಲ್ಲಿ ಹೆದ್ದಾರಿಗಳ ಟೋಲ್ ಸಂಗ್ರಹಣೆಗೆ ಜಿಎನ್‌ಎಸ್‌ಎಸ್ ಅನ್ನು ಬಳಸಲಾಗುತ್ತದೆ.

ಟ್ರಯಲ್ಸ್: ಪೂರ್ಣ ಪ್ರಮಾಣದಲ್ಲಿ ಈ ವ್ಯವಸ್ಥೆ ಅಭಿವೃದ್ಧಿಗೊಳಿಸುವ ಮೊದಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಚಾಲನೆ ಮಾಡಿ ನೈಜ ಸ್ಥಿತಿಯ ಕುರಿತು ಹಾಗೂ ಅದರ ಪರಿಣಾಮದ ಬಗ್ಗೆ ಸಮೀಕ್ಷೆ ನಡೆಸಲಾಗುವುದು ಎಂದು ಐಹೆಚ್‌ಎಂಸಿಎಲ್ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಜಿಎನ್‌ಎಸ್‌ಎಸ್ ವ್ಯವಸ್ಥೆ ಅಭಿವೃದ್ಧಿಪಡಿಸಿ ಜಾರಿಗೊಳಿಸಲು ಐಹೆಚ್‌ಎಂಸಿಎಲ್ 2024ರ ಜೂನ್ ಮಾಹೆಯಲ್ಲಿ ಇನೋವೇಟಿವ್ ಕಂಪನಿಗಳಿಂದ ಗ್ಲೋಬಲ್ ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್ (EOI)ಆಹ್ವಾನಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಟೆಕ್ನಾಲಜಿ ಅಸೆಸ್‌ಮೆಂಟ್: ಮೈಸೂರು–ಬೆಂಗಳೂರು ಹೆದ್ದಾರಿಯ ಮೇನ್ ಕಾರಿಡಾರ್ ಮತ್ತು ಎರಡೂ ಬದಿಯ ಸರ್ವಿಸ್ ರಸ್ತೆಗಳಲ್ಲಿ ಟೆಕ್ನಾಲಜಿ ಪರೀಕ್ಷೆ ಮತ್ತು ಪೈಲಟ್ಸ್ ನಡೆಸಲಾಗಿದ್ದು, ಆಗು–ಹೋಗುಗಳ ಬಗ್ಗೆ, ಮೊದಲ ಹಂತದಲ್ಲಿ ಟೋಲ್ ಸಂಗ್ರಹದ ವ್ಯವಸ್ಥೆ ಅಳವಡಿಸುವ ಕುರಿತು ತಾಂತ್ರಿಕ ಪರೀಕ್ಷೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೂತನ ಟೋಲ್ ಸಂಗ್ರಹ ವಿಧಾನ ಅನುಷ್ಠಾನಗೊಳಿಸಲು ಮುಂದೆ ಬರುವ ಕಂಪನಿಗಳು ಮೌಲ್ಯಮಾಪನ ಮಾಡಿ ತಮ್ಮ ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್‌ನೊಂದಿಗೆ ಟೋಲ್ ಸಂಗ್ರಹ ಸಾಫ್ಟ್‌ವೇರ್, ಯೋಜನೆ ಹಾಗೂ ಇತರ ವಿವರಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕಿದೆ.

ಈ ಯೋಜನೆಯನ್ನು ವಿಶ್ವದ ಕೆಲವೇ ರಾಷ್ಟ್ರಗಳು ಅನುಷ್ಠಾನಗೊಳಿಸಿದ್ದು, ಅಭಿವೃದ್ಧಿ ಹೊಂದಿದ ದೇಶಗಳು ಇನ್ನಷ್ಟೆ ಅಳವಡಿಸಿಕೊಳ್ಳಬೇಕಿದೆ. ಆದರೆ ನಾವು ಬಹಳ ಎಚ್ಚರದಿಂದ ಪ್ರಕ್ರಿಯೆ ನಡೆಸುತ್ತಿದ್ದೇವೆ ಎಂದು ಐಹೆಚ್‌ಎಂಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹೈಬ್ರಿಡ್ ಮಾದರಿ: ನಗದು ರೂಪದ ವಹಿವಾಟಿಲ್ಲದೇ ಟೋಲ್ ಪ್ಲಾಜಾಗಳಲ್ಲಿ ವಾಹನಗಳು ಸರಾಗವಾಗಿ ಮುಂದೆ ಹೋಗಲು ಅನುಕೂಲವಾಗುವಂತೆ ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್ ಟೆಕ್ನಾಲಜಿಯನ್ನು ಏಕಕಾಲದಲ್ಲಿ ಕಾರ್ಯನಿರ್ವಹಿಸುವಂತೆ ಫಾಸ್ಟ್ ಟ್ಯಾಗ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಆದರೆ ಹೊಸ ಹೈಬ್ರಿಡ್ ಮಾದರಿಯ ಆರ್‌ಎಫ್‌ಐಡಿ ಆಧಾರದ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಲು ಐಹೆಚ್‌ಎಂಸಿಎಲ್ ಯೋಜಿಸುತ್ತಿದೆ. ಈಗ ಟೋಲ್ ಪ್ಲಾಜಾಗಳಲ್ಲಿ ಜಿಎನ್‌ಎಸ್‌ಎಸ್ ಮಾರ್ಗಗಳನ್ನು ಅಳವಡಿಸಿ ಹೊಸ ಸಿಸ್ಟಂ ಜಾರಿಗೊಳಿಸಲಾಗುವುದು ಎಂದು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಫಾಸ್ಟ್‌ಟ್ಯಾಗ್ ಸಿಸ್ಟಂಗಿಂತ ಉತ್ತಮ: ಹೆದ್ದಾರಿಯಲ್ಲಿ ಸಂಚರಿಸಿದ ಅಂತರಕ್ಕನುಗುಣವಾಗಿ ವಾಹನಗಳ ಟೋಲ್ ಶುಲ್ಕ ಸಂಗ್ರಹಿಸುವ ಜಿಎನ್‌ಎಸ್‌ಎಸ್ ಸಿಸ್ಟಂ ಪ್ರಸ್ತುತ ಚಾಲ್ತಿಯಲ್ಲಿರುವ ಫಾಸ್ಟ್‌ಟ್ಯಾಗ್ ವ್ಯವಸ್ಥೆಗಿಂತ ಉತ್ತಮವಾಗಿದೆ. ವಾಹನಗಳ ಸಂಚಾರ ಆಧರಿತ ಸೆಟ್‌ಲೈಟ್ ಆಧಾರದ ಟೋಲ್ ಶುಲ್ಕ ಲೆಕ್ಕಾಚಾರ ನಿಖರತೆಯನ್ನು ದೃಢಪಡಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದುಬಾರಿ ಟೋಲ್ ಸಂಗ್ರಹಿಸಲಾಗುತ್ತಿದೆ ಎಂದು ಹಾಲಿ ವ್ಯವಸ್ಥೆಯನ್ನು ಸ್ಥಳೀಯ ರೈತರು ಹಾಗೂ ಸರಕು ಸಾಗಾಣೆದಾರರು ಆರಂಭದಿಂದಲೂ ದೂರುತ್ತಲೇ ಬಂದಿದ್ದರು. ಈಗ ಸಂಚಾರದ ಅಂತರಕ್ಕನುಗುಣವಾಗಿ ಟೋಲ್ ಸಂಗ್ರಹಿಸುವ ವಿಧಾನದಿಂದ ಇಂತಹ ಗೊಂದಲಕ್ಕೆ ತೆರೆ ಎಳೆಯಬಹುದಾಗಿದೆ.

ಮೂಲಸೌಕರ್ಯಕ್ಕೆ ಮೊದಲ ಆದ್ಯತೆ

- ಶಾಸಕ ಹರೀಶ್‌ಗೌಡರಿಂದ ವಿವಿಧ ಕಾಮಗಾರಿಗೆ ಚಾಲನೆ
- ಕುಕ್ಕರಹಳ್ಳಿಯ 13 ಫಲಾನುಭವಿಗಳಿಗೆ ತಿಂಗಳಲ್ಲಿ ಹಕ್ಕುಪತ್ರ



ಚಾಮರಾಜ ಕ್ಷೇತ್ರದ 21ನೇ ವಾರ್ಡ್‌ನಲ್ಲಿ ಪ್ರಗತಿ ಕಾಲೋನಿ ಯೋಜನೆಯಡಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡರು ಚಾಲನೆ ನೀಡಿದರು.

ಮೈಸೂರು, ಸೆ.1(ಎಸ್‌ಬಿಡಿ)– ಮೂರು ದಶಕಗಳ ದೂರದೃಷ್ಟಿಯೊಂದಿಗೆ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಮೂಲಸೌಕರ್ಯ ಕಲ್ಪಿಸುವುದು ನನ್ನ ಆದ್ಯತೆಯಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಗತಿ ಕಾಲೋನಿ ಅಭಿವೃದ್ಧಿ ಯೋಜನೆಯಡಿ ಚಾಮರಾಜ ಕ್ಷೇತ್ರದ 21ನೇ ವಾರ್ಡ್‌ನಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಂದಿನ 30 ವರ್ಷಗಳು ಕ್ಷೇತ್ರದಲ್ಲಿ ಮೂಲಸೌಕರ್ಯಕ್ಕೆ ತೊಂದರೆಯಾಗದಂತೆ ದೂರದೃಷ್ಟಿಯೊಂದಿಗೆ ಕೆಲಸ ಮಾಡುತ್ತೇನೆ. ಕುಕ್ಕರಹಳ್ಳಿಯ 13 ಮನೆಗಳಿಗೆ ಹಕ್ಕುಪತ್ರ ನೀಡುವ ಸಂಬಂಧ ಪಾಲಿಕೆ ಆಯುಕ್ತರನ್ನೇ ಸ್ಥಳಕ್ಕೆ ಆಹ್ವಾನಿಸಿ, ಸಮಸ್ಯೆ ಇತ್ಯರ್ಥಕ್ಕೆ ಸೂಚಿಸಿದ್ದೇನೆ. ಒಂದು ತಿಂಗಳಲ್ಲಿ ಫಲಾನುಭವಿಗಳಿಗೆ ಹಕ್ಕು ಪತ್ರ ಸಿಗಲಿದೆ. ಒಟ್ಟಾರೆ ನನಗೆ ಸಿಕ್ಕ ಅವಕಾಶದಲ್ಲಿ ಪ್ರಾಮಾಣಿಕವಾಗಿ ಸಾಧ್ಯವಾದಷ್ಟು ಅಭಿವೃದ್ಧಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

2 ಕೋಟಿ ಕಾಮಗಾರಿ: 21ನೇ ವಾರ್ಡ್‌ನ ಕುದುರೆಮಾಳ ಹಾಗೂ ಕುಕ್ಕರಹಳ್ಳಿಯಲ್ಲಿ ದೊಡ್ಡ ಮಳೆ ನೀರು ಚರಂಡಿ, ಸೋಲಾರ್ ಸ್ಟ್ರೀಟ್ ಲೈಟ್, ಚೈನ್ ಲಿಂಕ್ ಅಳವಡಿಕೆ, ಎಲ್ ಶೇಪ್ ಚರಂಡಿ, ರಸ್ತೆ ಅಭಿವೃದ್ಧಿ ಹಾಗೂ ಒಳ ಚರಂಡಿ, ಕುಡಿಯುವ ನೀರಿನ ಪೈಪ್ ಅಳವಡಿಕೆ, ಸಿಸಿ ರಸ್ತೆ ಅಭಿವೃದ್ಧಿ ಸೇರಿದಂತೆ ಅಂದಾಜು 2 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು. ಇದೇ ವೇಳೆ ಕುಕ್ಕರಹಳ್ಳಿ ರಂಗಮಂಟಪ ಹಾಗೂ ಅಂಬೇಡ್ಕರ್ ಸಮುದಾಯ ಭವನದ ಒಂದನೇ ಮಹಡಿ ಕಟ್ಟಡವನ್ನು ಉದ್ಘಾಟಿಸಿದರು.

ಈ ವೇಳೆ ಕಾಂಗ್ರೆಸ್‌ನ ವಾರ್ಡ್ ಅಧ್ಯಕ್ಷ ವಿಶ್ವನಾಥ್, ಮುಖಂಡರಾದ ಸುಧೀರ್, ಮಂಚಯ್ಯ, ಪುರುಷೋತ್ತಮ್, ಸುಧೀರ್ ಮತ್ತಿತರರು ಉಪಸ್ಥಿತರಿದ್ದರು.

ರೈಲ್ವೆ ಹಳಿ ಬ್ಯಾರಿಕೇಡ್‌ಗೆ ಸಿಲುಕಿ ನಲುಗಿದ ಆನೆ ರಕ್ಷಣೆ



ಮೈಸೂರು, ಸೆ.1(ಎಸ್‌ಬಿಡಿ)– ಆಹಾರ ಅರಸಿ ಹೋಗುವಾಗ ರೈಲ್ವೆ ಹಳಿ ಬ್ಯಾರಿಕೇಡ್‌ಗೆ ಸಿಲುಕಿ ಒದ್ದಾಡುತ್ತಿದ್ದ ಆನೆಯನ್ನು ಅರಣ್ಯ ಸಿಬ್ಬಂದಿ ರಕ್ಷಿಸಿದ್ದಾರೆ.

ಮದ್ದೂರು ವ್ಯಾಪ್ತಿಯಲ್ಲಿ ಎರಡು ಆನೆಗಳು ಅರಣ್ಯದಂಚಿನ ಜಮೀನಿಗೆ ನುಗ್ಗಲು ಮುಂದಾಗಿವೆ. ಒಂದು ಆನೆ ರೈಲ್ವೆ ಹಳಿ ಬ್ಯಾರಿಕೇಡ್ ದಾಟಿ ಜಮೀನಿಗೆ ನುಗ್ಗಿದೆ. ಆದರೆ ಅದನ್ನು ಹಿಂಬಾಲಿಸುತ್ತಿದ್ದ ಮತ್ತೊಂದು ಆನೆ ಬ್ಯಾರಿಕೇಡ್ ಅಡಿಯಲ್ಲಿ ನುಸುಳಲು ಹೋಗಿ ಸಿಲುಕಿಕೊಂಡಿದೆ. ಮುಂದಕ್ಕೂ ಹೋಗಲಾಗದೇ, ಹಿಂದಕ್ಕೂ ಬರಲಾಗದೇ ಒದ್ದಾಡಿದೆ.

ಇದೇ ವೇಳೆ ಉರುಳು ಬಲೆ ಪತ್ತೆಗಸ್ತಿನಲ್ಲಿದ್ದ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಸಿಬ್ಬಂದಿ ಬ್ಯಾರಿಕೇಡ್‌ನಡಿ ಸಿಲುಕಿದ್ದ ಆನೆಯನ್ನು ನೋಡಿದ್ದಾರೆ. ಅದು ಬಿಡುಗಡೆಯಾದರೆ ತಮಗೇ ಅಪಾಯ ಎಂಬ ಆತಂಕವಿದ್ದರೂ ಆನೆಯ ಜೀವ ಉಳಿಸಲು ಮುಂದಾಗಿದ್ದಾರೆ. ಬ್ಯಾರಿಕೇಡ್ ರೇಲಿಂಗ್‌ನ ಒಂದು ಭಾಗವನ್ನು ಬಿಚ್ಚಿ ಸಡಿಲಗೊಳಿಸುವ ಮೂಲಕ ಸುಮಾರು 45 ವರ್ಷದ ಆನೆಯನ್ನು ರಕ್ಷಿಸಿದ್ದಾರೆ.

ಈ ಘಟನೆ ಬಗ್ಗೆ ಬಂಡೀಪುರ ಹುಲಿ ಸಂರಕ್ಷಿತಾರಣ್ಯದ ಕ್ಷೇತ್ರ ನಿರ್ದೇಶಕ (ಡಿಸಿಎಫ್) ಪ್ರಭಾಕರನ್ ಪ್ರತಿಕ್ರಿಯಿಸಿ, ವನ್ಯಜೀವಿಗಳನ್ನು ರಕ್ಷಿಸುವ ಮತ್ತು ಉಳಿಸುವುದು ನಮ್ಮ ಜವಾಬ್ದಾರಿ ಮತ್ತು ಬದ್ಧತೆಯ ಭಾಗವಾಗಿದೆ. ತಮ್ಮ ಪ್ರಾಣವನ್ನು ಪಣಕ್ಕಿಟ್ಟು ರೈಲ್ವೆ ಬ್ಯಾರಿಕೇಡ್‌ನಲ್ಲಿ ಸಿಲುಕಿದ್ದ ಆನೆಯನ್ನು ರಕ್ಷಿಸಿದ ನಮ್ಮ ಅರಣ್ಯ ಕಾಲಾಳುಗಳನ್ನು ಪ್ರಶಂಸಿಸುತ್ತೇವೆ ಎಂದರು.

ಕಬ್ಬಿಣದ ರ್‍ಯಾಕ್ ಬಡಿದು ವೆಲ್ಡರ್ ಸಾವು

ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲು



ಮೈಸೂರು, ಸೆ.1(ಎಸ್‌ಬಿಡಿ)– ಕಬ್ಬಿಣದ ರ್‍ಯಾಕ್ ಬಡಿದು ವೆಲ್ಡರ್ ಮೃತಪಟ್ಟಿರುವ ಘಟನೆ ಮೈಸೂರಿನ ಕಾರ್ಖಾನೆಯೊಂದರ ಆವರಣದಲ್ಲಿ ಭಾನುವಾರ ಸಂಭವಿಸಿದೆ.

ಬೆಲವತ್ತ ನಿವಾಸಿ ಮಹೇಶ್ (36) ಮೃತಪಟ್ಟವರಾಗಿದ್ದು, ಘಟನೆಗೆ ಗುತ್ತಿಗೆದಾರರ ನಿರ್ಲಕ್ಷ್ಯವೇ ಕಾರಣ ಎಂದು ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಟಗಳ್ಳಿಯ ಕೆಆರ್‌ಎಸ್ ರಸ್ತೆಯಲ್ಲಿರುವ ಮೈಪಾಲ್ ಕಾರ್ಖಾನೆ ಆವರಣದಲ್ಲಿ ಸೋಮವಾರ ಬೆಳಗ್ಗೆ ಈ ಘಟನೆ ಸಂಭವಿಸಿದೆ. ಕಬ್ಬಿಣದ ರ್‍ಯಾಕ್ ಅನ್ನು ವೆಲ್ಡ್ ಮಾಡಿ, ಒಳಾಂಗಣಕ್ಕೆ ಸ್ಥಳಾಂತರಿಸಲು ಕಾರ್ಖಾನೆಯವರು ಗುತ್ತಿಗೆದಾರರಿಗೆ ವಹಿಸಿದ್ದರು. ಈ ಕೆಲಸಕ್ಕೆ ಗುತ್ತಿಗೆದಾರರು ಮೂರ್‍ನಾಲ್ಕು ಕಾರ್ಮಿಕರನ್ನು ಕರೆದುಕೊಂಡು ಹೋಗಿದ್ದರು. ಬೃಹತ್ ರ್‍ಯಾಕ್ ಅನ್ನು ಟ್ರ್ಯಾಲಿ ಮೂಲಕ ಸಾಗಿಸುವ ವೇಳೆ ಅದು ಕಳಚಿ ವೆಲ್ಡರ್ ಮಹೇಶ್ ಮೇಲೆ ಬಿದ್ದಿದೆ. ತಲೆಗೆ ತೀವ್ರ ಪೆಟ್ಟು ಬಿದ್ದ ಕಾರಣ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಮಹೇಶ್ ಅವರ ಪತ್ನಿ ನೀಡಿದ ದೂರಿನನ್ವಯ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಮೇಟಗಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕುಟುಂಬದವರ ಆಕ್ರಂದನ: ಕುಟುಂಬದ ಆಧಾರಸ್ತಂಭವನ್ನೇ ಕಳೆದುಕೊಂಡ ಮಹೇಶ್ ಪತ್ನಿ ಹಾಗೂ ಇಬ್ಬರು ಮಕ್ಕಳು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದ ಬಳಿ ರೋದಿಸಿದರು. ಮಂಗಳವಾರ ಅಮಾವಾಸ್ಯೆ ಕೆಲಸ ಸಿಗುವುದೋ ಇಲ್ಲವೋ ಎಂದು ಇಂದು ಗುತ್ತಿಗೆದಾರರ ಮೂಲಕ ಕೆಲಸಕ್ಕೆ ಹೋಗಿದ್ದರು. ಆದರೆ ಗುತ್ತಿಗೆದಾರರು ಸುರಕ್ಷಿತ ಕ್ರಮ ಕೈಗೊಳ್ಳದೆ ನಿರ್ಲಕ್ಷಿಸಿದ್ದೇ ಇದಕ್ಕೆ ಕಾರಣ ಎಂದು ದೂರಿದರು.

ನೀರಿನ ಮಹತ್ವ ಒಳಗೊಂಡ 'ಜಲ ಸಂವೇದನೆ' ಕೃತಿ ಬಿಡುಗಡೆ

ಜೀವಜಲ ಕುರಿತು ಸಾಹಿತ್ಯ ಕೃಷಿ ಹೆಚ್ಚಬೇಕು: ಹಿರಿಯ ವಿದ್ವಾಂಸ ಪ್ರೊ.ಸಿ.ನಾಗಣ್ಣ



ಮೈಸೂರು ವಿಜಯನಗರದಲ್ಲಿನ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಡಾ.ನೀ.ಗೂ.ರಮೇಶ್ ಅವರ ಹೊಸಗನ್ನಡ ಕಾವ್ಯ 'ಜಲಸಂವೇದನೆ' ಕೃತಿಯನ್ನು ವಿದ್ವಾಂಸ ಪ್ರೊ.ಸಿ.ನಾಗಣ್ಣ ಬಿಡುಗಡೆ ಮಾಡಿದರು.

ಮೈಸೂರು, ಸೆ.1(ಎಸ್‌ಬಿಡಿ)– ಜಲವೇ ಜೀವದ್ರವ್ಯ, ಜಲವೇ ಜೀವನ. ಹಾಗಾಗಿ ನೀರಿನ ಮಹತ್ವ ಕುರಿತ ಸಾಹಿತ್ಯ ಕೃಷಿ ಹೆಚ್ಚಾಗಬೇಕು ಎಂದು ಹಿರಿಯ ವಿದ್ವಾಂಸ ಪ್ರೊ.ಸಿ.ನಾಗಣ್ಣ ಆಶಯ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯದ ಕರ್ನಾಟಕ ಸಂಘ ಹಾಗೂ ಲಗೋರಿ ಬಳಗದ ಸಹಯೋಗದಲ್ಲಿ ವಿಜಯನಗರದಲ್ಲಿನ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಡಾ.ನೀ.ಗೂ. ರಮೇಶ್ ಅವರ ಹೊಸಗನ್ನಡ ಕಾವ್ಯ 'ಜಲಸಂವೇದನೆ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

ಎಲ್ಲಾ ಪಿಹೆಚ್.ಡಿ ಸಂಶೋಧನಾ ಗ್ರಂಥಗಳೂ ಪುಸ್ತಕ ರೂಪದಲ್ಲಿ ಪ್ರಕಟವಾಗಲು ಸಾಧ್ಯವಿಲ್ಲ. ಆದರೆ ಕವಿಯಾಗಿ ಹಾಗೂ ವಿಮರ್ಶಕರಾಗಿ ಹಲವು ಕೃತಿಗಳನ್ನು ರಚನೆ ಮಾಡಿರುವ ನೀ.ಗೂ. ರಮೇಶ್ ಅವರ ಸಂಶೋಧನಾ ಗ್ರಂಥ ಜಲಸಂವೇದನೆ ಪುಸ್ತಕ ರೂಪದಲ್ಲಿ ಓದುಗರ ಕೈಸೇರಿದೆ. ಜಲಮಾಲಿನ್ಯ, ಜಲಕ್ಷಾಮ ಹಾಗೂ ಜಲಜಾಗೃತಿಯ ಬಗ್ಗೆ ವಿಶ್ಲೇಷಣೆ ಮಾಡಿರುವ ಇಂತಹ ಕೃತಿಗಳು ಸಮಾಜಕ್ಕೆ ಅಗತ್ಯವಾಗಿ ಬೇಕಿವೆ ಎಂದು ಅಭಿಪ್ರಾಯಿಸಿದರು.

ಈ ಕೃತಿಯಲ್ಲಿರುವ ಆರು ಅಧ್ಯಾಯಗಳಲ್ಲಿ ಜಲದ ಅರ್ಥ ಮತ್ತು ರೂಪ ಸೇರಿದಂತೆ ವಿವಿಧ ಆಯಾಮಗಳನ್ನು ವಿಶ್ಲೇಷಿಸಿದ್ದಾರೆ. ಕಾವ್ಯರೂಪದಲ್ಲಿ ಜಲಚಕ್ರವನ್ನು ಮನದಟ್ಟು ಮಾಡಿದ್ದಾರೆ. ಕೃತಿಕಾರರಲ್ಲಿ ಬೌದ್ಧಿಕ ಪಕ್ವತೆ ಜೊತೆಗೆ ಭಾಷಾ ಪ್ರೌಢಿಮೆ ಇದೆ. ಮೊದಲ ಪ್ರಧಾನಿ ದಿವಂಗತ ಜವಾಹರ ಲಾಲ್ ನೆಹರು ಅವರ ಬಗ್ಗೆ ಇತ್ತೀಚೆಗೆ ಕ್ಷುಲ್ಲಕವಾಗಿ ಮಾತನಾಡುತ್ತಾರೆ. ಆದರೆ ಗಂಗಾ ನದಿಯ ಬಗ್ಗೆ ಅವರ ಆಪ್ತತೆಯ ಮಾತುಗಳನ್ನೊಮ್ಮೆ ಕೇಳಬೇಕು. ಜೀವಜಲದ ಬಗ್ಗೆ ಇಂತಹ ಮಹನೀಯರ ವಿಶ್ಲೇಷಣೆ ಜೊತೆಗೆ ಜಲದ ಬಗ್ಗೆ ಜಾಗೃತಿ ಮೂಡಿಸುವ ಸಾಹಿತ್ಯ ಕೃಷಿ ಹೆಚ್ಚಬೇಕು ಎಂದರು.

ಒಳ್ಳೆ ಕೆಲಸಕ್ಕೆ ತಡವೇಕೆ: ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮಾತನಾಡಿ, ವಯಸ್ಸು ನಮ್ಮನ್ನು ಕಾಯೋದಿಲ್ಲ. ಹಾಗಾಗಿ ಒಳ್ಳೆಯ ಕೆಲಸ ಮಾಡಲು ಆತುರ ಇರಬೇಕು. ಮನಸ್ಸಿನ ಆರೋಗ್ಯಕ್ಕೆ ಪೂರಕವಾದ ಇಂತಹ ಸಾಹಿತ್ಯದ ಕೆಲಸಗಳು ವಿಳಂಬವಾಗಬಾರದು. ನೀರು ಒಂದು ಶಕ್ತಿ. ಇದು ಬದುಕಿಗೆ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ನೀರಿನ ಬಗ್ಗೆ ಹಲವರು ಬರೆದಿದ್ದಾರೆ. ಹಾಗೆಯೇ ಭರವಸೆಯ ಬರಹಗಾರ ರಮೇಶ್ ಕೂಡ, ಉತ್ತಮ ಕೃತಿಯನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಬಣ್ಣಿಸಿದರು.

ಸುಧಾರಣೆಗೆ ಮನವಿ: ಮೈಸೂರಿನ ಸಾಹಿತ್ಯ ಭವನವನ್ನು ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ನಿ.ಗಿರೀಗೌಡರು ಬಹಳ ವರ್ಷಗಳ ಹಿಂದೆಯೇ ಕಟ್ಟಿಕೊಟ್ಟಿದ್ದಾರೆ. ಕಟ್ಟಡಕ್ಕೂ ಜೀವ, ಹೃದಯ ಹಾಗೂ ಮನಸ್ಸಿದೆ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಸ್ಥಾಯಿ ಭಾವವನ್ನು ಸುಂದರಗೊಳಿಸುವುದು ಸಂಚಾರಿ ಭಾವ. ಹಾಗಾಗಿ ನಮ್ಮ ಮಾತುಗಳು ನಮಗೇ ಕೇಳಿಸದಿದ್ದರೆ ಮಾತು ಮುಂದುವರೆಸುವುದು ಕಷ್ಟ. ವೇದಿಕೆಯಲ್ಲಿ ಆಡುವ ಮಾತುಗಳು ಎಲ್ಲರಿಗೂ ಸ್ಪಷ್ಟವಾಗಿ ಕೇಳುವಂತಹ ವಾತಾವರಣ ನಿರ್ಮಾಣವಾಗಬೇಕು. ಭವನದ ಆವರಣ ಸುಂದರವಾಗಿರಬೇಕು. ಇದನ್ನು ಸಾಕಾರಗೊಳಿಸುವ ಸಾಮರ್ಥ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರಿಗಿದೆ ಎಂದರು.

ಸಮಾರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎ.ರಂಗಸ್ವಾಮಿ, ಮೈಸೂರು ವಿವಿ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ, ಲೇಖಕ ಡಾ.ನೀ.ಗೂ. ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ; ಮೈಸೂರಲ್ಲಿ ವಿಶೇಷ ಮ್ಯಾರಥಾನ್



ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಆಯೋಜಿಸಿದ್ದ ಮ್ಯಾರಥಾನ್‌ಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಮಾಜಿ ಸಚಿವ ಸಾ.ರಾ.ಮಹೇಶ್, ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಕೋಚ್ ರವಿ ಮತ್ತಿತರರಿದ್ದರು.

ಮೈಸೂರು, ಸೆ.1(ಎಂಟಿವೈ)– ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಮೈಸೂರಲ್ಲಿ ಭಾನುವಾರ ವಿಶೇಷ ಮ್ಯಾರಥಾನ್ ಆಯೋಜಿಸಲಾಗಿತ್ತು.

ಇಂಡಿಯನ್ ಅಥ್ಲೆಟಿಕ್ಸ್ ಸೇರಿದಂತೆ ಕೆಲ ಸಂಘಟನೆಗಳ ಸಹಯೋಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಆಯೋಜಿಸಿದ್ದ ಮ್ಯಾರಥಾನ್‌ಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಪ್ರತಿಯೊಬ್ಬರ ಜೀವನದಲ್ಲೂ ಕ್ರೀಡೆ ಅವಿಭಾಜ್ಯ ಅಂಗವಾಗಿರಬೇಕು. ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಈ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣವೂ ಸಾಧ್ಯ ಹಾಗಾಗಿ ಬಾಲ್ಯಾವಸ್ಥೆಯಲ್ಲೇ ಕ್ರೀಡಾಸಕ್ತಿ ಮೂಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್, 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಅಥ್ಲೆಟಿಕ್ ಕೋಚ್ ರವಿ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಸೈನಿಕರು, ಹಿರಿಯ ನಾಗರಿಕರು ಸೇರಿದಂತೆ ನೂರಾರು ಮಂದಿ ಮ್ಯಾರಥಾನ್‌ನಲ್ಲಿ ಭಾಗವಹಿಸಿ, ಕ್ರೀಡಾಪ್ರೇಮ ವ್ಯಕ್ತಪಡಿಸಿದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನೀವು ಯಾವ ಸೋಪ್ ಬಳಸ್ತೀರಿ?
ಗುಂಡ : ಆಯುಷ್ ಸೋಪ್.
ಡಾಕ್ಟರ್ : ಪೇಸ್ಟ್? ಶಾಂಪೂ?
ಗುಂಡ : ಆಯುಷ್ ಪೇಸ್ಟ್, ಆಯುಷ್ ಶಾಂಪೂ
ಡಾಕ್ಟರ್ : ಅರೆ... ಅದ್ಯಾವುದು ಇಷ್ಟು ದೊಡ್ಡ ಬ್ರಾಂಡ್‌ನ ಆಯುಷ್ ಕಂಪನಿ?
ಗುಂಡ : ಆಯುಷ್ ನನ್ನ ರೂಮ್‌ಮೇಟ್...

ಮೈಸೂರು ಮಿತ್ರ

ಸೋಮವಾರ, 2 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಕಳೆದುಕೊಂಡ ಮೇಲೆ ಗೊತ್ತಾಗುತ್ತೆ ಅದು ಎಷ್ಟು ಮುಖ್ಯವಾಗಿತ್ತು ಅಂತ... ಸಮಯ, ವ್ಯಕ್ತಿ ಮತ್ತು ಸಂಬಂಧ;

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ದುಡಿಯುವ ಗಂಡಸು, ಬಸುರಿ ಹೆಂಗಸು ನೋಡಲು ಚಂದ'

ನಿಮ್ಮ ಪತ್ರಗಳು

ಹುಟ್ಟುಹಬ್ಬಗಳು ಸಮಾಜಮುಖಿಯಾಗಿರಲಿ

ಮಾನ್ಯರೆ,

ಹುಟ್ಟುಹಬ್ಬ ಮಾಡಿಕೊಳ್ಳಿ ಸಂತೋಷ. ಹುಟ್ಟುಹಬ್ಬಕ್ಕೆ ಹಾಕುವ ಫ್ಲೆಕ್ಸ್‌ಗಳು, ಬಂಟಿಂಗ್ಸ್‌ಗಳು ನಗರದ ತುಂಬೆಲ್ಲಾ ಎಲ್ಲಾ ಲೈಟ್ ಕಂಬಗಳಲ್ಲಿ, ಸರ್ಕಲ್‌ಗಳಲ್ಲಿ ಹಾಕುವ ಮೂಲಕ ಹಣವು ಖರ್ಚಾಗುತ್ತದೆ. ನಗರದ ಅಂದವೂ ಕೆಡುತ್ತದೆ. ಅನಾಹುತಗಳು ಆಗುತ್ತವೆ. ಇದೇ ಹಣವನ್ನು ಸಮಾಜಮುಖಿ ಕಾರ್ಯಗಳಿಗೆ ಬಳಸಿಕೊಳ್ಳಬಹುದಲ್ಲ. ಬಡ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ನೀಡುವ ಮೂಲಕ ಅವಶ್ಯಕತೆ ಇರುವ ಅನಾಥಾಲಯಗಳಿಗೆ ಅವಶ್ಯಕತೆ ಇರುವ ಸೌಲಭ್ಯ ಒದಗಿಸುವ ಮೂಲಕ, ಜೈಲಿನಲ್ಲಿ ಮುಕ್ತಿ ಹೊಂದಲು ಹಣ ಕಟ್ಟಲಾಗದೆ ಜೈಲಲ್ಲೇ ಅಸಹಾಯಕರಾಗಿರುವವರಿಗೆ ಸಹಾಯಹಸ್ತ ಚಾಚುವ ಮೂಲಕ ಅಂಗವಿಕಲರಿಗೆ ಸಹಾಯಹಸ್ತ ನೀಡುವ ಮೂಲಕ ನಿಮ್ಮ ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ನಿಮ್ಮ ಹುಟ್ಟುಹಬ್ಬವನ್ನು ಸಾರ್ಥಕಪಡಿಸಿಕೊಳ್ಳಬಹುದಲ್ಲವೆ? ಈ ಸೇವೆಗಳನ್ನು ಪ್ರಚಾರದ ಮೂಲಕವೇ ಮಾಡಿ ಅದಕ್ಕೆ ಒಂದು ಸಾರ್ಥಕತೆ ಇರುತ್ತದೆ. ಸಹಾಯ ಪಡೆದವರಲ್ಲೂ ಧನ್ಯತಾಭಾವ ಇರುತ್ತದೆ. ಇದನ್ನು ಬಿಟ್ಟು ಬೀದಿ, ಬೀದಿಗಳಲ್ಲಿ, ಸರ್ಕಲ್‌ಗಳಲ್ಲಿ, ಲೈಟ್ ಕಂಬಗಳಲ್ಲಿ ಫ್ಲೆಕ್ಸ್ ಹಾಕುವುದರಿಂದ ಯಾವ ಸಾರ್ಥಕತೆ ಕಾಣಲು ಸಾಧ್ಯ? ಯಾರು ಅದರಿಂದ ಧನ್ಯರಾಗುತ್ತಾರೆ. ಫ್ಲೆಕ್ಸ್‌ನಲ್ಲಿನ ನಿಮ್ಮ ಭಾವಚಿತ್ರ ನೋಡಿ ನಿಮಗೆ ಯಾರೂ ಮತ ಹಾಕುವುದಿಲ್ಲ. ನಿಮ್ಮ ಅಭಿಮಾನಿಗಳಾವುದಿಲ್ಲ. ನಿಮ್ಮಿಂದ ಅನುಕೂಲ ಪಡೆದವರಷ್ಟೆ ಅಭಿಮಾನಿಗಳಾಗುತ್ತಾರೆ. ಅದು ಮತವಾಗಿ ಪರಿವರ್ತನೆ ಆಗುತ್ತದೆ.

ಇತ್ತೀಚಿನ ದಿನಗಳಲ್ಲಿ ಫ್ಲೆಕ್ಸ್‌ಗಳ ಭರಾಟೆ ತೀರ ಅತಿಯಾಗಿದೆ. ಸಾಮಾನ್ಯರಿಂದ ಹಿಡಿದು ರಾಜಕಾರಣಿಗಳವರೆಗೆ ಎಲ್ಲರೂ ಫ್ಲೆಕ್ಸ್ ಹಾಕಿಸುವವರೇ. ಇದಕ್ಕೆ ಸ್ಥಳೀಯ ಆಡಳಿತ ಕಂಡು ಕಾಣದಂತಿದೆ. ಇದಕ್ಕೆಲ್ಲ ಸ್ಥಳೀಯ ಆಡಳಿತ ಕಡಿವಾಣ ಹಾಕಬೇಕು. ದಂಡ ವಿಧಿಸುವ ಮೂಲಕ ಇವನ್ನೆಲ್ಲ ನಿಯಂತ್ರಿಸಬೇಕು. ಸ್ಥಳೀಯ ಆಡಳಿತದ ಪೂರ್ವಾನುಮತಿಯಿಲ್ಲದೆ ಫ್ಲೆಕ್ಸ್‌ಗಳನ್ನು ಹಾಕುವಂತಿಲ್ಲ. ಇಷ್ಟು ಅಳತೆಯ ಇಷ್ಟು ಫ್ಲೆಕ್ಸ್‌ಗಳಿಗೆ ಶುಲ್ಕ ಇಷ್ಟೇ ಎಂದು ನಿಗದಿಯಾಗಿರುತ್ತದೆ. ಯಾರೂ ಈ ನಿಯಮವನ್ನು ಪಾಲಿಸುತ್ತಿಲ್ಲ. ಮಹಾನಗರಪಾಲಿಕೆ ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ನೆಪಮಾತ್ರಕ್ಕೆ ಒಂದಿಷ್ಟು ಶುಲ್ಕ ಪಡೆದು ಅನುಮತಿ ನೀಡುತ್ತಿದೆ. ಪಾಲಿಕೆ ಆಯುಕ್ತರು ಇತ್ತ ಗಮನಹರಿಸಬೇಕು. ನಗರಕ್ಕೆ ಮೂಲ ಸೌಲಭ್ಯ ಕೊಡುವುದು ಎಷ್ಟು ಮುಖ್ಯವೋ, ನಗರದ ಸೌಂದರ್ಯ ಕಾಪಾಡುವುದು ಅಷ್ಟೇ ಮುಖ್ಯ.

–ಬಿ.ಜಿ.ರಂಗೇಗೌಡ, ವಿಜಯನಗರ, ಮೈಸೂರು.

ಕೇಂದ್ರ ಸರ್ಕಾರದಿಂದ ಅಕ್ಕಿ ರಾಜಕೀಯ

ಮಾನ್ಯರೆ,



ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಪ್ರಹ್ಲಾದ್ ಜೋಷಿ ಅವರು, ಹಣ ನೀಡಿದರೆ ಕರ್ನಾಟಕಕ್ಕೆ ಎಷ್ಟು ಬೇಕಾದರೂ ಅಕ್ಕಿ ನೀಡಲು, ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಇತ್ತೀಚೆಗೆ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ.

ಕಳೆದ ಒಂದು ವರ್ಷದ ಹಿಂದೆ, ರಾಜ್ಯ ಸರ್ಕಾರ, ಕೆ.ಜಿ.ಗೆ ರೂ.28ರಂತೆ ಹಣ ನೀಡುತ್ತೇವೆ, ರಾಜ್ಯಕ್ಕೆ ಅಕ್ಕಿ ನೀಡಿ ಎಂದು, ಅಂಗಲಾಚಿ ಗೋಗರೆದು ಬೇಡಿಕೊಂಡರು. ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿ ದಾಸ್ತಾನು ಇಲ್ಲದೇ ಇರುವುದರಿಂದ, ಕರ್ನಾಟಕಕ್ಕೆ ಅಕ್ಕಿ ನೀಡಲು ಸಾಧ್ಯವಿಲ್ಲ ಎಂದು ಖಡಾ–ಖಂಡಿತವಾಗಿ ಹೇಳಿತ್ತು. ಈಗ ನೋಡಿದರೆ ಎಷ್ಟು ಬೇಕಾದರೂ ಅಕ್ಕಿ ನೀಡಲು ಸಿದ್ಧವಿದೆ ಎನ್ನುತ್ತಾರೆ. ಆಗ ಅಕ್ಕಿ ನೀಡದಿರಲು ಪ್ರಮುಖ ಕಾರಣವೆಂದರೆ, ಲೋಕಸಭಾ ಚುನಾವಣೆ ಮುಂದಿದ್ದರಿಂದ, ಕಾಂಗ್ರೆಸ್ ಪಕ್ಷ, ತಾನು ಅಧಿಕಾರಕ್ಕೆ ಬಂದರೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದ ತಲಾ 10 ಕೆ.ಜಿ. ಅಕ್ಕಿ ಭರವಸೆಯನ್ನು ಸುಳ್ಳು ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ರಾಜ್ಯಕ್ಕೆ ಅಕ್ಕಿ ನೀಡದಿರಲು ನಿರ್ಣಯ ಕೈಗೊಂಡು, ತಿನ್ನುವ ಅಕ್ಕಿ ವಿಷಯದಲ್ಲೂ ರಾಜಕೀಯ ಮಾಡಿತ್ತು. ಈಗ ಕೇವಲ ಒಂದು ವರ್ಷದೊಳಗೆ ಸಾಕಷ್ಟು ಪ್ರಮಾಣದಲ್ಲಿ ಅಕ್ಕಿ ದಾಸ್ತಾನು ಇರಲು ಸಾಧ್ಯವೇ? ಕಳೆದ ವರ್ಷ ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ಭತ್ತ ಬೆಳೆಯುವ ಪ್ರದೇಶಗಳಲ್ಲಿ ಇಳುವರಿಯೂ ಕಡಿಮೆ ಆಗಿದೆ. ನಿಮ್ಮ ರಾಜಕಾರಣ ಏನೇ ಇರಲಿ, ಆದರೆ ಬಡವರು ತಿನ್ನುವ ಅಕ್ಕಿ ವಿಚಾರದಲ್ಲಿ ರಾಜಕಾರಣ ಮಾಡುವುದು ನಿಮಗೆ ಶೋಭೆಯಲ್ಲ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ಅಭಿವೃದ್ಧಿಯಲ್ಲಿ ಹಿಂದುಳಿದ ಗ್ರಾಮ

ಮಾನ್ಯರೆ,

ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ಚಿದರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಬೋಳೇಗೌಡನಹುಂಡಿಯು ಅಭಿವೃದ್ಧಿಯಲ್ಲಿ ಹಿಂದುಳಿದಿಯತೇ..? ಹೌದು. ಗ್ರಾಮದ ಮುಖ್ಯ ರಸ್ತೆಗಳಲ್ಲಿ ಗಿಡಗಳು ಬೆಳೆದು ನಿಂತಿದೆ. ಸರಿಯಾದ ಮೋರಿ (ಡ್ರೈನೇಜ್) ವ್ಯವಸ್ಥೆ ಇಲ್ಲದೆ, ಮಳೆನೀರು ತುಂಬಾ ದಿನದಿಂದ ನಿಂತು, ಸೊಳ್ಳೆಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಇದೆ. ಗ್ರಾಮದ ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳು, ಗರ್ಭಿಣಿ ಸ್ತ್ರೀಯರು, ಹಿರಿಯ ನಾಗರಿಕರು ಪ್ರತಿದಿನ ಭಯದಿಂದ ಬದುಕು ಸಾಗಿಸುತ್ತಿದ್ದಾರೆ. ಕೆಲ ವಿದ್ಯುತ್ ಕಂಬಗಳಲ್ಲಿ ವಿದ್ಯುತ್ ದೀಪಗಳಿದ್ದರೆ, ಕೆಲ ವಿದ್ಯುತ್ ಕಂಬಗಳಲ್ಲಿ ದೀಪಗಳಿಲ್ಲದೆ ರಾತ್ರಿ ವೇಳೆ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಶಾಸಕರು ಮತ್ತು ಸಂಸದರು ಕೂಡಲೇ ಗ್ರಾಮ ಪಂಚಾಯಿತಿ ಅನುದಾನವನ್ನು ಗ್ರಾಮ ಅಭಿವೃದ್ಧಿಯ ಅಧಿಕಾರಿಗಳು ಮತ್ತು ಪಂಚಾಯ್ತಿ ಸದಸ್ಯರು ಸಮರ್ಪಕವಾಗಿ ಬಳಕೆ ಮಾಡಿ ಈ ಗ್ರಾಮದ ಸ್ವಚ್ಛತೆಯೊಂದಿಗೆ ಅಭಿವೃದ್ಧಿ ಮಾಡಲು ಮುಂದಾಗಲು ಸೂಚಿಸಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಶಿಕ್ಷಕ ಅನುದಿನವೂ ವಿದ್ಯಾರ್ಥಿಯೇ!



"ಕೇವಲ ಪಠ್ಯವನ್ನು ಬೋಧಿಸಿದರಷ್ಟೇ ನಮ್ಮ ಕೆಲಸ ಮುಗಿಯಿತು ಎಂದು ಶಿಕ್ಷಕರು ಅಂದುಕೊಳ್ಳುವುದು ಸರಿಯಲ್ಲ. ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಯುವಂತೆ ಮಾಡುವುದು, ಉತ್ತಮ ಜೀವನ ನಡೆಸುವಂತೆ ಪ್ರೋತ್ಸಾಹಿಸುವುದು, ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ಆತ್ಮವಿಶ್ವಾಸ ತುಂಬುವುದು ಸಹ ಶಿಕ್ಷಕರ ಹೊಣೆಗಾರಿಕೆಯಾಗಿರುತ್ತದೆ.

ವರ್ಣ ಮಾತ್ರಂ ಕಲಿಸಿದಾತಂ ಗುರು– ಒಂದು ಅಕ್ಷರವನ್ನು ಕಲಿಸಿದವನು ಕೂಡ ಗುರು ಎನಿಸಿಕೊಳ್ಳುತ್ತಾನೆ.
ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ಚಕ್ಷುರುನ್ಮೀಲಿತಂಯೇನ ತಸ್ಮೈ ಶ್ರೀ ಗುರವೇ ನಮಃ – ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾಗಿರುವವನಿಗೆ ಜ್ಞಾನವೆಂಬ ಅಂಜನದ ಕಡ್ಡಿಯಿಂದ ಬೆಳಕ ನೀಡಿ ಅಂಧಕಾರವನ್ನು ಹೋಗಲಾಡಿಸುವವನೇ ಗುರು

ವಿಶ್ವದಾದ್ಯಂತ ವಿಶ್ವ ಶಿಕ್ಷಕರ ದಿನಾಚರಣೆಯನ್ನು ಅಕ್ಟೋಬರ್ 5ರಂದು ಆಚರಿಸಲಾಗುತ್ತದೆ. ಆದರೆ ಭಾರತದಲ್ಲಿ ಮಾತ್ರ ಶಿಕ್ಷಕರ ದಿನಾಚರಣೆಯನ್ನು ಸೆಪ್ಟಂಬರ್ ಐದರಂದೇ ಆಚರಿಸಲಾಗುತ್ತದೆ. ಮೊದಲು ಶಿಕ್ಷಕರಾಗಿ ಅಪಾರ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರವಾಗಿದ್ದ ಹಾಗೂ ಭಾರತ ದೇಶದ **ಮೊದಲ ಉಪರಾಷ್ಟ್ರಪತಿ ಮತ್ತು ಎರಡನೇ ರಾಷ್ಟ್ರಪತಿಗಳಾಗಿದ್ದ ಸರ್ವಪಲ್ಲಿ ಎಸ್.ರಾಧಾಕೃಷ್ಣನ್** ಅವರ ಜನುಮ ದಿನವಾದ ಸೆಪ್ಟಂಬರ್ ಐದನ್ನು 1962ನೇ ಇಸವಿಯಿಂದ ಶಿಕ್ಷಕರ ದಿನಾಚರಣೆಯನ್ನಾಗಿ ಭಾರತದಲ್ಲಿ ಆಚರಣೆ ಮಾಡುತ್ತಿದ್ದೇವೆ. ವಿದ್ಯೆ ಕಲಿಸಿ ಸತ್ಪ್ರಜೆಗಳನ್ನಾಗಿ ಮಾಡಿದ ಗುರುವೃಂದಕ್ಕೆ ವಿಶೇಷವಾಗಿ ಅಭಿನಂದನೆಯನ್ನು ಈ ದಿನದಂದು ಅರ್ಪಿಸುತ್ತಾ ಬಂದಿರುವುದು ಸಂತಸದ ವಿಷಯವಾಗಿದೆ.

ವಿದ್ಯಾರ್ಥಿಯೊಬ್ಬನ ಜೀವನದಲ್ಲಿ ಗುರುವಿನ ಸ್ಥಾನ ಪ್ರಮುಖವಾದುದಾಗಿರುತ್ತದೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎನ್ನುವ ನಾಣ್ಣುಡಿಯೇ ಗುರುವಿನ ಸ್ಥಾನಮಾನದ ಬಗ್ಗೆ ತಿಳಿಸುತ್ತದೆ. ವಿದ್ಯಾರ್ಥಿ ತನ್ನ ಶಿಕ್ಷಣದ ಅವಧಿಯಲ್ಲಿ ಬಹುಪಾಲು ಸಮಯವನ್ನು ಶಿಕ್ಷಕರೊಡನೆ ಕಳೆಯುವುದರಿಂದ ಅವರಿಂದ ಹೆಚ್ಚು ಪ್ರೇರಣೆಗೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

ಶಿಕ್ಷಕ ಮೊದಲು ವಿದ್ಯಾರ್ಥಿಯಾಗಿರಬೇಕು. ಅಂದರೆ ವಿದ್ಯಾರ್ಥಿಗಳ ಹಾಗೆ ಕಲಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರಬೇಕು. ಕಲಿಕೆ ನಿರಂತರವಾದುದು. ಆದ್ದರಿಂದ ತಾನು ಕಲಿಯದೆ ವಿದ್ಯಾರ್ಥಿಗಳಿಗೆ ಕಲಿಸಲು ಹೋಗಬಾರದು. ತರಗತಿಗೆ ಸಿದ್ಧನಾಗದೆ ಹೋಗಬಾರದು ಈ ಮಾತನ್ನು ಹೇಳುವಾಗ ಜಿ.ಪಿ.ರಾಜರತ್ನಂ ಹೇಳಿದ ಮಾತು ಎನ್ನಲಾದ ಒಂದಂಶ ನೆನಪಿಗೆ ಬರುತ್ತದೆ. ತರಗತಿಗೆ ಹೋಗುವ ಮೊದಲು ಸಿದ್ಧನಾಗು, ಆ ವಿಷಯವನ್ನು ಚೆನ್ನಾಗಿ ಓದು, ಟಿಪ್ಪಣಿ ಮಾಡಿಕೊಂಡು ಹೋಗು. ತರಗತಿ ಮುಗಿದ ನಂತರ ಆ ಟಿಪ್ಪಣಿಗಳನ್ನು ಹರಿದು ಹಾಕು ಎಂದು ಹೇಳುವ ಮುಖಾಂತರ ಪ್ರತಿ ಬಾರಿಯೂ ಟಿಪ್ಪಣಿಗಳನ್ನು ಮಾಡಿಕೊಂಡು, ಓದಿಕೊಂಡು ಸಿದ್ಧನಾಗಿ ತರಗತಿಗೆ ಹೋಗು, ಸಿದ್ಧನಾಗದೆ ಯಾವುದೇ ಸಮಯದಲ್ಲಿಯೂ ತರಗತಿಗೆ ಹೋಗಬೇಡ ಎಂಬ ಸಂದೇಶವನ್ನು ತಿಳಿಸಿ ಪ್ರತಿಯೊಬ್ಬ ಶಿಕ್ಷಕನ ಜವಾಬ್ದಾರಿ ಏನೆಂಬುದನ್ನು ತಿಳಿಸಿದ್ದಾರೆ.

ಒಂದು ಕಟ್ಟಡ ನಿರ್ಮಾಣವಾಗಬೇಕಾದರೆ ಅದಕ್ಕೆ ಅಡಿಪಾಯ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ವಿದ್ಯಾರ್ಥಿಯೊಬ್ಬ ಉತ್ತಮ ಪ್ರಜೆಯಾಗಿ ಸಮಾಜದಲ್ಲಿ ಬಾಳಬೇಕಾದರೆ ಶಿಕ್ಷಕನ ಪಾತ್ರವೂ ಪ್ರಮುಖವಾದುದಾಗಿರುತ್ತದೆ. ಹೇಳುವುದು ಒಂದು, ಮಾಡುವುದು ಮತ್ತೊಂದು ಎಂಬಂತೆ ಶಿಕ್ಷಕರ ನಡವಳಿಕೆ ಇರಬಾರದು. ನುಡಿದಂತೆ ನಡೆಯುವ, ನಡೆಯುವಂತೆ ನುಡಿಯುವ ಶಿಕ್ಷಕರನ್ನು ವಿದ್ಯಾರ್ಥಿಗಳು ಹೆಚ್ಚೆಚ್ಚು ಇಷ್ಟಪಡುತ್ತಾರೆ. ಇದನ್ನು ಹೇಳುವಾಗ ಎರಡು ಘಟನೆಗಳು ನನಗೆ ನೆನಪಿಗೆ ಬರುತ್ತದೆ.

ಘಟನೆ ಒಂದು: ಹೊಸಗನ್ನಡದ ಅಶ್ವಿನಿ ದೇವತೆಗಳು ಎಂದೇ ಪ್ರಸಿದ್ಧರಾದವರು ಎ.ಆರ್.ಕೃಷ್ಣಶಾಸ್ತ್ರಿ ಮತ್ತು ಟಿ.ಎಸ್.ವೆಂಕಣ್ಣಯ್ಯ.

ಎ.ಆರ್.ಕೃಷ್ಣಶಾಸ್ತ್ರಿಗಳು ತಮ್ಮ ವಿದ್ಯಾರ್ಥಿಗಳ ಮೇಲೆ ಪ್ರೀತಿ, ವಾತ್ಸಲ್ಯವನ್ನು ತೋರುವ ಗುಣಕ್ಕೆ ಪ್ರಸಿದ್ಧರಾಗಿದ್ದವರು. ಒಮ್ಮೆ ಕುವೆಂಪು ಅವರು ಎಂ.ಎ ಓದಲು ತತ್ವಶಾಸ್ತ್ರ ವಿಷಯ ಆಯ್ಕೆಮಾಡಿಕೊಂಡಿರುವುದನ್ನು ತಿಳಿದ ಕೃಷ್ಣಶಾಸ್ತ್ರಿಗಳು ನಮಗೀಗ ನಿಮ್ಮಂಥ ವಿದ್ಯಾರ್ಥಿಗಳು ಬೇಕಾಗಿದ್ದಾರೆ. ತತ್ವಶಾಸ್ತ್ರಕ್ಕಿಂತ (ಫಿಲಾಸಫಿಗಿಂತ) ಕನ್ನಡಕ್ಕೆ ನಿಮ್ಮ ಅವಶ್ಯಕತೆ ಹೆಚ್ಚು ಎಂದು ಹೇಳಿ ಕುವೆಂಪು ಅವರು ಕನ್ನಡ ಎಂ.ಎ ಓದುವಂತೆ ಪ್ರೇರೇಪಿಸಿದರು. ಮುಂದೆ ಕುವೆಂಪು ಕನ್ನಡದಲ್ಲಿ ಬೆಳೆದ ಎತ್ತರ, ಮಾಡಿದ ಸಾಧನೆ ಎಲ್ಲರಿಗೂ ತಿಳಿದಿದೆ. ಇಷ್ಟೇ ಅಲ್ಲ ಶುಲ್ಕ ಕಟ್ಟಲು ಆಗದಿರುವ ಕೆಲವು ವಿದ್ಯಾರ್ಥಿಗಳಿಗೆ ತಾವೇ ಶುಲ್ಕವನ್ನು ಕಟ್ಟಿ ಅವರ ಓದಿಗೆ ಸಹಾಯ ಮಾಡುತ್ತಿದ್ದರಂತೆ. ತಮ್ಮ ವಿದ್ಯಾರ್ಥಿಗಳ ಹಿತವನ್ನು ಬಯಸುವ ಇಂತಹ ಶಿಕ್ಷಕರಿದ್ದರೆ ಖಂಡಿತವಾಗಿಯೂ ಹೊಸ ಬದಲಾವಣೆಯನ್ನು ಬಯಸಬಹುದು.

ನೋಡಿ ಒಬ್ಬ ಗುರು ತನ್ನ ಶಿಷ್ಯನಿಗಾಗಿ ಮಾಡಿದ ಈ ಮಹಾನ್ ಕಾರ್ಯವನ್ನು ಓದಿದರೆ ಶಿಕ್ಷಕರ ಮೇಲಿರುವ ಗೌರವ ದುಪ್ಪಟ್ಟಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಇಷ್ಟೇ ಅಲ್ಲ ಹನ್ನೆರಡನೇ ಶತಮಾನದಲ್ಲಿದ್ದ ಅಲ್ಲಮಪ್ರಭು ಗುರು ಶಿಷ್ಯರ ನಡುವಿನ ಸಂಬಂಧದ ಬಗ್ಗೆ ಬರೆದಿರುವ ವಚನ ಗುರು–ಶಿಷ್ಯರ ಸಂಬಂಧಕ್ಕೆ ಅದ್ಭುತ ಸಾಕ್ಷಿ.

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು
ಬುದ್ಧಿಯ ಕಲಿಸಿದರೆ ಆಗಲಿ
ಮಹಾಪ್ರಸಾದವೆಂದೆನಯ್ಯ....
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು
ಬುದ್ಧಿಯ ಕಲಿಸಿದರೆ ಆಗಲಿ
ಮಹಾಪ್ರಸಾದವೆಂದೆನಯ್ಯ....
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ
ಬುದ್ಧಿಯ ಕಲಿಸಿದರೆ ಆಗಲಿ
ಮಹಾಪ್ರಸಾದವೆಂದೆನಯ್ಯ....
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ
ಬುದ್ಧಿಯ ಕಲಿಸಿದರೆ ಆಗಲಿ
ಮಹಾಪ್ರಸಾದವೆಂದೆನಯ್ಯ....
ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ
ಕಲಿತನಕ್ಕೆ ನಾ ಬೆರಗಾದೆನು.

ಕಾಲ ಬದಲಾದಂತೆ ಕಲಿಯುವವರ ಮತ್ತು ಕಲಿಸುವವರ ನಡುವೆ ವ್ಯತ್ಯಾಸ ಹೇಗೆ ಉಂಟಾಗಬಲ್ಲದು ಎಂಬುದನ್ನು ಈ ವಚನ ಮಾಹಿತಿ ನೀಡುತ್ತದೆ ಇತ್ತೀಚಿನ ಬೆಳವಣಿಗೆಯೊಂದರಲ್ಲಿ ಪತ್ರಿಕೆಯಲ್ಲಿ ಓದಿದ ಘಟನೆಯೊಂದು ಯಾವ ದಿಕ್ಕಿನಲ್ಲಿ ಶಿಕ್ಷಣ ವ್ಯವಸ್ಥೆ ಸಾಗಿದೆ–ಎತ್ತ ಸಾಗಿದೆ ನಮ್ಮ ಯುವ ಸಮುದಾಯ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿತು. ಪೋಷಕರಿಗೆ ನಿಮ್ಮ ಮಗ ಕಾಲೇಜಿಗೆ ಸರಿಯಾಗಿ ಬರುತ್ತಿಲ್ಲ, ಬುದ್ಧಿ ಹೇಳಿ ಎಂದು ಕರೆ ಮಾಡಿ ತಿಳಿಸಿದ ಉಪನ್ಯಾಸಕರನ್ನು ಹುಡುಕಿಕೊಂಡು ಬಂದು ಲಾಂಗ್ ತೋರಿಸಿ ಬೆದರಿಸಿದ ವಿದ್ಯಾರ್ಥಿಯ ಉದ್ಧಟತನವನ್ನು ನೋಡಿದರೆ ನಿಜಕ್ಕೂ ಗುರುವಿನ ಸ್ಥಾನಕ್ಕೆ ಪ್ರಸ್ತುತ ಸಿಗುತ್ತಿರುವ ಗೌರವ ಎಂತದ್ದು ಎಂಬ ಪ್ರಶ್ನೆ ಹೇಳುತ್ತದೆ.

ನಮ್ಮ ಗುರುಗಳೆಲ್ಲ ನಮ್ಮ ತಪ್ಪುಗಳನ್ನು ದಂಡನೆಯ ಮೂಲಕ ತಿದ್ದಿ ಬೆಳೆಸಿದ್ದಕ್ಕೆ ಈಗ ತಕ್ಕಮಟ್ಟಿಗೆ ಉತ್ತಮ ಜೀವನವನ್ನು ರೂಪಿಸಿಕೊಂಡಿದ್ದೇವೆ. ನಾನು ಪ್ರೌಢಶಾಲೆಯನ್ನು ಮುಗಿಸಿ ಮುಂದೆ ಏನು ಓದಬೇಕೆಂಬ ಗೊಂದಲದಲ್ಲಿದ್ದಾಗ ಮನೆಯವರ ಒತ್ತಾಸೆಗೆ ಡಿಪ್ಲೊಮಾಗೆ ಸೇರಲು ಅರ್ಜಿಯನ್ನು ನಮ್ಮ ಗುರುಗಳಾದ ಸುಬ್ಬು ಸರ್ (ಸುಬ್ಬು ಸರ್ ಕೇವಲ ಪಾಠ ಬೋಧಿಸುವ ವ್ಯಕ್ತಿಯಾಗಿರಲಿಲ್ಲ, ಬದುಕಿನ ಪಾಠವನ್ನು ಬೋಧಿಸಿದವರು, ವಿದ್ಯಾರ್ಥಿ ಹೇಗಿರಬೇಕೆಂಬ ನೀತಿಯನ್ನು ಕಲಿಸಿದವರು) ಭರ್ತಿ ಮಾಡಿ ಸಹಿ ಹಾಕಲು ಹೇಳಿದರು. ನಾನು ಲೇಖನಿ ತೆಗೆದುಕೊಂಡು ಹೋಗಿರಲಿಲ್ಲ. ವಿದ್ಯಾರ್ಥಿಯಾದವನ ಕಿಸೆಯಲ್ಲಿ (ಜೇಬಿನಲ್ಲಿ) ಲೇಖನಿ ಯಾವಾಗಲೂ ಇರಬೇಕೆಂದು ಹೇಳಿದ್ದ ನಮ್ಮ ಗುರುಗಳು ಅಂದು ನಮ್ಮ ತಾಯಿಯ ಮುಂದೆಯೇ ನನಗೆ ಕಪಾಳಮೋಕ್ಷ ಮಾಡಿದರು. ನಮ್ಮಮ್ಮನಾಗಲೀ, ನಾನಾಗಲೀ ಇದರಿಂದ ಬೇಸರ, ಕೋಪ ಮಾಡಿಕೊಳ್ಳಲಿಲ್ಲ. ಅಂದು(2004) ನಮ್ಮ ಗುರುಗಳು ದಂಡನೆಯನ್ನು ಕೊಟ್ಟು ಕಲಿಸಿದ ಪಾಠವನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದೇನೆ. ಮನೆಯಿಂದ ಹೊರಗಡೆ ಹೊರಡುವಾಗ ಏನೇ ಮರೆತರೂ ಲೇಖನಿಯನ್ನು ಮರೆಯದೇ ತೆಗೆದುಕೊಂಡು ಹೋಗುವೆ. ಗುರುಗಳು ಕಲಿಸಿಕೊಟ್ಟ ಪಾಠ ಪಠ್ಯಕ್ರಮಕ್ಕೆ ಸೀಮಿತವಾಗಿಲ್ಲ, ಬದುಕಿಗೆ ಅನ್ವಯವಾಗಿದೆ.

ಶಿಕ್ಷಕನ ಕರ್ತವ್ಯ ಎಲ್ಲರೂ ತಿಳಿದಿರುವಂತೆ ಸುಲಭವೂ ಅಲ್ಲ ಹಾಗೆಯೇ ಕಠಿಣವೂ ಅಲ್ಲ. ಇಂದಿನ ಈ ಆಧುನಿಕ ಯುಗದಲ್ಲಿ ಶಿಕ್ಷಕರು ಬದಲಾಗುತ್ತಿರುವ ಜಗತ್ತಿಗೆ ತಕ್ಕಂತೆ ತಮ್ಮನ್ನು ತಾವು ಬದಲಿಸಿಕೊಳ್ಳಬೇಕು

ಪ್ರತಿದಿನ ನಡೆಯುತ್ತಿರುವ, ಆಗುತ್ತಿರುವ ಹೊಸ ಹೊಸ ಘಟನೆಗಳನ್ನು ತಿಳಿದುಕೊಳ್ಳಬೇಕು. ಕೇವಲ ಪಠ್ಯವನ್ನಷ್ಟೇ ಬೋಧಿಸಿದರಷ್ಟೇ ಸಾಲದು. ಏಕೆಂದರೆ ಕೆಲವೊಂದು ಬಾರಿ ಶಿಕ್ಷಕ ಹೇಳುವ ವಿಷಯಕ್ಕಿಂತ ಹೆಚ್ಚು ವಿಷಯವನ್ನು ಅಂತರ್ಜಾಲವೇ ತಿಳಿಸಬಹುದು. ಆದ್ದರಿಂದ ಶಿಕ್ಷಕರಾದವರು ಕೇವಲ ಪಠ್ಯ ಪುಸ್ತಕಕ್ಕೆ ಸೀಮಿತವಾಗದೆ ವಿದ್ಯಾರ್ಥಿಗಳಲ್ಲಿ ಇರುವ ಪ್ರತಿಭೆಯನ್ನು ಗುರುತಿಸುವ ಅವರ ಆಸಕ್ತಿಗೆ ತಕ್ಕ ದಾರಿಯನ್ನು ತೋರಿಸುವ ಮಾರ್ಗದರ್ಶಕರಾಗಬೇಕು.

ಈ ಮಾತನ್ನು ಹೇಳುವಾಗ ಸತ್ಯಘಟನೆಯೊಂದು ನೆನಪಿಗೆ ಬರುತ್ತದೆ. ಗಣಿತ ತರಗತಿಯಲ್ಲಿ ಶಿಕ್ಷಕರೊಬ್ಬರು ಲೆಕ್ಕಗಳನ್ನು ಬಿಡಿಸುತ್ತಾ ವಿದ್ಯಾರ್ಥಿಗಳಿಗೆ ಬೋಧಿಸುವಾಗ ವಿದ್ಯಾರ್ಥಿಯೊಬ್ಬ ಯಾವುದೋ ಲೋಕದಲ್ಲಿ ಕಳೆದುಹೋಗಿದ್ದ. ಅವನಿಗೆ ಪಾಠದ ಕಡೆಗೆ ಗಮನ ನೀಡುವಂತೆ ಹೇಳಿದರೂ ಸಹ ಅವನಿಗೆ ಆ ಶಿಕ್ಷರು ಮಾಡಿದ ಪಾಠ ತಲೆಗೆ ಹತ್ತಲಿಲ್ಲ ಬಹುಪಾಲು ಎಲ್ಲಾ ತರಗತಿಗಳಲ್ಲೂ ಇದನ್ನೇ ಮುಂದುವರೆಸಿದ್ದ. ಆದರೆ ಒಂದು ದಿನ ಆಟದ ಮೈದಾನದಲ್ಲಿ ಆ ವಿದ್ಯಾರ್ಥಿಯ ಆಟವನ್ನು ನೋಡಿ, ಅವನು ಕ್ರಿಕೆಟ್ ಆಟದಲ್ಲಿ ತೋರಿಸುವ ಆಸಕ್ತಿಯನ್ನು ಕಂಡು ಚಕಿತರಾದರು. ಮುಂದೆ ಅವನ ಕ್ರಿಕೆಟ್ ಆಟಕ್ಕೆ ಪ್ರೋತ್ಸಾಹವನ್ನು ಕೊಟ್ಟರು. ಆ ಹುಡುಗ ಮುಂದೆ ಕ್ರಿಕೆಟ್ ದೇವರು ಎಂದು ಪ್ರಸಿದ್ಧನಾದುದು ಇತಿಹಾಸ ಆ ಹುಡುಗನೇ ಸಚಿನ್ ರಮೇಶ್ ತೆಂಡೂಲ್ಕರ್. (ಈ ವಿಷಯ ಡಾ.ಗುರುರಾಜ ಕರ್ಜಗಿ ಅವರ ಕರುಣಾಳು ಬಾ ಬೆಳಕೆ ಎಂಬ ಪುಸ್ತಕದಲ್ಲಿ ಅಡಕವಾಗಿದೆ. ಹೀಗೆ ಎಲೆಮರೆ ಕಾಯಿಯಾಗಿ ಉಳಿದಿರುವ ಎಷ್ಟೋ ಪ್ರತಿಭೆಗಳನ್ನು ಗುರುತಿಸಿ ಜಗತ್ತಿಗೆ ಪರಿಚಯಿಸುವ ಕರ್ತವ್ಯ ಶಿಕ್ಷರ ಮೇಲೆ ಇರುತ್ತದೆ.

ಕೇವಲ ಪಠ್ಯವನ್ನು ಬೋಧಿಸಿದರಷ್ಟೇ ನಮ್ಮ ಕೆಲಸ ಮುಗಿಯಿತು ಎಂದು ಶಿಕ್ಷಕರು ಅಂದುಕೊಳ್ಳುವುದು ಸರಿಯಲ್ಲ. ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಯುವಂತೆ ಮಾಡುವುದು, ಉತ್ತಮ ಜೀವನ ನಡೆಸುವಂತೆ ಪ್ರೋತ್ಸಾಹಿಸುವುದು, ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ಆತ್ಮವಿಶ್ವಾಸ ತುಂಬುವುದು ಸಹ ಶಿಕ್ಷಕರ ಹೊಣೆಗಾರಿಕೆಯಾಗಿರುತ್ತದೆ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅದಕ್ಕೆ ಪ್ರೋತ್ಸಾಹವನ್ನು ನೀಡಿದರೆ ಕೇವಲ ಹತ್ತೊಂಬತ್ತನೇ ವಯಸ್ಸಿನಲ್ಲಿ 15/20 ದಿನಗಳ ಅಂತರದಲ್ಲಿ ಓಟದ ವಿಭಾಗದಲ್ಲಿ ಸತತವಾಗಿ ಐದು ಚಿನ್ನದ ಪದಕಗಳನ್ನು ತಂದುಕೊಟ್ಟ ಹಿಮಾದಾಸ್‌ನಂತಹ ಹಲವಾರು ಪ್ರತಿಭೆಗಳು ದೇಶಕ್ಕೆ ಹೆಮ್ಮೆಯನ್ನು ತರುವಂತಹ ಸಾಧನೆಗಳನ್ನು ಮಾಡಬಲ್ಲರು.

ಎಲ್ಲಾ ಉದ್ಯೋಗಗಳಲ್ಲೂ ಸಮಸ್ಯೆಗಳು ಇರುವ ಹಾಗೆ ಶಿಕ್ಷಕರ ಹುದ್ದೆಯಲ್ಲಿಯೂ ಸಮಸ್ಯೆಗಳು ಇವೆ. ಸ್ವಲ್ಪ ಹೆಚ್ಚಾಗಿಯೇ ಇರಬಹುದು. ಸರ್ಕಾರಿ ಶಿಕ್ಷಕರಾದರೆ ವಿವಿಧ ರೀತಿಯ ಕಾರ್ಯಕ್ರಮ, ವಿವಿಧ ರೀತಿಯ ಭಾಗ್ಯಗಳ ಕೆಲಸಗಳು (ಕ್ಷೀರಭಾಗ್ಯ, ಬಿಸಿಯೂಟ ಇತ್ಯಾದಿ) ಚುನಾವಣೆಯ ಕೆಲಸ, ಮತ ಎಣಿಕೆ ಹೀಗೆ... ಇನ್ನೂ ಖಾಸಗಿ ಶಿಕ್ಷಕರ ಸಮಸ್ಯೆ ಗಳೋ ಹೇಳತೀರದು. ರಜಾ ದಿನಗಳಲ್ಲಿ ತರಗತಿ, ಪಠ್ಯಕ್ರಮ ಮುಗಿಸಬೇಕು, ಭಾನುವಾರವೂ ಕೆಲಸ, ಶೇ.100ರಷ್ಟು ಫಲಿತಾಂಶ, ಇದರ ಜೊತೆ ತಮ್ಮ ಕುಟುಂಬದ ಸಮಸ್ಯೆಗಳು. ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇಷ್ಟು ಒತ್ತಡಗಳ ನಡುವೆಯೂ ವಿಭಿನ್ನ ಮನೋಭಾವದ ವಿದ್ಯಾರ್ಥಿಗಳನ್ನು ನೋಡಿಕೊಂಡು ಅವರಲ್ಲಿರುವ ಕೆಟ್ಟ ಗುಣಗಳನ್ನು ಹೋಗಲಾಡಿಸಿ–ಕೆಲ ವೊಮ್ಮೆ ಬೈಯ್ಯುವ ಮೂಲಕ, ಕೆಲವೊಮ್ಮೆ ಹೊಡೆ ಯುವ ಮೂಲಕ. ಇತ್ತೀಚೆಗೆ ಹೊಡೆಯುವುದು ತಪ್ಪು. ನಮ್ಮ ಮಗುವನ್ನು ಹೊಡೆಯಲು ನೀವ್ಯಾರು ಎಂಬ ಪ್ರಶ್ನೆಗಳನ್ನು ಕೇಳುವ ಪೋಷಕರು ಒಂದಂಶವನ್ನು ಮರೆತಂತಿದೆ. ಶಾಲೆಯಲ್ಲಿ ಹೊಡೆಯುವುದು ಕಡಿಮೆ ಮಾಡಲಾಗಿದೆ. ಅದಕ್ಕೆ ಜೈಲಿನಲ್ಲಿ ಒದೆಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಇದರರ್ಥ ಹೊಡೆಯುವುದೇ ಸರಿ ಎಂಬ ಸಮರ್ಥನೆಯಲ್ಲ. ತಪ್ಪು ದಾರಿಯಲ್ಲಿ ನಡೆಯುವ ಮಕ್ಕಳನ್ನು ಎಚ್ಚರಿಸುವಂತದ್ದು. ಒಳ್ಳೆಯ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವುದು ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ಉತ್ತಮ ಪ್ರಜೆಗಳನ್ನು ರೂಪಿಸುವ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮಹತ್ವದಾಗಿದೆ.

ಒಬ್ಬ ಶಿಕ್ಷಕ ತನ್ನ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರೆ ಅಬ್ದುಲ್ ಕಲಾಂ, ಸಿ.ಎನ್.ಆರ್. ರಾವ್, ಹಿಮಾದಾಸ್, ಸಚಿನ್, ಕೊಹ್ಲಿ.. ಹೀಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಬಲ್ಲಂತಹ ಮಹಾನ್ ಸಾಧಕರನ್ನು ಇಡೀ ಜಗತ್ತಿಗೆ ಪರಿಚಯಿಸಬಹುದು. ಹೀಗೆ ಮಾಡಿದರೆ ಮಾತ್ರ ನಿಜಕ್ಕೂ ಶಿಕ್ಷಕರ ದಿನಾಚರಣೆ ಆಚರಣೆಗೆ ಒಂದೊಳ್ಳೆಯ ಸಾರ್ಥಕತೆ ಬಂದಂತೆ ಆಗುತ್ತದೆ. ಎಲೆಮರೆಕಾಯಿಯಂತಿದ್ದು ಅನೇಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿದೀಪವಾಗಿ ಕಾರ್ಯನಿರ್ವಹಿಸುತ್ತಿರುವ ಅಸಂಖ್ಯಾತ ನನ್ನೆಲ್ಲಾ ನೆಚ್ಚಿನ ಗುರು ವೃಂದಕ್ಕೆ ಈ ಸಂದರ್ಭದಲ್ಲಿ ಶಿರಬಾಗಿ ವಂದಿಸುವೆ.

ಮುಕ್ತ ವಿವಿಯಲ್ಲಿ ಯುಜಿಸಿ–ನೆಟ್, ಕೆ–ಸೆಟ್ ಪರೀಕ್ಷೆ ತರಬೇತಿ ಶಿಬಿರ ಉದ್ಘಾಟನೆ

ಇಂದಿನ ಬಹುತೇಕ ಅಧ್ಯಾಪಕರಲ್ಲಿ ಶಿಕ್ಷಣದ ಗುಣಮಟ್ಟ ಕಡಿಮೆ

ರಾಣಿಚೆನ್ನಮ್ಮ ವಿವಿ ಕುಲಪತಿ ಪ್ರೊ. ಸಿ.ಎಂ.ತ್ಯಾಗರಾಜು ಕಳವಳ

ಮೈಸೂರು,ಸೆ.1(ಪಿಎಂ)– ಇಂದಿನ ಬಹುತೇಕ ಅಧ್ಯಾಪಕರಲ್ಲಿ ಶಿಕ್ಷಣದ ಗುಣಮಟ್ಟ ಕಡಿಮೆಯಾಗಿದ್ದು, ಇದು ಆತಂಕಕಾರಿ ಬೆಳವಣಿಗೆ ಎಂದು ರಾಣಿಚೆನ್ನಮ್ಮ ವಿವಿ ಕುಲಪತಿ ಪ್ರೊ.ಸಿ.ಎಂ.ತ್ಯಾಗರಾಜು ಕಳವಳ ವ್ಯಕ್ತಪಡಿಸಿದರು.

ಮೈಸೂರಿನ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ವಿವಿಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಯುಜಿಸಿ–ನೆಟ್ ಮತ್ತು ಕೆ–ಸೆಟ್ ಪರೀಕ್ಷೆಗಳ ತರಬೇತಿ ಶಿಬಿರದ ಉದ್ಘಾಟನೆ ನೆರವೇರಿಸಿ, ಮಾತನಾಡಿದರು.

ಇಂದಿನ ದಿನಮಾನದಲ್ಲಿ ಓದಿ ವಿದ್ಯಾವಂತರಾಗಿ ದೇಶ ಕಟ್ಟಲು ಮುಂದಾಗುವ ವಿದ್ಯಾರ್ಥಿಗಳಿಗೆ ಒಳ್ಳೆಯ ಪ್ರಾಧ್ಯಾಪಕರು ಸಿಗುವುದು ಅಪರೂಪವಾಗಿದೆ. ಅಧ್ಯಾಪಕರು ಗುಣಮಟ್ಟ ಕಳೆದುಕೊಂಡರೆ ದೇಶದ ಯುವ ಜನರ ಪರಿಸ್ಥಿತಿ ಏನಾಗಬಹುದು. ದೇಶದ ಯುವ ಜನತೆ ಕಷ್ಟದ ಪರಿಸ್ಥಿತಿ ದಾಟುತ್ತಿದ್ದಾರೆ. ಬಹುತೇಕ ಯುವ ಜನರು ಪದವಿ ಪಡೆದಿದ್ದಾರೆ. ಆದರೆ ಕೌಶಲದ ಕೊರತೆಯಿಂದ ಅವರಿಗೆ ಉದ್ಯೋಗ ದೊರೆಯುವುದು ಕಷ್ಟವಾಗಿದೆ ಎಂದರು.



ಮೈಸೂರಿನ ಮುಕ್ತ ವಿವಿಯಲ್ಲಿ ತರಬೇತಿ ಶಿಬಿರದ ಉದ್ಘಾಟನಾ ಸಂದರ್ಭ.

ವಿದ್ಯಾರ್ಥಿಗಳು ಸಾಧನೆ ಹಾದಿಯಲ್ಲಿ ಗುರಿಮುಟ್ಟುವವರೆಗೆ ನಿಲ್ಲಬಾರದು. ತಮ್ಮ ಬದುಕಿನಲ್ಲಿ ಉನ್ನತ ಸಾಧನೆಗಳನ್ನು ಮಾಡುವ ಗುರಿಗಳನ್ನು ಹೊಂದಬೇಕು ಹಾಗೂ ಆ ಗುರಿ ಸಾಧನೆ ಹಾದಿಯಲ್ಲಿ ಯಾವುದೇ ಅಡೆತಡೆಗಳು ಬಂದರೂ ಎದೆಗುಂದದೇ, ತಮ್ಮ ನಿರೀಕ್ಷಿತ ಗುರಿ ತಲುಪುವವರೆಗೂ ಪ್ರಯತ್ನ ಮುಂದುವರೆಸಬೇಕು ಎಂದರು.

ಅರಿವನ್ನು ವಿಸ್ತಾರ ಮಾಡುವವನೇ ಗುರು. ಆ ಗುರುವಿನ ಸ್ಥಾನ ತುಂಬುವ ಅಧ್ಯಾಪಕನು ನಿಷ್ಠೆ ಹಾಗೂ ಪ್ರಾಮಾಣಿಕತೆ ಹೊಂದಿರಬೇಕು. ಯುವ ಜನರು ಓದಿ ತಮ್ಮ ಜ್ಞಾನವನ್ನು ವಿಸ್ತಾರ ಮಾಡಿಕೊಳ್ಳಬೇಕು. ಆ ಮೂಲಕ ತಮ್ಮ ಕನಸು ನನಸು ಮಾಡಿಕೊಳ್ಳಬೇಕು. ಓದು ಎಂಬುದು ನಿರಂತರ ಎಂಬ ಸತ್ಯವನ್ನು ಮೊದಲು ಅರಿಯಬೇಕು ಎಂದು ತಿಳಿಸಿದರು.

ದೇಶ ಕಟ್ಟುವ ಯುವಜನರಿಗೆ ಒಳ್ಳೆಯ ಪ್ರಾಧ್ಯಾಪಕರು ಸಿಗದೆ ನೊಂದಿದ್ದಾರೆ. ಇಂದಿನ ಶಿಕ್ಷಣ ವ್ಯವಸ್ಥೆ ಏಕೀ ಸುಲ್ತಾನ್ ಎಂಬಾಂತಾಗಿದೆ. ನೂರಾರು ವಿದ್ಯಾರ್ಥಿಗಳನ್ನು ಕೋಣೆಯೊಳಗೆ ಕೂಡಾಕಿ ಕೊಂಡು ಅವರ ಅಭಿರುಚಿಗೆ ಮನ್ನಣೆ ಇಲ್ಲದಾಗಿದೆ. ನೀವೆಲ್ಲರೂ ಮುಂದೆ ಅತ್ಯುನ್ನತ ಪ್ರಾಧ್ಯಾಪಕರಾಗಿ ಸಮಾಜಮುಖಿ ಕೆಲಸಗಳನ್ನು ಮಾಡಬೇಕು ಎಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಪ್ರಾಧ್ಯಾಪಕರು ಅಧ್ಯಾಪನ ಕುಶಲರಾಗಿರಬೇಕು, ಹೃದಯಸ್ಪರ್ಶಿಯಾಗಿರಬೇಕು. ಉದಾತ್ತ ಧ್ಯೇಯ ಹೊಂದಿರಬೇಕು. ಸತ್ಯ ಸಂಶೋಧನೆ ಮೂಲಕ ಪ್ರಚಲಿತ ಘಟನೆಯನ್ನು ವಿದ್ಯಾರ್ಥಿಗಳಿಗೆ ಹೇಳಬೇಕು. ಅಂದವಾದ ವಾಕ್ಯರಚನೆ ಮಾಡುವಂತೆ ಹೇಳಿಕೊಡಬೇಕು ಎಂದು ಹೇಳಿದರು.

ಯುಜಿಸಿ–ನೆಟ್, ಕೆ–ಸೆಟ್‌ಪರೀಕ್ಷೆ ಪಾಸಾದ ವಿದ್ಯಾರ್ಥಿಗಳು ಶ್ರದ್ಧೆ ಉಳ್ಳವರು ಹಾಗೂ ತಮ್ಮ ಗುರಿಯನ್ನು ನಿಗದಿಪಡಿಸಿಕೊಂಡಿರುವವರು. ಜೊತೆಗೆ ಪ್ರಾಮಾಣಿಕ ವಿದ್ಯಾರ್ಥಿಗಳು. ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರದ ವ್ಯವಸ್ಥೆಯು ಉತ್ತಮವಾಗಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ಅತ್ಯುನ್ನತ ಪ್ರಾಧ್ಯಾಪಕರಾಗಬೇಕು ಎಂದು ಹಾರೈಸಿದರು.

ಮುಕ್ತ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ವಿದ್ಯಾರ್ಥಿಗಳು ಓದಿನಲ್ಲಿ ಅತೀವ ಆಸಕ್ತಿ ರೂಢಿಸಿಕೊಳ್ಳಬೇಕು. ನೀವೆಲ್ಲಾ ಮುಂದಿನ ದಿನಗಳಲ್ಲಿ ಪ್ರಾಧ್ಯಾಪಕರಾಗುವವರು ನಿಷ್ಠೆಯಿಂದ ತರಗತಿಗಳನ್ನು ಬಳಸಿಕೊಂಡು ಮುಂದೆ ಪ್ರಾಧ್ಯಾಪಕರಾಗಿ ದೇಶಕ್ಕೆ ಕೊಡುಗೆ ನೀಡಬೇಕು. ಪ್ರಾಧ್ಯಾಪಕರಿಗೆ ವಿದ್ಯಾರ್ಥಿಗಳೇ ತಮ್ಮ ಮಕ್ಕಳಾಗಿರುತ್ತಾರೆ. ಹಾಗಾಗಿ ವಿದ್ಯಾರ್ಥಿಗಳು ಪ್ರಾಧ್ಯಾಪಕರಿಗೆ ಗೌರವ ನೀಡಬೇಕು ಎಂದು ತಿಳಿ ಹೇಳಿದರು.

ಕಲಬುರಗಿ ಕೇಂದ್ರೀಯ ವಿವಿಯ ಶಿಕ್ಷಣ ನಿಕಾಯದ ಡೀನ್ ಪ್ರೊ.ಜಿ.ಆರ್ ಅಂಗಡಿ ಅವರು ತರಬೇತಿ ಅಭ್ಯರ್ಥಿಗಳಿಗೆ ಶುಭಹಾರೈಸಿ ಪರೀಕ್ಷೆ ಎದುರಿಸುವ ಬಗ್ಗೆ ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು. ಅಧ್ಯಯನ ಕೇಂದ್ರದ ಡೀನ್ ಪ್ರೊ.ರಮಾನಾಥಂ ನಾಯ್ಡು, ಕುಲಪತಿಗಳ ವಿಶೇಷಾಧಿಕಾರಿ ಮಹದೇವ್, ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಸಿದ್ದೇಶ್ ಹೊನ್ನೂರ್, ಕೆ.ಜಿ.ಗಣೇಶ್ ಕೊಪ್ಪಲ್ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶರೀರ ನಿಯಂತ್ರಿಸದೇ ಇದ್ದರೆ ಜಗತ್ತು ಕೊಳಕು ಮಂಡಲವಾಗುತ್ತದೆ

- ಅಧ್ಯಾಪಕ ಹೆಚ್.ಬಿ.ಶ್ರೀಧರ್ ಅಭಿಮತ
- ಮನೆ ಮನೆಗೆ ವಚನ ಶ್ರಾವಣ ಸಂದೇಶ



ವಚನ ಶ್ರಾವಣ: ಮನೆಮನೆಗೆ ವಚನ ಶ್ರಾವಣ ಸಂದೇಶ ಕಾರ್ಯಕ್ರಮವನ್ನು ಅಧ್ಯಾಪಕ ಹೆಚ್.ಬಿ.ಶ್ರೀಧರ್ ಉದ್ಘಾಟಿಸಿದರು.

ಮೈಸೂರು, ಸೆ.1(ಎಸ್‌ಪಿಎನ್)– ಚಂಚಲವಾದ ಮನಸ್ಸು, ಗರ್ವದಿಂದ ಕೂಡಿದ ಈ ಶರೀರವನ್ನು ನಿಯಂತ್ರಿಸದಿದ್ದರೆ ಜಗತ್ತು ಕೊಳಕು ಮಂಡಲವಾಗುತ್ತದೆ ಎಂದು ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ಅಧ್ಯಾಪಕ ಹೆಚ್.ಬಿ.ಶ್ರೀಧರ್ ಅಭಿಪ್ರಾಯಪಟ್ಟರು.

ಮೈಸೂರು ಶಾರದಾದೇವಿ ನಗರದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕ, ಕದಳಿ ಮಹಿಳಾ ವೇದಿಕೆ ಸಹಯೋಗದೊಂದಿಗೆ ನಡೆದ ವಚನ ಶ್ರಾವಣ: ಮನೆಮನೆಗೆ ವಚನ ಶ್ರಾವಣ ಸಂದೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಟ್ಟಬೇಕು ಮನವ, ಮೆಟ್ಟಬೇಕು ಮದವ, ಸುಟ್ಟು ಹಾಕಬೇಕು ಸಪ್ತ ವ್ಯಸನಂಗಳ. ಆ ತೊಟ್ಟಿಲ ಮುರಿದು, ಕಣ್ಣೀರು ಹರಿದು, ಆ ಬಟ್ಟಬಯಲಲ್ಲಿ ನಿಂದಿರೆ ಎಂದು ಕೂಡಲ ಚನ್ನಬಸವಣ್ಣ ಅವರ ವಚನವನ್ನು ಉಲ್ಲೇಖಿಸಿ, ಮನುಷ್ಯನ ಮೂಲ ಉದ್ದೇಶದಲ್ಲಿ ಸುಖದ ಮೂಲಕ ಶಿವ ಸಾಕ್ಷಾತ್ಕಾರ ಪಡೆಯುವುದರ ಕುರಿತು ವಿವರಿಸಿದರು.

ಬದುಕು ಅಂದುಕೊಂಡಷ್ಟು ಸುಲಭವಿಲ್ಲ. ಏಕೆಂದರೆ ಬದುಕಿನಲ್ಲಿ ಅನೇಕ ಸಂಕಟ, ಸಮಸ್ಯೆ, ವಿಪತ್ತುಗಳು ಎದುರಾಗುವುವು. ವಿಷಯವಾಸನೆಗಳು ವ್ಯಕ್ತಿಯನ್ನು ಮುತ್ತಿಕೊಂಡು ಬಂಧಿಸುವುವು. ಆ ಬಂಧನದಿಂದ ಮುಕ್ತಿ ಪಡೆಯಲು ವಿಷಯ ವಾಸನೆಗಳೆಂಬ ತೊಟ್ಟಿಲನ್ನು ಮುರಿಯಬೇಕು ಹಾಗೂ ಭವ-ಬಂಧನಗಳಿಂದ ಮುಕ್ತಿ ಪಡೆಯಲು ಶಿವಸಾನ್ನಿಧ್ಯ ಅಗತ್ಯ ಎಂದರು.

ಈ ವೇಳೆ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಗೀತಾ ಈಶ್ವರ್, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ನಂದೀಶ್, ಶ್ವೇತಾ ಸುದರ್ಶಿನಿ, ಚಂದ್ರಪ್ಪ, ಶ್ರೀಕಂಠಯ್ಯ, ಚನ್ನಬಸಪ್ಪ ಸೇರಿದಂತೆ ಇತರರಿದ್ದರು.

ಸೆ.6ರ ಗೌರಿ ಹಬ್ಬದಂದು ಎತ್ತಿನಹೊಳೆ ಯೋಜನೆ ಉದ್ಘಾಟನೆ



ಬೆಂಗಳೂರು: ರಾಜ್ಯದ 7 ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ಕೆರೆ ತುಂಬಿಸುವ ಮಹತ್ವಾಕಾಂಕ್ಷಿಯ ಎತ್ತಿನ 'ಹೊಳೆ' ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.6ರ ಗೌರಿ ಹಬ್ಬದಂದು ಉದ್ಘಾಟಿಸಲಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.



ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಜಿಲ್ಲೆಗಳು ಈ ಯೋಜನೆಯನ್ನು ಎದುರು ನೋಡುತ್ತಿವೆ. ಅನೇಕ ನಾಯಕರು ಈ ಯೋಜನೆಗೆ ಹೋರಾಟ ಮಾಡಿದ್ದು, ಅನೇಕ ಪಕ್ಷಗಳು ಇದಕ್ಕೆ ಸಹಕಾರ ನೀಡಿವೆ. ಕಳೆದ ಒಂದು ವರ್ಷದಿಂದ ಈ ಯೋಜನೆಯನ್ನು ಸವಾಲಾಗಿ ಸ್ವೀಕರಿಸಿದ್ದೆ. ಮೊನ್ನೆಯಷ್ಟೇ ಯೋಜನೆಯ ಕಾಮಗಾರಿಗಳ ಪರೀಕ್ಷಾರ್ಥ ಕಾರ್ಯಾಚರಣೆ ಯಶಸ್ವಿಯಾಗಿರುವುದಾಗಿ ತಿಳಿಸಿದರು.

ಈ ಯೋಜನೆಯಲ್ಲಿ ನೀರನ್ನು ಪಂಪ್ ಮಾಡುವ ಮೂಲಕ ಕಾಲುವೆಗಳಿಗೆ ಹರಿಸುತ್ತಿದ್ದೇವೆ. ಈ ಯೋಜನೆ ಮಾರ್ಗದ ಮಧ್ಯೆ ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗಗಳಲ್ಲಿ ಸ್ವಲ್ಪ ಸಮಸ್ಯೆ ಇದ್ದು, ಅವುಗಳನ್ನು ಬಗೆಹರಿಸಿದ್ದೇವೆ. ಈ ಜಾಗ ಹಸ್ತಾಂತರವಾದ ಬಳಿಕ ಪ್ರಮುಖ ಕಾಲುವೆಗಳಿಗೆ ನೀರು ಹರಿಯಲಿವೆ. ಈಗ ತಾತ್ಕಾಲಿಕವಾಗಿ ವಾಣಿ ವಿಲಾಸ ಅಣೆಕಟ್ಟೆಗೆ ನೀರು ಹರಿಸಲಾಗುತ್ತಿದೆ. ಯೋಜನೆಯ 7 ವಿಯರ್‌ಗಳು ನೀರನ್ನು ಎತ್ತುತ್ತಿವೆ. ಈ ತಿಂಗಳ 6ರಂದು ಉದ್ಘಾಟನೆಗೆ ಮುಖ್ಯಮಂತ್ರಿಗಳು ಒಪ್ಪಿದ್ದಾರೆ ಎಂದು ಹೇಳಿದರು.

ಈ ಯೋಜನೆಯ ಫಲಾನುಭವಿ ಜಿಲ್ಲೆಯ ಜನರು ನೀರನ್ನು ಎತ್ತುವ ದೃಶ್ಯ ಕಣ್ತುಂಬಿಕೊಳ್ಳಬಹುದು. ಅಲ್ಲಿ ಜಾಗ ಕಿರಿದಾಗಿದ್ದರು, ಪೊಲೀಸರಿಗೆ ಹೇಳಿ ವ್ಯವಸ್ಥೆ ಮಾಡಲಾಗಿದೆ. ಇನ್ನು ಉದ್ಘಾಟನಾ ಕಾರ್ಯಕ್ರಮಕ್ಕೆ ಪಕ್ಷಭೇದ ಮರೆತು ಎಲ್ಲ ನಾಯಕರು, ರೈತರಿಗೆ ಆಹ್ವಾನಿಸಲಾಗುವುದು. ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ಆಹ್ವಾನ ನೀಡುವಂತೆ ನನ್ನ ಕಚೇರಿ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ಪವಿತ್ರವಾದ ಕಾರ್ಯಕ್ಕೆ ಬಂದು ಶುಭ ಗಳಿಗೆಗೆ ಸಾಕ್ಷಿಯಾಗಬೇಕು ಎಂದು ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಇದೇ ವೇಳೆ ಸಿಎಂ ನಿವಾಸದಲ್ಲಿ ನಡೆದ ಭೋಜನ ಕೂಟದಲ್ಲಿ ಯಾವ ವಿಚಾರ ಚರ್ಚೆಯಾಯಿತು ಎಂಬ ಸುದ್ದಿಗಾರರ ಪ್ರಶ್ನೆಗ ಉತ್ತರಿಸಿದ ಡಿಕೆ ಶಿವಕುಮಾರ್, ಮಹಾತ್ಮಾ ಗಾಂಧೀಜಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಬೆಳಗಾವಿಯಲ್ಲಿ ನಡೆದ ಎಐಸಿಸಿ ಅಧಿವೇಶನಕ್ಕೆ ನೂರು ವರ್ಷಗಳು ಪೂರ್ಣಗೊಂಡಿವೆ. ಈಗ ಆ ಸ್ಥಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಕೂತಿದ್ದಾರೆ. ಗಾಂಧೀಜಿ ಅವರ ಮಾರ್ಗದರ್ಶನ ವಿಶ್ವವೇ ಗಮನಿಸಿದೆ. ಇದನ್ನು ಮುಂದಿನ ಪೀಳಿಗೆಗೆ ತಿಳಿಸಬೇಕಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ವತಿಯಿಂದ ಯಾವ ರೀತಿ ಕಾರ್ಯಕ್ರಮ ರೂಪಿಸಬೇಕು ಎಂಬುದರ ಬಗ್ಗೆ ಚರ್ಚೆ ಮಾಡಲಾಯಿತು. ಮುಂದಿನ ಒಂದು ವಾರದಲ್ಲಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ವರದಿ ನೀಡುವಂತೆ ಸಚಿವರಿಗೆ ತಿಳಿಸಲಾಗಿದೆ. ಪಕ್ಷದ ವತಿಯಿಂದಲೂ ಕಾರ್ಯಕ್ರಮ ಮಾಡಲಾಗುತ್ತಿದ್ದು, ಆ ಬಗ್ಗೆ ಪಕ್ಷದ ಕಚೇರಿಯಲ್ಲಿ ಚರ್ಚೆ ಮಾಡಿದ್ದೇವು ಎಂದು ತಿಳಿಸಿದರು.

ಕಾಲೇಜು ದಿನಗಳಲ್ಲಿ ಬಳಸಿದ್ದ ಬೈಕ್ ಮರು ವಿನ್ಯಾಸ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಲೇಜು ದಿನಗಳಲ್ಲಿ ಬಳಸಿದ್ದ ಯಜ್ಡಿ ಬೈಕ್ ಅನ್ನು ಮರು ವಿನ್ಯಾಸಗೊಳಿಸಿ ಅವರಿಗೆ ನೀಡಲಾಗಿದೆ. ಈ ಬಗ್ಗೆ ಮಾತ ನಾಡಿದ ಶಿವಕುಮಾರ್, ನಾನು ಕಾಲೇಜು ದಿನಗಳಲ್ಲಿ ಈ ಬೈಕ್ ಓಡಿಸುತ್ತಿದ್ದೆ. ಕನಕಪುರದ ನಿವಾಸದಲ್ಲಿತ್ತು. ನಮ್ಮ ಸ್ನೇಹಿತರು ಈಗ ಅದಕ್ಕೆ ಹೊಸ ರೂಪ ಕೊಟ್ಟು ತಂದಿದ್ದಾರೆ ಎಂದರು.



ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ.1–ಕಡಕೊಳ ಪಟ್ಟಣ ಪಂಚಾಯಿತಿಯ 2022–23 ಮತ್ತು 2023–24ನೇ ಸಾಲಿನ ಎಸ್‌ಎಫ್‌ಸಿ. ಅನುದಾನದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಉಳಿತಾಯ ಮೊತ್ತದ ಕ್ರಿಯಾ ಯೋಜನೆಯಂತೆ 2021–22 ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನಗರ ವಸತಿ ಯೋಜನೆಯಲ್ಲಿ ಫಲಾನುಭವಿಗಳಾಗಿ ಆಯ್ಕೆಯಾಗಿರುವವರ ಮನೆ ನಿರ್ಮಾಣಕ್ಕೆ ಸಹಾಯಧನ ಪಡೆಯಲು ಇಚ್ಛೆಯನ್ನು ಹೊಂದಿರುವವರು ಸೂಕ್ತ ದಾಖಲೆಗಳೊಂದಿಗೆ ಅರ್ಜಿಯನ್ನು ಸೆಪ್ಟೆಂಬರ್ 17ರೊಳಗೆ ಕಡಕೊಳ ಪಟ್ಟಣ ಪಂಚಾಯಿತಿ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821-2970319 ಅಥವಾ ವಸತಿ ವಿಭಾಗದ ಸಿಬ್ಬಂದಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಕಡಕೊಳ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಂಧ್ರದಲ್ಲಿ ಭಾರಿ ಮಳೆಗೆ 8 ಮಂದಿ ಬಲಿ





ಹೈದರಾಬಾದ್: ಆಂಧ್ರಪ್ರದೇಶದ ವಿಜಯವಾಡದಲ್ಲಿ ಭಾರಿ ಮಳೆಯ ಪರಿಣಾಮ ಉಂಟಾದ ಭೂಕುಸಿತದಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ.

ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಮೃತರ ಕುಟುಂಬ ಸದಸ್ಯರಿಗೆ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಖ್ಯಮಂತ್ರಿ ನಾಯ್ಡು ಅವರು ಶನಿವಾರ ಬೆಳಗ್ಗೆಯಿಂದ ರಾಜ್ಯದ ಪರಿಸ್ಥಿತಿ ಮತ್ತು ಮಳೆಯಿಂದ ಹೆಚ್ಚು ಹಾನಿಗೊಳಗಾದ ಪ್ರದೇಶಗಳಲ್ಲಿ ಕೈಗೊಂಡ ಪರಿಹಾರ ಕ್ರಮಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥರು ಶನಿವಾರ ತಮ್ಮ ಎಲ್ಲಾ ನಿಗದಿತ ಕಾರ್ಯಕ್ರಮಗಳನ್ನು ರದ್ದುಗೊಳಿಸಿದ್ದಾರೆ. ವಿವಿಧ ಸಚಿವರು, ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ), ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ.

ಎಸ್ಪಿಗಳು, ಉಪ ಪೊಲೀಸ್ ವರಿಷ್ಠಾಧಿಕಾರಿಗಳು (ಡಿಎಸ್ಪಿಗಳು) ಪರಿಸ್ಥಿತಿಯ ಬಗ್ಗೆ ಸಂಪೂರ್ಣ ನಿಗಾ ಇಡಲು ಸೂಚಿಸಿದ್ದಾರೆ. ಮಳೆಯ ಆರ್ಭಟಕ್ಕೆ ವಿಶಾಖಪಟ್ಟಣಂನ ಜನ ವಸತಿ ಪ್ರದೇಶ ಸಂಪೂರ್ಣ ಜಲಾವೃತವಾಗಿದೆ. ಎಲ್ಲೆಲ್ಲೂ ಮಳೆ ನೀರು ಆವರಿಸಿದೆ. ನೀರಲ್ಲಿ ಸಿಲುಕಿದ್ದವರ ರಕ್ಷಣೆ ವೇಳೆ ದೊಡ್ಡ ಅನಾಹುತ ತಪ್ಪಿದೆ. ಜನರನ್ನ ಹಗ್ಗ ಕಟ್ಟಿ ಸುರಕ್ಷಿತ ಸ್ಥಳಗಳಿಗೆ ಕರೆತರುವಾಗ ಕೆಲವರು ಕೊಚ್ಚಿ ಹೋಗಿದ್ದಾರೆ. ಈ ಭಯಾನಕ ದೃಶ್ಯ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಇನ್ನು ಕೆಲವರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ.

ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳಲು

ಮೈಸೂರಲ್ಲಿ ಪೊಲೀಸ್ ವಿಶೇಷ ಕಾರ್ಯಾಚರಣೆ

- ಸಾರ್ವಜನಿಕ ಸ್ಥಳದಲ್ಲಿ ವಿಶೇಷ ಗಸ್ತು
- ಅನಾಮಧೇಯ ವ್ಯಕ್ತಿಗಳ ಮೇಲೆ ಹದ್ದಿನಕಣ್ಣು



ಮೈಸೂರು, ಸೆ.1(ಎಸ್‌ಪಿಎನ್)– ಮೈಸೂರಿನ ಸಾರ್ವಜನಿಕ ಸ್ಥಳ, ಉದ್ಯಾನವನ ಹಾಗೂ ಜನಸಂದಣಿ ಇರುವ ಸ್ಥಳಗಳಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಮೈಸೂರು ಪೊಲೀಸರು ರಾತ್ರಿ ಗಸ್ತು ವ್ಯವಸ್ಥೆಯನ್ನು ಬಲಪಡಿಸಿ ವಿಶೇಷ ಕಾರ್ಯಾಚರಣೆ ನಡೆಸುವಂತೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಎಲ್ಲಾ ಠಾಣಾಧಿಕಾರಿಗಳಿಗೂ ಸೂಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ದೇವರಾಜ, ಕೃಷ್ಣರಾಜ ಹಾಗೂ ನರಸಿಂಹರಾಜ ವಿಭಾಗದಲ್ಲಿ ಕಳೆದ ಮೂರು ದಿನಗಳಿಂದ ಸಾರ್ವಜನಿಕ ಸ್ಥಳ, ಉದ್ಯಾನವನ ಹಾಗೂ ನಗರದ ಪ್ರಮುಖ ರಸ್ತೆಯ ಜನಸಂದಣಿ ಇರುವ ಸ್ಥಳಗಳಲ್ಲಿ ಅನಾಮಧೇಯ ವ್ಯಕ್ತಿಗಳ ವಿಚಾರಣೆ ನಡೆಸಲಾಗುತ್ತಿದೆ.

ಪ್ರಮುಖವಾಗಿ ವಾಯುವಿಹಾರಿಗಳಿಗೆ, ಯುವತಿಯರಿಗೆ ಕಿರುಕುಳ ನೀಡುವ ವ್ಯಕ್ತಿಗಳ ವಿರುದ್ಧ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅನುಮಾನಾಸ್ಪದವಾಗಿ ಓಡಾಡುವ ವ್ಯಕ್ತಿಗಳ ವಿರುದ್ಧ ಪೆಟಿ ಕೇಸ್‌ಗಳನ್ನು ದಾಖಲಿಸಿ, ಎಚ್ಚರಿಕೆ ನೀಡಿ ಕಳುಹಿಸಲಾಗುತ್ತಿದೆ ಎಂದು ನರಸಿಂಹ ರಾಜ ವಿಭಾಗದ ಎಸಿಪಿ ಅಶ್ವಥ್ ನಾರಾಯಣ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಳೆದ ಮೂರು ದಿನಗಳಿಂದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರ ಮಾರ್ಗದರ್ಶನದಲ್ಲಿ ಉಪ ಪೊಲೀಸ್ ಆಯುಕ್ತರಾದ ಮುತ್ತುರಾಜ್, ಎಸ್.ಜಾಹ್ನವಿ ನೇತೃತ್ವದಲ್ಲಿ ಎಲ್ಲಾ ಎಸಿಪಿ, ಎಲ್ಲಾ ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳು ಹಾಗೂ ಸಿಬ್ಬಂದಿಗಳು ವಿಶೇಷ ಕಾರ್ಯಾಚರಣೆಯಲ್ಲಿ ಭಾಗಿಯಾಗಿ ಉದ್ಯಾನವನ, ರಸ್ತೆ, ಜನಸಂದಣಿ ಇರುವ ಕಡೆ ತೆರಳಿ ಅನುಮಾನಾಸ್ಪದವಾಗಿ ಕಂಡು ಬರುವ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಈ ಮೂಲಕ ಅಪರಾಧ ಪ್ರಕರಣಗಳ ತಡೆಗೆ ಕ್ರಮವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಅನಾವಶ್ಯಕವಾಗಿ ಯುವತಿಯರಿಗೆ, ವೃದ್ಧರಿಗೆ, ಮಹಿಳೆಯರಿಗೆ ತೊಂದರೆ ನೀಡುವ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನ ಮಾಡುವ ವ್ಯಕ್ತಿಗಳಿಗೆ ಠಾಣೆ ಕರೆತಂದು ಪೆಟಿ ಕೇಸ್ ದಾಖಲಿಸಿ, ಎಚ್ಚರಿಕೆ ನೀಡಲಾಗುತ್ತಿದೆ ಎಂದು ಪೊಲೀಸರೊಬ್ಬರು ಮಾಹಿತಿ ನೀಡಿದರು.

ಮಹಿಳೆ, ವ್ಯಕ್ತಿ ನಾಪತ್ತೆ

ಮೈಸೂರು, ಸೆ.1– ಮಳವಳ್ಳಿ ತಾಲೂಕಿನ ಮಾದಹಳ್ಳಿ ಗ್ರಾಮದ ಉಮೇಶ್ ಎಂಬುವವರ ಪತ್ನಿ ನಿಸರ್ಗ ಎಂ.ಎಸ್ ಹಾಗೂ ಅವರ ಪುತ್ರಿ ಮೌನಿತಾ (1 ವರ್ಷ 4 ತಿಂಗಳು) ಜು.5ರಂದು ಕಾಣೆಯಾಗಿದ್ದಾರೆ.



ನಿಂಗರಾಜು

ಹಾಗೆಯೇ ತಿ.ನರಸೀಪುರ ತಾಲೂಕಿನ ಸೋಸಲೆ ಗ್ರಾಮದ ನಿಂಗರಾಜು ಎಂಬುವವರು ಆಗಸ್ಟ್ 2ರಂದು ಕಾಣೆಯಾಗಿದ್ದು, ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಇಬ್ಬರ ಬಗ್ಗೆ ಮಾಹಿತಿ ತಿಳಿದುಬಂದಲ್ಲಿ ಬನ್ನೂರು ಪೊಲೀಸ್ ಠಾಣೆಯ ದೂ.ಸಂ: 08227-275632 ಅನ್ನು ಸಂಪರ್ಕಿಸುವುದು ಎಂದು ಬನ್ನೂರು ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಸೆ.1–ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿನ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಸೆ.11 ಹಾಗೂ 12ರಂದು ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಚೇಂಬರ್‌ನಲ್ಲಿ ನಡೆಯಲಿರುವ Walk-in- interview ನಲ್ಲಿ ಭಾಗವಹಿಸಬಹುದು. ಮಾಹಿತಿಗೆ ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ಅನ್ನು ಸಂಪರ್ಕಿಸಬಹುದು.



ಅಭಿನಂದನೆ

ನಿವೃತ್ತರಾದ ಮೈಸೂರು ವಿವಿ ಕುಲಸಚಿವ (ಪರೀಕ್ಷಾ) ನಿಂಗರಾಜು ಅವರನ್ನು ಅಭಿನಂದನಾ ಬಳಗದಿಂದ ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು. ಈ ವೇಳೆ ಮೈವಿವಿ ಪ್ರಸಾದ್, ಚಂದ್ರು, ಪ್ರಕಾಶ್ ಮತ್ತಿತರರಿದ್ದರು.

ಪ್ರಿಯಾಂಕಾಗೆ ಪಿಹೆಚ್.ಡಿ ಪದವಿ



ಮೈಸೂರು, ಸೆ.1– ಪ್ರಿಯಾಂಕ ವಿ.ಆರ್ ಅವರು ಡಾ.ಮೃದುಲ ಸಿಂಗ್ ಅವರ ಮಾರ್ಗದರ್ಶನದಲ್ಲಿ ಮನೋವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ನಾಗರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ನೂರು ಮೆಟ್ಟಿಲುಗಳ ಸ್ವಚ್ಛತಾ ಕಾರ್ಯ...



ಬಿಜೆಪಿಚಾಮುಂಡೇಶ್ವರಿ ಕ್ಷೇತ್ರದ ಮಹಿಳಾ ಮೋರ್ಚಾ ವತಿಯಿಂದ ಚಾಮುಂಡಿಬೆಟ್ಟದ ನೂರು ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಲಾಯಿತು. ಈ ವೇಳೆ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಗೌಡ, ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ಪೈಲ್ವಾನ್ ಟಿ.ರವಿ, ಮೈಸೂರು ಮಹಾನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ಶ್ರೀನಿವಾಸ್, ಝಾನ್ಸಿ ರಾಣಿ, ರಾಧಾ, ಶಾಲಿನಿ, ಶ್ರುತಿ, ಶಾಲಿನಿ, ಇಂದಿರಾ, ನಾರಾಯಣ್, ಕೃಷ್ಣವೇಣಿ, ಗೋಪಾಲರಾವ್, ರಾಜಕುಮಾರ್ ಇದ್ದರು.

ಕುಸ್ತಿಯಲ್ಲಿ ಸಂಜಯ್ ರಾಜ್ಯ ಮಟ್ಟಕ್ಕೆ ಆಯ್ಕೆ

ಮೈಸೂರು, ಸೆ.1– ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜಿಲ್ಲಾ ಮಟ್ಟದ ಶಾಲಾ ಕ್ರೀಡಾಕೂಟದ ಕುಸ್ತಿ ಸ್ಪರ್ಧೆಯಲ್ಲಿ ಸಿದ್ಧಾರ್ಥನಗರ ಜೆಎಸ್‌ಎಸ್ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿ ಸಂಜಯ್ ಜಿ. 48 ಕೆಜಿ ತೂಕದ ಫ್ರೀ ಸ್ಟೈಲ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ಈತನ ತಂದೆ–ತಾಯಿ ಗಿರೀಶ್ ಮತ್ತು ಶೋಭ ದಂಪತಿ. ಸಣ್ಣ ತರಕಾರಿ ವ್ಯಾಪಾರಿಗಳು, ರಸ್ತೆ ಬದಿಯಲ್ಲಿ ಸುಮಾರು 17 ವರ್ಷಗಳಿಂದ ವ್ಯಾಪಾರ ಮಾಡುತ್ತಿರುವ ಇವರಿಗೆ ಮಗನನ್ನು ಕುಸ್ತಿಪಟು ಮಾಡಬೇಕೆನ್ನುವ ಮಹದಾಸೆ.

ಮೂಲತಃ ಕ್ಯಾತಮಾರನಹಳ್ಳಿ ನಿವಾಸಿಗಳಾದ ಇವರಿಗೆ ಸ್ಥಳೀಯ ಕುಸ್ತಿಪಟುಗಳೇ ಸ್ಫೂರ್ತಿ. ಮಗನ ಸಾಧನೆಗೆ ನಮ್ಮ ಬಡತನ ಅಡ್ಡಿಯಾಗಬಾರದೆಂದು ಆತನನ್ನು ನಜರ್‌ಬಾದ್‌ನಲ್ಲಿರುವ ಚಾಮುಂಡಿ ಕುಸ್ತಿ ಅಖಾಡಕ್ಕೆ ಸೇರಿಸಿ ಆತನ ಸಾಧನೆಗೆ ಶಕ್ತಿಮೀರಿ ಶ್ರಮಿಸುತ್ತಿದ್ದಾರೆ.



ವಿದ್ಯಾರ್ಥಿಯ ಪ್ರತಿಭೆಯನ್ನು ಗುರುತಿಸಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ನಾಗೇಂದ್ರ ಅವರು ಈತನನ್ನು ಶಾಲಾ ಶಿಕ್ಷಣ ಇಲಾಖೆಯವರು ನಡೆಸುವ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ವೇದಿಕೆ ಕಲ್ಪಿಸಿಕೊಟ್ಟು ಆತನ ಸಾಧನೆಗೆ ಸಹಕರಿಸಿದ್ದಾರೆ.

ಮಂಗಳಮುಖಿಯರ ಬೀದಿ ಕಾಳಗ

ಜಗನ್ಮೋಹನ ಅರಮನೆ ಬಳಿ ಪರಸ್ಪರ ಹಲ್ಲೆ; ಕೆಲಕಾಲ ಆತಂಕ

ಮೈಸೂರು, ಸೆ.1– ಮೈಸೂರಿನಲ್ಲಿ ಮಂಗಳಮುಖಿಯರ ರಸ್ತೆ ಕಾಳಗದಿಂದ ಸಾರ್ವಜನಿಕರು ಬೆಚ್ಚಿಬಿದ್ದಿದ್ದಾರೆ.

ಐತಿಹಾಸಿಕ ಜಗನ್ಮೋಹನ ಅರಮನೆ ಬಳಿ ನಾಲ್ಕೈದು ದಿನಗಳ ಹಿಂದೆ ಎರಡು ಗುಂಪುಗಳ ನಡುವೆ ನಡೆದ ಕಾಳಗದ ವಿಡಿಯೋ ವೈರಲ್ ಆಗಿದೆ. ಒಬ್ಬರು ವಿವಸ್ತ್ರವಾಗಿ ಎದುರಾಳಿಗಳಿಗೆ ಹಲ್ಲೆ ನಡೆಸಿದರೆ, ನಿತ್ರಾಣವಾಗಿದ್ದ ಮತ್ತೊಬ್ಬರನ್ನೂ ವಿವಸ್ತ್ರಗೊಳಿಸಲು ಪ್ರಯತ್ನಿಸಿದ್ದಾರೆ.

ನಡು ರಸ್ತೆಯಲ್ಲೇ ಬಡಿದಾಟ: ಭಿಕ್ಷೆ ಮಾಡುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಜಗಳವಾಗಿದೆ. ಮಾತಿಗೆ ಮಾತು ಬೆಳೆದು ಜಗಳ ತಾರಕಕ್ಕೇರಿ, ಪರಸ್ಪರ ಕೈ ಕೈ ಮಿಲಾಯಿಸಿದ್ದಾರೆ. ಒಬ್ಬರನ್ನೊಬ್ಬರು ಅಟ್ಟಾಡಿಸಿ, ನಡು ರಸ್ತೆಯಲ್ಲೇ ಬಡಿದಾಡಿದ್ದಾರೆ. ಒಬ್ಬರಂತೂ ಸಂಪೂರ್ಣ ವಿವಸ್ತ್ರವಾಗಿದ್ದರೆ, ಮತ್ತೊಬ್ಬರು ಕುಸಿದು ಬಿದ್ದಿದ್ದಾರೆ. ಈ ಕಾಳಗ ನೋಡಿದ ಜನ ಬೆಚ್ಚಿಬಿದ್ದಿದ್ದಾರೆ. ಸಮಾಧಾನಪಡಿಸಲು ಹೋದರೆ ನಮ್ಮ ವಿರುದ್ಧವೇ ತಿರುಗಿಬೀಳಬಹುದು ಎಂಬ ಭಯದಿಂದ ಯಾರೂ ಆ ನಿಟ್ಟಿನಲ್ಲಿ ಪ್ರಯತ್ನಿಸಿಲ್ಲ. ತಕ್ಷಣ ಧಾವಿಸಿದ ಇಬ್ಬರು ಪೊಲೀಸ್ ಸಿಬ್ಬಂದಿಯೂ ಅಸಹಾಯಕರಾಗಿ ನಿಂತಿದ್ದರು. ನಂತರ ಪರಿಸ್ಥಿತಿ ತಿಳಿಗೊಳಿಸಿದರು.

ಪ್ರಕರಣ ದಾಖಲು: ಜಗನ್ಮೋಹನ ಅರಮನೆ ಬಳಿ ಮಂಗಳಮುಖಿಯರು ನಡುರಸ್ತೆಯಲ್ಲೇ ಬಡಿದಾಡಿಕೊಂಡು ಸಾರ್ವಜನಿಕರಿಗೆ ತೊಂದರೆ ನೀಡಿದ್ದರ ಸಂಬಂಧ ಪ್ರಕರಣ ದಾಖಲಾಗಿದೆ. ಐವರನ್ನು ವಶಕ್ಕೆ ಪಡೆದು ಕ್ರಮ ವಹಿಸಲಾಗಿದೆ. ಅಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಈ ರೀತಿಯ ವರ್ತಿಸಿದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಲ್ಲರಿಗೂ ಎಚ್ಚರಿಸಲಾಗಿದೆ. ಸಿಗ್ನಲ್‌ಗಳು ಹಾಗೂ ರಸ್ತೆ ಬದಿ ನಿಂತು ಹಣ ಕೇಳಿ ಸಂಚಾರಕ್ಕೆ ಅಡ್ಡಿಮಾಡದಂತೆ ಸೂಚಿಸಲಾಗಿದೆ ಎಂದು ದೇವರಾಜ ಠಾಣೆ ಪೊಲೀಸರು ತಿಳಿಸಿದ್ದಾರೆ.

ಎಚ್ಚರ ವಹಿಸುವುದು ಸೂಕ್ತ: ಮಂಡಿ ಮೊಹಲ್ಲಾದಲ್ಲೂ ಇದೇ ರೀತಿ ಘಟನೆ ನಡೆದಿತ್ತು ಅವರು ಜಗಳವಾಡುವಾಗ ಬಿಡಿಸಲು ಹೋದವರಿಗೂ ಹೊಡೆಯುತ್ತಾರೆ. ಯಾರಾದರೂ ಮೊಬೈಲ್‌ನಲ್ಲಿ ವಿಡಿಯೋ ಮಾಡಿದರೆ ಸಹಿಸುವುದಿಲ್ಲ. ಸಾರ್ವಜನಿಕ ಸ್ಥಳದಲ್ಲಿ ಈ ರೀತಿಯ ಘಟನೆಗಳಿಂದ ಜನರಿಗೆ ತೊಂದರೆಯಾಗುವುದರ ಜೊತೆಗೆ ಅವರಿಗೂ ಅಪಾಯ. ಈ ಬಗ್ಗೆ ಪೊಲೀಸರು ಎಚ್ಚರ ವಹಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದಾರೆ.

ಪೌರಾಣಿಕ ನಾಟಕಗಳು ಉಳಿದಿರುವುದೇ ಗ್ರಾಮೀಣರ ಪ್ರೋತ್ಸಾಹದಿಂದ

ಪೌರಾಣಿಕ ರಂಗಸಂಭ್ರಮಕ್ಕೆ ಚಾಲನೆ ನೀಡಿದ ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಅಭಿಮತ

ಮೈಸೂರು, ಸೆ.1(ಎಸ್‌ಪಿಎನ್)– 'ಪೌರಾಣಿಕ ನಾಟಕಗಳು' ಭಾರತೀಯ ಸಾಂಸ್ಕೃತಿಕ ಪರಂಪರೆಯ ಬೇರುಗಳು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.



ಪೌರಾಣಿಕ ರಂಗಸಂಭ್ರಮ–2024ರ ಎರಡನೇ ದಿನದ 'ಗದಾಯುದ್ಧ' ನಾಟಕ ಪ್ರದರ್ಶನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿದರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಮೈಸೂರು ಶ್ರೀರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಪೌರಾಣಿಕ ರಂಗ ಸಂಭ್ರಮ–2024ರ ಎರಡನೇ ದಿನದ ಕಾರ್ಯಕ್ರಮದಲ್ಲಿ 'ಗದಾಯುದ್ಧ' ನಾಟಕ ಪ್ರದರ್ಶನ ಹಾಗೂ ಹಿರಿಯ ಕಲಾವಿದರಿಗೆ ಸನ್ಮಾನಿಸಿ ಮಾತನಾಡಿದರು.

ಪ್ರಸ್ತುತ ಆಧುನಿಕ ನಾಟಕಗಳ ಜೊತೆ ಜೊತೆಗೆ ಪೌರಾಣಿಕ ನಾಟಕಗಳ ಪ್ರದರ್ಶನಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು. ಅಲ್ಲದೆ, ಪೌರಾಣಿಕ ನಾಟಕಗಳು ಉಳಿದಿರುವ ಗ್ರಾಮೀಣ ಜನತೆಯ ಪ್ರೋತ್ಸಾಹದಿಂದ ಇಂದಿಗೂ ಗ್ರಾಮೀಣ ಪ್ರದೇಶದ ಜನರು ಪೌರಾಣಿಕಗಳನ್ನು ಕಲಿತು ಪ್ರದರ್ಶನ ನೀಡುತ್ತಾರೆ. ಈ ಕಲೆಗಳ ಉಳಿವಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರಂತರವಾಗಿ ಶ್ರಮಿಸುತ್ತಿದ್ದು, ಇಲಾಖೆ ಸಂಘ–ಸಂಸ್ಥೆಗಳು ಕೈಜೋಡಿಸಬೇಕು ಎಂದು ಕಲಾಪ್ರಿಯರಲ್ಲಿ ಮನವಿ ಮಾಡಿದರು.

ಭಾರತೀಯ ಪರಂಪರೆಯಲ್ಲಿ ಪೌರಾಣಿಕ ನಾಟಕಗಳು ಈ ನೆಲದ ಸಂಸ್ಕೃತಿಯ ಬುನಾದಿಯಾಗಿವೆ. ಪೌರಾಣಿಕ ನಾಟಕಗಳನ್ನು ಮರೆತರೆ, ನಮ್ಮ ಸಂಸ್ಕೃತಿಯ ಕುರುಹುಗಳೇ ನಾಪತ್ತೆಯಾದ್ದಂತೆ. ಹಾಗಾಗಿ ಅವನತಿ ಅಂಚಿನಲ್ಲಿರುವ ಪೌರಾಣಿಕ ನಾಟಕಗಳಲ್ಲಿ ಯುವ ಸಮೂಹ ಅಭಿನಯಿಸಿ ಉಳಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮಂಡ್ಯ ಸಬ್ಬನಹಳ್ಳಿಯ ಹಿರಿಯ ಕಲಾವಿದ ಬೊಚ್ಚೆನಿಂಗೇಗೌಡ ಅವರನ್ನು ಅಭಿನಂದಿಸಲಾಯಿತು. ವೇದಿಕೆಯಲ್ಲಿ ಲೆಕ್ಕ ಪರಿಶೋಧಕ ಎಸ್.ಎನ್. ಶ್ರೀನಿವಾಸ್, ಶ್ರೀರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡದ ಅಧ್ಯಕ್ಷೆ ಎಚ್.ಬಿ. ಯಶೋಧ, ಹಿರಿಯ ಕಲಾವಿದ ಬಿ.ಎಂ. ಶ್ರೀರಾಮಚಂದ್ರ ಸೇರಿದಂತೆ ಇತರರಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ಕಾರಸವಾಡಿ ಸುರೇಶ್ ನಿರ್ದೇಶನದ, ಶ್ರೀರಂಗಪಟ್ಟಣದ ನಾರಾಯಣ ಸಂಗೀತ ಸಂಯೋಜನೆಯ ಹಾಗೂ ಮಂಡ್ಯ ಮಾಂಡವ್ಯ ರಂಗಭೂಮಿ ಕಲಾಸಂಘದ ಕಲಾವಿದರು ಅಭಿನಯಿಸಿರುವ 'ಗಧಾಯುದ್ಧ' ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆ ಗಳಿಸಿತು.



ಮಂಡ್ಯ ಮಾಂಡವ್ಯ ರಂಗಭೂಮಿ ಕಲಾಸಂಘದ ಕಲಾವಿದರಿಂದ 'ಗದಾಯುದ್ಧ' ನಾಟಕ ಪ್ರದರ್ಶನ

'ಗದಾಯುದ್ಧ' ನಾಟಕದಲ್ಲಿ ಕೃಷ್ಣಪ್ಪ (ಕೃಷ್ಣ), ಕೊಮ್ಮರಹಳ್ಳಿ ಮಹೇಶ್ (ದುರ್ಯೋಧನ), ಶ್ರೀರಂಗಪಟ್ಟಣ ನಂಜೇ ಗೌಡ(ಅರ್ಜುನ), ಮುದ್ದೇಗೌಡ(ಕರ್ಣ), ಚಿಕ್ಕಮಂಡ್ಯದ ಕೃಷ್ಣ (ಭೀಮ), ಕಾಳೇನಹಳ್ಳಿ ಪುಟ್ಟೇಗೌಡ (ಧರ್ಮರಾಯ), ಮಂಡ್ಯ ಮರಿಲಿಂಗಪ್ಪ (ಭೀಷ್ಮ), ಶ್ರೀರಂಗಪಟ್ಟಣದ ಭಾಸ್ಕರ್ (ದ್ರೋಣ), ದೇವರಾಜು(ಸಹದೇವ), ಕಾರಸವಾಡಿ ನಿಶ್ಚಿತ(ದುಶ್ಯಾಸನ), ಕಾಳೇನಹಳ್ಳಿ ನಾಗರಾಜು(ಶಕುನಿ), ಕನ್ಯಾಕುಮಾರಿ(ಸ್ತ್ರೀ ಪಾತ್ರ) ಅಭಿನಯಿಸಿದ್ದಾರೆ.

ಮೈಸೂರು ಮಿತ್ರ

ಸೋಮವಾರ 2 ಸೆಪ್ಟೆಂಬರ್ 2024

ಕೆಆರ್‌ಎಸ್ ಆಧುನೀಕರಣದ ಮೂಲಕ ಮಂಡ್ಯ ಜನರ ಭಾವನೆಯನ್ನು ಜೀವಂತವಾಗಿಟ್ಟಿದ್ದೇನೆ

ಇಂಡುವಾಳು ಹೊನ್ನಯ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ವ್ಯಾಖ್ಯಾನ

ಡ್ಯಾಂ ಬಳಿ ಅಮ್ಯೂಸ್ಮೆಂಟ್ ಪಾರ್ಕ್ ಬೇಡ

ಮಂಡ್ಯ: ರಾಜ್ಯ ಸರ್ಕಾರ ಕೆಆರ್‌ಎಸ್ ಡ್ಯಾಂ ಬಳಿ ನಿರ್ಮಿಸಲು ಮುಂದಾಗಿರುವ ಅಮ್ಯೂಸ್ಮೆಂಟ್ ಪಾರ್ಕ್‌ಗೆ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ವಿರೋಧ ವ್ಯಕ್ತಪಡಿಸಿದ್ದು, ಪಾರ್ಕ್ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ. ಆದರೆ ಡ್ಯಾಂ ಬಳಿ ಬೇಡ ಎಂದು ರೈತ ನಾಯಕಿ ಸುನಂದಾ ಜಯರಾಂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮನವಿ ಮಾಡಿದರು. ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಡ್ಯಾಂ ಆಧುನೀಕರಣ, ಮೈಶುಗರ್ ಪುನಶ್ಚೇತನ ಮಾಡುವ ಮೂಲಕ ಮಂಡ್ಯ ಜಿಲ್ಲೆಯ ರೈತರಿಗೆ ನಿಮ್ಮಿಂದ ಸಾಕಷ್ಟು ಸಹಾಯವಾಗಿದ್ದು, ಕೆಆರ್‌ಎಸ್ ಬಳಿ ಅಮ್ಯೂಸ್ಮೆಂಟ್ ಪಾರ್ಕ್ ನಿರ್ಮಾಣವಾದರೆ ಡ್ಯಾಂಗೆ ಅನೇಕ ರೀತಿಯಲ್ಲಿ ಅಪಾಯವಿದೆ. ಇದರ ಬಗ್ಗೆ ಸಂಬಂಧಿಸಿದವರೊಂದಿಗೆ ತಾವು ಮಾತನಾಡಬೇಕೆಂದು ಒತ್ತಾಯಿಸಿದರು.

ಈ ಬಗ್ಗೆ ಮಾತನಾಡಿದ ಬೊಮ್ಮಾಯಿ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನೀರಾವರಿ ಸಚಿವರೊಂದಿಗೆ ಮಾತುಕತೆ ಮಾಡುವೆ. ನಿಮ್ಮ ಭಾವನೆಯನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿದರು.



27ನೇ ವರ್ಷದ ದೇವಮ್ಮ ಇಂಡುವಾಳು ಹೆಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮತ್ತು ಎಚ್.ಶಾರದಮ್ಮ ಮತ್ತು ಕೆಂಪಯ್ಯ ವಿದ್ಯಾರ್ಥಿ ಪುರಸ್ಕಾರ ಸಮಾರಂಭದಲ್ಲಿ ಸಾಧಕರಿಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿದರು.

ಮಂಡ್ಯ,ಸೆ.1–ಜಲಸಂಪನ್ಮೂಲ ಸಚಿವನಾಗಿದ್ದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ಜನರ ಜೀವನಾಡಿ ಕೆಆರ್‌ಎಸ್ ಅಣೆಕಟ್ಟೆಯ ಗೇಟ್‌ಗಳು ಶಿಥಿಲಗೊಂಡು ನೀರು ಪೋಲಾಗುತ್ತಿರುವ ವಿಚಾರ ನನ್ನ ಗಮನಕ್ಕೆ ಬಂದ ಕೂಡಲೇ 16 ಹೊಸ ಗೇಟ್‌ಗಳನ್ನು ಡ್ಯಾಂಗೆ ಅಳವಡಿಸುವ ಮೂಲಕ ಅಣೆಕಟ್ಟೆಯ ಮೇಲೆ ಮಂಡ್ಯ ಜನರಿಟ್ಟಿದ್ದ ಭಾವನೆಯನ್ನು ಜೀವಂತವಾಗಿಟ್ಟಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಭಾನುವಾರ ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಕರ್ನಾಟಕ ಸಂಘ ಮತ್ತು ಜನದನಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಡೆದ 27ನೇ ವರ್ಷದ ದೇವಮ್ಮ ಇಂಡುವಾಳು ಹೆಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮತ್ತು ಎಚ್.ಶಾರದಮ್ಮ ಮತ್ತು ಕೆಂಪಯ್ಯ ವಿದ್ಯಾರ್ಥಿ ಪುರಸ್ಕಾರ ಸಮಾರಂಭದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಭೇಟಿ ನೀಡಿದಾಗ ಸಂಪೂರ್ಣ ಪರಿಶೀಲನೆ ನಡೆಸಿದ್ದೆ. ಜೊತೆಗೆ ಡ್ಯಾಂನ ಕೆಳಗಿಳಿದು ಸಹ ವೀಕ್ಷಿಸಲು ಮುಂದಾದಾಗ ನನ್ನನ್ನು ಅಧಿಕಾರಿಗಳು ತಡೆದರು ಎಂದರು.

ಅದನ್ನು ಲೆಕ್ಕಿಸದೇ ಡ್ಯಾಂ ಕೆಳ ಹೋಗಿ ಪರಿಶೀಲಿಸಿದಾಗ ಗೇಟ್‌ಗಳು ಶಿಥಿಲವಾಗಿರುವುದು ನನ್ನ ಗಮನಕ್ಕೆ ಬಂತು. ಗೋಣಿ ಚೀಲ ಹೊದಿಸಿ ನೀರು ಪೋಲಾಗುವುದನ್ನು ಅಧಿಕಾರಿಗಳು ತಡೆಯುತ್ತಿರುವುದು ಆಗ ನನ್ನ ಗಮನಕ್ಕೆ ಬಂತು. ಡ್ಯಾಂನ ಒಂದು ಹನಿ ನೀರಿಗೆ ನಾವು ತಮಿಳುನಾಡು ಜೊತೆ ಜಗಳವಾಡುತ್ತೇವೆ. ಇಲ್ಲಿ ಸಾಕಷ್ಟು ನೀರು ಪೋಲಾಗುತ್ತಿರುವುದು ನನಗೆ ಬೇಸರವಾಯಿತೆಂದು ಅಸಮಾಧಾನ ವ್ಯಕ್ತಪಡಿಸಿದರು.

ನೀರು ಪೋಲಾಗುವುದನ್ನು ಕಂಡು ಪರಿಶೀಲನೆ ನಡೆಸಿದ್ದ ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ತಕ್ಷಣ ತಡಮಾಡದೇ ಹೊಸ ಗೇಟ್ ಅಳವಡಿಸುವ ಕೆಲಸವನ್ನು ಶುರು ಮಾಡಲು ಅಧಿಕಾರಿಗಳೊಂದಿಗೆ ಚರ್ಚಿಸಿದಾಗ ಆರಂಭದಲ್ಲಿ ಅಧಿಕಾರಿಗಳೇ ಇದಕ್ಕೆ ವಿರೋಧ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ನಿರ್ಮಿಸಿದ ಕಾರ್ಖಾನೆ ಇದಾಗಿದ್ದು, ಗೇಟ್ ಅಳವಡಿಸಲು ಹೋಗಿ ಹೆಚ್ಚು ಕಡಿಮೆಯಾದರೆ ನಿಮ್ಮ ತಲೆಗೆ ಬರುತ್ತದೆ. ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ ಎಂದಿದ್ದರು. ಅದನ್ನು ಲೆಕ್ಕಿಸದೇ 16 ಹೊಸ ಗೇಟ್‌ನ್ನು ಅಳವಡಿಸುವ ಕಾರ್ಯಕ್ಕೆ ಚಾಲನೆ ಕೊಟ್ಟೆ, ಅದರಲ್ಲೂ 15ನೇ ಗೇಟ್ ಅಳವಡಿಕೆಗೆ ಸಮಸ್ಯೆಯಾಗಿ ಮತ್ತೆ ಅದನ್ನು ಹೊಸದಾಗಿ ಅಳವಡಿಸುವ ಕೆಲಸವಾಯಿತು ಎಂದು ಕೆಆರ್‌ಎಸ್‌ನ ಹೊಸ ಗೇಟ್ ಅಳವಡಿಕೆಯ ಕಾರ್ಯವನ್ನು ನೆನಪಿಸಿಕೊಂಡರು.

ಇಂತಹ ಸಮಾಜ ಸೇವಾ ಕೆಲಸಕ್ಕೆ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಮಂಡ್ಯ ಪುರಸಭೆಯ ಮೊದಲ ಅಧ್ಯಕ್ಷರಾದ ಇಂಡುವಾಳು ಹೊನ್ನಯ್ಯ ನನಗೆ ಪ್ರೇರಣೆ. ಹೋರಾಟ ಮಾಡುವಾಗ ನಮಗಿರುವ ಪ್ರೇರಣೆ ಅಧಿಕಾರ ಬಂದ ಮೇಲೆ ಇರುವುದಿಲ್ಲ. ಆದರೆ ಇದಕ್ಕೆ ತದ್ವಿರುದ್ಧ ಎಂಬಂತೆ ಹೊನ್ನಯ್ಯರವರು ರೈತರು, ಸ್ವಾತಂತ್ರ್ಯಕ್ಕಾಗಿ ಹಾಗೂ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಮೈಶುಗರ್ ಕಾರ್ಖಾನೆಯನ್ನು ಉಳಿಸಲು ರೈತರು ನಿರಂತರ ಹೋರಾಟ ಮಾಡಿದಾಗ ಬಜೆಟ್‌ನಲ್ಲಿ ಹಣ ಮೀಸಲಿಟ್ಟು ಕಾರ್ಖಾನೆ ಪುನಶ್ಚೇತನ ಮಾಡಿದ ಕೀರ್ತಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಬೇಕು. ಜೊತೆಗೆ ಕೆಆರ್‌ಎಸ್ ಅಣೆಕಟ್ಟೆಗೆ ಹೊಸ ಗೇಟ್‌ಗಳನ್ನು ಅಳವಡಿಸಲು ಬೊಮ್ಮಾಯಿ ಅವರು ಮುಂದಾಗದಿದ್ದರೆ ತುಂಗಭದ್ರ ಡ್ಯಾಂಗೆ ಬಂದ ಸ್ಥಿತಿ ಕೆಆರ್‌ಎಸ್ ಡ್ಯಾಂಗೂ ಬರುತ್ತಿತ್ತು. ಆದರೆ ಮಂಡ್ಯ ಜಿಲ್ಲೆಯ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದ ಬೊಮ್ಮಾಯಿ ಅವರಿಗೆ ಮಂಡ್ಯ ಜಿಲ್ಲೆಯ ಜನ ಸ್ಮರಣೀಯರಾಗಿರಬೇಕೆಂದರು.

ಇದೇ ಸಂದರ್ಭದಲ್ಲಿ ಮೈಸೂರಿನ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಅವರಿಗೆ ಇಂಡುವಾಳು ಹೆಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿಯನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್.ಶೈಲಜಾ ಅವರಿಗೆ ದೇವಮ್ಮ ಇಂಡುವಾಳು ಹೆಚ್.ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಜೊತೆಗೆ ವಿದ್ಯಾರ್ಥಿಗಳಾದ ಎಂ.ಆರ್.ದೀಪಿಕಾ, ಐ.ವಿ.ಚರಣ್, ಸ್ನೇಹ ಮತ್ತು ಪಿ.ಜೆ.ಮಾದೇಶ್ ಎಂಬುವವರಿಗೆ ಶಾರದಮ್ಮ, ಕೆಂಪಯ್ಯ ವಿದ್ಯಾರ್ಥಿ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಬಿಜೆಪಿ ಮುಖಂಡ ಡಾ.ಸಿದ್ದರಾಮಯ್ಯ, ಹೆಚ್.ಹೊನ್ನಯ್ಯ ಅವರ ಪುತ್ರ ಡಾ.ಎಚ್.ಸಿದ್ದಪ್ಪ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ, ಸಂಘಟಕರಾದ ಹೆಚ್.ಡಿ.ಸೋಮಶೇಖರ್, ಸಿ.ಎಸ್.ರಾಮಕೃಷ್ಣ, ಲೋಕೇಶ್ ಚಂದಗಾಲು, ಕೆ.ಜಯರಾಂ ಉಪಸ್ಥಿತರಿದ್ದರು.

ಮುಡಾ ವಿಚಾರದಲ್ಲಿ ಕಾಂಗ್ರೆಸ್ಸಿಗರಿಗೆ ಆತಂಕ

ಮಂಡ್ಯ: ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿರುವುದು ಇದೇ ಮೊದಲ ಪ್ರಕರಣವಲ್ಲ. ಆದರೆ ಕಾಂಗ್ರೆಸ್ ಮಿತ್ರರು ಯಾಕೆ ಆತಂಕಕ್ಕೆ ಒಳಗಾಗಿದ್ದಾರೋ ಗೊತ್ತಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರು ಕೊಟ್ಟಿರುವುದು ತನಿಖೆ ಮಾಡಿ ಎಂದು ಮಾತ್ರ. ಅದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಹೋಗಿದ್ದಾರೆ. ಅಂತಿಮ ಘಟ್ಟದಲ್ಲಿದ್ದು ಕಾದು ನೋಡಬೇಕು ಎಂದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ ಪ್ರಕರಣಕ್ಕೆ ಪ್ರಾಸಿಕ್ಯೂಷನ್‌ಗೆ ನೀಡುವ ಯಾವುದೇ ಪೆಂಡಿಂಗ್ ಇಲ್ಲ ಎಂದು ರಾಜ್ಯಪಾಲರೇ ಹೇಳಿದ್ದಾರೆ. ಹಲವು ಪ್ರಕರಣಕ್ಕೆ ಪ್ರಾಸಿಕ್ಯೂಷನ್‌ಗೆ ಕೊಟ್ಟಿದ್ದೇನೆ. ಕೆಲವು ಪ್ರಕರಣಕ್ಕೆ ಕ್ಲಾರಿಫಿಕೇಷನ್ ಕೇಳಿದ್ದೇನೆ ಎಂದಿದ್ದಾರೆ. ಆದರೆ ಅದಕ್ಕೂ–ಇದಕ್ಕೂ ತಳಕು ಹಾಕುವುದು ಎಷ್ಟು ಸರಿ?. ಹೈಕೋರ್ಟ್ ತೀರ್ಪಿನ ಮೇಲೆ ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರು ಮುಂದುವರೆಯುವ ಬಗ್ಗೆ ನಿರ್ಧಾರವಾಗಲಿದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಉರುಳಿಸಲು ಬಿಜೆಪಿ, ರಾಜ್ಯಪಾಲರು ಷಡ್ಯಂತ್ರ ಮಾಡುತ್ತಿರುವ ಆರೋಪ ಸತ್ಯಕ್ಕೆ ದೂರವಾದುದು. ತಮ್ಮನ್ನು ತಾವು ಉಳಿಸಿಕೊಳ್ಳಲು ಆಧಾರವಿಲ್ಲದ ಆರೋಪ ಮಾಡುತ್ತಿದ್ದಾರೆ. ತಮ್ಮ ತಪ್ಪನ್ನ ಮುಚ್ಚಿಕೊಳ್ಳಲು ಬಳಸುತ್ತಿರುವ ಟ್ರಿಕ್ಸ್ ಆಗಿದೆ ಎಂದು ಟೀಕಿಸಿದರು.

ಬಿಜೆಪಿಯ ಮುಡಾ ಅಸ್ತ್ರಕ್ಕೆ ಕಾಂಗ್ರೆಸ್‌ನಿಂದ ಕೋವಿಡ್ ಅಸ್ತ್ರ ಪ್ರಯೋಗ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕೋವಿಡ್ ವಿಚಾರದಲ್ಲಿ ಸರ್ಕಾರ ಒಂದು ಕಮೀಷನ್ ರಚನೆ ಮಾಡಿತ್ತು. ತನಿಖಾ ತಂಡ ಮುಖ್ಯಮಂತ್ರಿಗೆ ವರದಿ ಕೊಟ್ಟಿದ್ದಾರೆ ವರದಿಯಲ್ಲಿ ಏನಿದೆ ಗೊತ್ತಿಲ್ಲ. ವರದಿ ಹೊರಗೆ ಬರಲಿ ನಂತರ ಉತ್ತರ ಕೊಡುತ್ತೇವೆ. ತನಿಖೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ತಪ್ಪಿನ ಆರೋಪ ಮಾಡಿದವರಿಗೂ ಶಿಕ್ಷೆಯಾಗಲಿ ಎಂದರು.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಜೊತೆ ಮಾತನಾಡಿದ್ದೇವೆ. ಹಿರಿಯ ಕಾರ್ಯಕರ್ತರ ಜೊತೆ ಚರ್ಚೆ ಮಾಡಿ ವರಿಷ್ಠರು ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರು ಅಂತಿಮವಾಗಿ ತೀರ್ಮಾನ ಮಾಡಲಿದ್ದಾರೆ. ದೆಹಲಿಯಲ್ಲಿ ಭೇಟಿಯಾಗಿದ್ದು, ಸಿ.ಪಿ.ಯೋಗೇಶ್ವರ್ ಅವರು ಎನ್‌ಡಿಎ ಅಭ್ಯರ್ಥಿ ಆಗುವ ಬಗ್ಗೆ ಹೇಳಿದ್ದಾರೆ ಎಂದ ಅವರು, ನಟ ದರ್ಶನ್ ವಿಚಾರಕ್ಕೆ ಮಾತನಾಡಲ್ಲ ಎಂದು ನಿರಾಕರಿಸಿದರು.

ಸೆಪ್ಟೆಂಬರ್‌ನಲ್ಲಿ ಗಗನಚುಕ್ಕಿ ಜಲಪಾತೋತ್ಸವ

ಮಳವಳ್ಳಿ: ತಾಲೂಕಿನ ವಿಶ್ವಪ್ರಸಿದ್ಧ ಶಿವನಸಮುದ್ರದ ಗಗನಚುಕ್ಕಿ ಪ್ರವಾಸಿ ತಾಣವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಜಲಪಾತೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.



ಶಿವನಸಮುದ್ರ (ಬ್ಲಫ್)ದ ಲಕ್ಷದ್ವೀಪ ಹೋಟೆಲ್‌ನಲ್ಲಿ ಭಾನುವಾರ ಗಗನಚುಕ್ಕಿ ಜಲಪಾತೋತ್ಸವಕ್ಕೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಸೆಪ್ಟೆಂಬರ್ ತಿಂಗಳಲ್ಲಿ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಗಗನಚುಕ್ಕಿ ಜಲಪಾತೋತ್ಸವ ಎರಡು ದಿನಗಳ ಕಾಲ ನಡೆಯಲಿದ್ದು, ವೇದಿಕೆ ಕಾರ್ಯಕ್ರಮ, ಜಾನಪದ, ರಸಮಂಜರಿ, ಹಾಸ್ಯ, ಕಾಮಿಡಿ ಕಿಲಾಡಿ ಕಾರ್ಯಕ್ರಮ ಸೇರಿದಂತೆ ವಿವಿಧ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳ ರಸದೌತಣ ಸಾರ್ವಜನಿಕರಿಗೆ ಆಯೋಜಿಸಲಾಗಿದೆ. ರಸ್ತೆ ಗುಂಡಿ ಮುಚ್ಚಿ ವಾಹನ ಸಂಚಾರಕ್ಕೆ ಅನುವು, ವಾಹನ ವ್ಯವಸ್ಥೆ, ಪಾರ್ಕಿಂಗ್ ವ್ಯವಸ್ಥೆ, ಹಾಗೂ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಊಟ, ನೀರಿನ ವ್ಯವಸ್ಥೆ ಮಾಡಲಾಗುವುದು,

ವಿದ್ಯುತ್ ದೀಪಾಲಂಕಾರ, ಲೇಸರ್ ವ್ಯವಸ್ಥೆ ಜತೆಗೆ ರೊಟ್ಟಿ ಕಟ್ಟೆಯಿಂದ ವೇದಿಕೆವರೆಗೂ ರಸ್ತೆ ಬದಿಯಲ್ಲಿ ಜಾನಪದ ಸೊಗಡು ಹೊಂದಿರುವ ಚಿತ್ರಗಳೊಂದಿಗೆ ಸ್ವಾಗತ ಫಲಕಗಳನ್ನು ಹಾಕಲಾಗುವುದು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಈ ಬಾರಿ ಉತ್ತಮ ಮಳೆಯಾಗಿ ಕೆಆರ್‌ಎಸ್ ತುಂಬಿರುವುದರಿಂದ ಗಗನಚುಕ್ಕಿ ಜಲಪಾತೋತ್ಸವ ಕಾರ್ಯಕ್ರಮ ಮಾಡುವುದಕ್ಕಾಗಿ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಮುಂದೆ ಮಳೆಯ ಪ್ರಮಾಣ ನೋಡಿಕೊಂಡು ದಿನಾಂಕವನ್ನು ನಿಗದಿ ಮಾಡಲಾಗುವುದು ಎಂದರು.

ಕಸಾಪ ಸಮ್ಮೇಳನ ಸ್ವಯಂ ಸೇವಕರಿಗೆ ತರಬೇತಿ ಬಹುಮುಖ್ಯ

ಮಂಡ್ಯ,ಸೆ.1– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಪರಿಣಾಮಕಾರಿಯಾಗಿ ಜರುಗಲು ಜಿಲ್ಲೆಯಲ್ಲಿರುವ ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ಸ್ಕೌಟ್ ಮತ್ತು ಗೈಡ್ಸ್ ತಂಡಗಳ ಸ್ವಯಂ ಸೇವಕರಿಗೆ ಪೂರ್ಣ ಪ್ರಮಾಣದ ತರಬೇತಿ ನೀಡುವುದು ಬಹುಮುಖ್ಯವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಹಾಗೂ ಸ್ವಯಂ ಸೇವಕರು ಮತ್ತು ಉಸ್ತುವಾರಿ ಸಮಿತಿಯ ಅಧ್ಯಕ್ಷ ಕೆ.ವಿವೇಕಾನಂದ ತಿಳಿಸಿದರು.

ಭಾನುವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸ್ವಯಂ ಸೇವಕರು ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳು, ಪಿಯು ಕಾಲೇಜು, ಪ್ರೌಢಶಾಲೆಯ ಎನ್‌ಸಿಸಿ, ಎನ್‌ಎಸ್‌ಎಸ್ ತಂಡಗಳು, ಸ್ಕೌಟ್ ಅಂಡ್ ಗೈಡ್ಸ್ ತಂಡಗಳು, ಬಿಎಡ್ ಕಾಲೇಜು ವಿದ್ಯಾರ್ಥಿಗಳನ್ನು ಸ್ವಯಂ ಸೇವಕರುಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಅವರಿಗೆ ಬ್ಯಾಡ್ಜ್, ಟೀ ಶರ್ಟ್, ಟೋಪಿ ಹಾಗೂ ಕಾರ್ಯಕ್ರಮದ ಕೊನೆಯಲ್ಲಿ ಅಭಿನಂದನಾ ಪತ್ರವನ್ನು ನೀಡುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಬರುವ ಪಿಯು ಕಾಲೇಜಿನ ಸ್ವಯಂ ಸೇವಕರುಗಳ ತಂಡಕ್ಕೆ ಒಬ್ಬ ಸದಸ್ಯರನ್ನು ಮುಖ್ಯಸ್ಥರನ್ನಾಗಿ ನೇಮಕ ಮಾಡಿ ಜವಾಬ್ದಾರಿಯನ್ನು ವಹಿಸಬೇಕು. ಅದರಂತೆಯೇ ಪದವಿ ಕಾಲೇಜಿನ ಸ್ವಯಂ ಸೇವಕರ ತಂಡ, ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಎನ್‌ಸಿಸಿ, ಎನ್‌ಎಸ್‌ಎಸ್ ತಂಡ, ಬಿಎಡ್ ವಿದ್ಯಾರ್ಥಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆಗಳ ಮುಖ್ಯಸ್ಥರಿಗೆ ವಹಿಸಲಾಗುವುದು ಎಂದರು.

ರಾಜಕಾರಣವನ್ನು ಕಲುಷಿತಗೊಳಿಸಬಾರದು



ಕಾಂಗ್ರೆಸ್ ಕಚೇರಿಯಲ್ಲಿ ಆರ್.ವಿ. ದೇಶಪಾಂಡೆ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಸೆ.1(ಬಿಎಲ್‌ಯು)– ರಾಜಕಾರಣವನ್ನು ಕಲುಷಿತಗೊಳಿಸುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಸಲಹೆ ನೀಡಿದರು.

ನಗರ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮತ್ತಷ್ಟು ಬಲಗೊಳ್ಳಬೇಕು ಎಂದು ಹೇಳಿದರು. ನಾನು ಯಾವುದೇ ಜಿಲ್ಲೆಗೆ ಭೇಟಿ ನೀಡಿದರೂ ಕಾಂಗ್ರೆಸ್ ಪಕ್ಷದ ಕಚೇರಿಗೆ ಭೇಟಿ ನೀಡುತ್ತೇನೆ. ನನ್ನ ಭೇಟಿ ಬಗ್ಗೆ ಪಕ್ಷದ ಅಧ್ಯಕ್ಷರಿಗೆ ಪ್ರವಾಸದ ಬಗ್ಗೆ ಮಾಹಿತಿ ನೀಡಿ, ಪಕ್ಷದ ಶಿಸ್ತು ಪಾಲಿಸುತ್ತೇನೆ ಎಂದು ದೇಶಪಾಂಡೆ ಹೇಳಿದರು. ಈ ವೇಳೆ ನಗರ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ದೇಶಪಾಂಡೆ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮುಖಂಡರಾದ ಹೆಚ್.ವಿ. ರಾಜೀವ್, ಟಿ.ಎಸ್.ರವಿ ಶಂಕರ್, ರವಿ ಮಂಚೇಗೌಡನ ಕೊಪ್ಪಲು, ಮಾಜಿ ಮೇಯರ್ ಪುಷ್ಪಲತಾ, ಮೋದಾಮಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಳೆ ಮುಖ್ಯಮಂತ್ರಿ ಚಾಮುಂಡೇಶ್ವರಿ ದರ್ಶನ

ಶ್ರೀ ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆ ನಡೆಸಲಿರುವ ಮುಖ್ಯಮಂತ್ರಿಗಳು

ಮೈಸೂರು, ಸೆ.1(ಆರ್‌ಕೆ)– ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಸಂಕಷ್ಟಕ್ಕೀಡಾಗಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ, ಈಗ ಚಾಮುಂಡೇಶ್ವರಿ ಮೊರೆ ಹೋಗಿದ್ದಾರೆ. ಮಂಗಳವಾರ ನಾಡದೇವಿಯ ದರ್ಶನ ಮಾಡಲು ನಿರ್ಧರಿಸಿದ್ದಾರೆ. ಅವರು ಸೋಮವಾರ ರಾತ್ರಿ 7.25 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿಗೆ ಬಂದು ವಾಸ್ತವ್ಯ ಹೂಡಲಿರುವ ಮುಖ್ಯಮಂತ್ರಿಗಳು, ಸೆಪ್ಟೆಂಬರ್ 3ರಂದು ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿ ವಿಶೇಷ ಪ್ರಾರ್ಥನೆ ಸಲ್ಲಿಸುವರು. ಬಳಿಕ ಬೆಳಗ್ಗೆ 10.30 ಗಂಟೆಗೆ ಅಲ್ಲಿನ ದಾಸೋಹ ಭವನದ 2ನೇ ಮಹಡಿಯಲ್ಲಿ ಶ್ರೀ ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆ ನಡೆಸುವರು. ಅದೇ ವೇಳೆ ಚಾಮುಂಡಿ ಬೆಟ್ಟದಲ್ಲಿ ಪೂರ್ಣಗೊಂಡಿರುವ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಲಿರುವ ಸಿದ್ದರಾಮಯ್ಯ, ಮಧ್ಯಾಹ್ನ 2 ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗುವುದಾಗಿ ಎಂದು ಅವರ ಪ್ರವಾಸ ಕಾರ್ಯ ಕ್ರಮ ಪಟ್ಟಿಯಲ್ಲಿ ತಿಳಿಸಲಾಗಿದೆ.



ಈ ವೇಳೆ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಜಿಲ್ಲೆಯ ಶಾಸಕರು, ವಿಧಾನಪರಿಷತ್ ಸದಸ್ಯರು, ಶ್ರೀ ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಜೆ. ರೂಪಾ, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸುವರು.

ಪದ್ಮಭೂಷಣ ಡಾ.ಪಂ.ಪುಟ್ಟರಾಜ ಗವಾಯಿ ಅವರಿಗೆ ಗುರುವಂದನೆ

ಮೈಸೂರು,ಸೆ.1(ಎಸ್‌ಪಿಎನ್)– ಪದ್ಮಭೂಷಣ ಡಾ.ಪಂ.ಪುಟ್ಟರಾಜ ಗವಾಯಿ ಅವರು ಹಿಂದೂಸ್ತಾನಿ, ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಸಾಧಕರಲ್ಲೊಬ್ಬರು. ಅವರು ಸಂಗೀತ ಕ್ಷೇತ್ರದ ಅನರ್ಘ್ಯ ರತ್ನ ಎಂದರೆ ತಪ್ಪಾಗಲಾರದು ಎಂದು ಹಿರಿಯ ಕಲಾವಿದ ಪಂಡಿತ್ ವೀರಭದ್ರಯ್ಯ ಹಿರೇಮಠ್ ಅಭಿಪ್ರಾಯಪಟ್ಟರು.



ಮೈಸೂರು ತೊಣಚಿಕೊಪ್ಪಲಿನ ಶ್ರೀರಾಘವೇಂದ್ರ ಸ್ವಾಮಿ ಮಠದ ಸಭಾಂಗಣದಲ್ಲಿ ಪದ್ಮಭೂಷಣ ಡಾ.ಪಂ.ಪುಟ್ಟರಾಜ ಗವಾಯಿಗಳ ಶಿಷ್ಯ ಪ್ರಶಿಷ್ಯ ಬಳಗ ಹಾಗೂ ಪಂ.ರಮೇಶ್ ಧನ್ನೂರ್ ರವರ ಶಿಷ್ಯ ವೃಂದ ಸಹಯೋಗದೊಂದಿಗೆ ಏರ್ಪಡಿಸಿದ್ದ ಗುರುವಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಪುಟ್ಟರಾಜ ಗವಾಯಿಗಳು 12ನೇ ಶತಮಾನದ ಭಕ್ತಿ ಚಳವಳಿಯ ಅನೇಕ ಶರಣರ ಜೀವನ ಚರಿತ್ರೆಗಳ ಜೊತೆಗೆ ಆಧ್ಯಾತ್ಮಿಕತೆ ಸೇರಿದಂತೆ 80 ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ. ಅವರು, ಕನ್ನಡ, ಹಿಂದಿ ಮತ್ತು ಸಂಸ್ಕೃತದಲ್ಲಿ ರಚಿಸಿದ್ದು, ಬ್ರೈಲ್ ಲಿಪಿಯಲ್ಲಿ ಭಗವದ್ಗೀತೆಯನ್ನು ರಚಿಸಿ, ಈ ನಾಡಿಗೆ ಕೊಡುಗೆ ನೀಡಿದ್ದಾರೆ ಎಂದರು.

ಗುರುವಂದನಾ ಕಾರ್ಯಕ್ರಮದಲ್ಲಿ ಪಂಡಿತ್ ರಮೇಶ್ ಧನ್ನೂರ್ ದಂಪತಿ ಸೇರಿದಂತೆ ಇತರೆ ಕಲಾವಿದರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಹಿರಿಯ ಕಲಾವಿದರಾದ ವಿದ್ವಾನ್ ಮೈಸೂರು ಅಂಬಾಪ್ರಸಾದ್, ವಿದ್ವಾನ್ ಅನಂತ್ ಹಂಪಿ ಹೊಳೆ ಸೇರಿದಂತೆ ಇತರರಿದ್ದರು. ನಂತರ ಪಂ.ವೀರಭದ್ರಯ್ಯ ನೇತೃತ್ವದಲ್ಲಿ ತಾಲ, ಗಾನ, ಯಾನ ವಾದನ ನಡೆಸಿಕೊಟ್ಟರು. ಜ್ಯೂನಿಯರ್, ಸಬ್ ಜ್ಯೂನಿಯರ್ ವಿದ್ಯಾರ್ಥಿಗಳಿಂದ ತಬಲಾ ವಾದನ ನಡೆಸಿಕೊಟ್ಟರು.

ಅಸ್ಸಾಂನಲ್ಲಿ ಟಿಎಂಸಿ ಪಕ್ಷ ತೊರೆದ ಅಧ್ಯಕ್ಷ ರಿಪುನ್ ಬೋರಾ!

ಅಸ್ಸಾಂ: ಪಶ್ಚಿಮ ಬಂಗಾಳದಲ್ಲಿ ವೈದ್ಯೆಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಿಂದ ಮುಜುಗರಕ್ಕೀಡಾಗಿರುವ ಆಡಳಿತ ಪಕ್ಷ ತೃಣ ಮೂಲ ಕಾಂಗ್ರೆಸ್‌ಗೆ ಅಸ್ಸಾಂನಲ್ಲಿ ಆಘಾತ ಎದುರಾಗಿದೆ.



ಅಸ್ಸಾಂನ ತೃಣಮೂಲ ಕಾಂಗ್ರೆಸ್ ಅಧ್ಯಕ್ಷ ರಿಪುನ್ ಬೋರಾ ಭಾನುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅಸ್ಸಾಂನ ಜನತೆ ಟಿಎಂಸಿಯನ್ನು ಪಶ್ಚಿಮ ಬಂಗಾಳದ ಪ್ರಾದೇಶಿಕ ಪಕ್ಷವನ್ನಾಗಿ ಗುರುತಿಸುತ್ತಾರೆ. ಅದನ್ನು ತಮ್ಮ ಪಕ್ಷ ಎಂದು ಒಪ್ಪಿಕೊಳ್ಳಲು ಇಲ್ಲಿನ ಜನತೆ ಸಿದ್ಧರಿಲ್ಲ ಎಂದು ರಿಪುನ್ ಬೋರಾ ರಾಜೀನಾಮೆ ಬಳಿಕ ಹೇಳಿದ್ದಾರೆ.

'ವಿಶ್ವಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್' ಪುಸ್ತಕ ಬಿಡುಗಡೆ

ಅಂಬೇಡ್ಕರ್ ಚಿಂತನೆಯ ಗಟ್ಟಿ ಧ್ವನಿಯಾಗಿದ್ದ ಪ್ರೊ.ಮಹೇಶ್ ಚಂದ್ರಗುರು ; ಶಾಸಕ ಪಿ.ಎಂ.ನರೇಂದ್ರಸ್ವಾಮಿ ಸ್ಮರಣೆ

ಮೈಸೂರು,ಸೆ.1(ಪಿಎಂ)–ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳಿಗೆ ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು ಗಟ್ಟಿಧ್ವನಿಯಾಗಿದ್ದರು ಎಂದು ಮಾಜಿ ಸಚಿವರೂ ಆದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಸ್ಮರಿಸಿದರು.



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಭಾನುವಾರ 'ವಿಶ್ವಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್' ಪುಸ್ತಕ ಬಿಡುಗಡೆ ಮಾಡಲಾಯಿತು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿವಿ ಸಂಶೋಧಕರ ಸಂಘ ಮತ್ತು ಎಲ್ಲಾ ವಿದ್ಯಾರ್ಥಿ ಹಾಗೂ ಪ್ರಗತಿಪರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪ್ರಕಟಿಸಿರುವ ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು ಅವರ 'ವಿಶ್ವಮಾನ್ಯ ಬಾಬಾಸಾಹೇಬ್ ಅಂಬೇಡ್ಕರ್' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಮಹೇಶ್ ಚಂದ್ರಗುರು ಅವರು ವಿದ್ಯಾರ್ಥಿಪರ ಚಿಂತನೆ ಹೊಂದಿದ್ದರು. ಅವರಲ್ಲಿದ್ದ ವಿದ್ಯಾರ್ಥಿ ಸ್ನೇಹಿ ವ್ಯಕ್ತಿತ್ವವನ್ನು ಇಂದಿನ ಶಿಕ್ಷಕ ವೃಂದದಲ್ಲಿ ಅಷ್ಟಾಗಿ ಕಾಣಲಾಗದು. ಅಂತಹ ಮಹಾನ್‌ಚೇತನ ಇಂದು ನಮ್ಮ ನಡುವೆ ಇಲ್ಲ. ಅವರು ನಿರ್ದಾಕ್ಷಿಣ್ಯವಾಗಿ ಸತ್ಯ ನುಡಿಯುತ್ತಿದ್ದರು. ಜನಪರ ಕಾಳಜಿ ವಿಚಾರದಲ್ಲಿ ನಿಷ್ಠುರವಾದಿ ಆಗಿದ್ದರು. ಅವರ ಅಂತಿಮ ದರ್ಶನಕ್ಕೆ ಬರುವಾಗ ಮಳೆಯಲ್ಲಿ ಸಿಕ್ಕಿಕೊಂಡ ಕಾರಣ ನನಗೆ ಅವರ ಮುಖದ ದರ್ಶನ ಸಿಗಲಿಲ್ಲ. ಆ ನೋವು ಕಾಡುತ್ತಿದೆ. ನನಗೆ ಅವರು ನೀನೊಬ್ಬ ಬಸವಲಿಂಗಪ್ಪ ರೀತಿಯಾಗಬೇಕು ಎನ್ನುತ್ತಿದ್ದರು. ಆ ದಾರಿಯಲ್ಲಿ ಎಷ್ಟು ಪರ್ಸೆಂಟ್ ಹೆಜ್ಜೆ ಇಟ್ಟಿದ್ದೇನೋ ಗೊತ್ತಿಲ್ಲ. ಅಂತಹ ಜ್ಞಾನಿಯಂತೂ ಅಲ್ಲ. ಆದರೆ ಹೋರಾಟದ ಕಿಚ್ಚಂತೂ ಹೊಂದಿದ್ದೇನೆ ಎಂದು ತಿಳಿಸಿದರು.

ನಾನು ಬೆಂಗಳೂರು ವಿವಿಯಲ್ಲಿ ಶಿಕ್ಷಣ ಪಡೆಯುವಾಗ ಮಹೇಶ್ ಚಂದ್ರಗುರು ನಮ್ಮ ಹಾಸ್ಟೆಲ್ ವಾರ್ಡನ್ ಆಗಿದ್ದರು. ಆ ಸಂದರ್ಭದಲ್ಲಿ ಅವರು ನಮ್ಮೆಲ್ಲರಲ್ಲಿ ನಾಯಕತ್ವ ಗುಣ ಬೆಳೆಸಲು ಹುರಿದುಂಬಿಸುತ್ತಿದ್ದರು. ಅಂದು ಬೆಂಗಳೂರು ವಿವಿಯ ವಿದ್ಯಾರ್ಥಿ ಸಂಘಟನೆ ಚುನಾವಣೆಯು ಜಾತಿ ಆಧಾರಿತವಾಗಿ ನಡೆಯುತ್ತಿತ್ತು. ಸಂಘಟನೆಯ ಅಧ್ಯಕ್ಷ ಪದವಿಗೆ ನಮ್ಮಂತಹ ಶೂದ್ರರೊಳಗಿನ ಶೂದ್ರರಿಗೆ ಅವಕಾಶ ಕಡಿಮೆ ಇತ್ತು. ಹಾಸ್ಟೆಲ್‌ನಲ್ಲಿ ಎಸ್‌ಸಿ–ಎಸ್‌ಟಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದಿಂದ ಬಿಟ್ಟಿ ಊಟ ಮಾಡುತ್ತಾರೆ ಎಂಬ ಭಾವನೆಯೂ ಇದ್ದಿತು. ಅಂದು ಹೊಸದಾಗಿ ತಲೆ ಎತ್ತಿದ್ದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಉತ್ತರ ಭಾರತೀಯರ ದರ್ಪವೂ ಹೆಚ್ಚಿತ್ತು. ಈ ನಡುವೆ ಜಾತಿ ವ್ಯವಸ್ಥೆ ವಿರುದ್ಧವೂ ಹೋರಾಟ ಮಾಡಬೇಕಿತ್ತು. ಇಂತಹ ಸಂದರ್ಭದಲ್ಲಿ ನಮ್ಮನ್ನು ಕೂರಿಸಿಕೊಂಡು ಮಹೇಶ್‌ಚಂದ್ರಗುರು ಅವರು ಒಗ್ಗಟ್ಟು ಹಾಗೂ ನಾಯಕತ್ವ ಬೆಳೆಸುವ ಪಾಠ ಹೇಳುತ್ತಿದ್ದರು ಎಂದು ಸ್ಮರಿಸಿದರು.

ಅಸಮಾನತೆಯನ್ನು ಮಹೇಶ್ ಚಂದ್ರಗುರು ಸಹಿಸದೇ ಸಮಸಮಾಜ ನಿರ್ಮಾಣಕ್ಕೆ ಗಟ್ಟಿ ಧ್ವನಿಯಾಗಿದ್ದರು. ನಾನು ಸಹ ವಿದ್ಯಾರ್ಥಿ ದೆಸೆಯಿಂದಲೇ ಅಸಮಾನತೆಯನ್ನು ಸಹಿಸುತ್ತಿರಲಿಲ್ಲ. ನಾನು ಪ್ರಥಮ ಬಾರಿಗೆ ಸಚಿವನಾದಾಗ, ಕಾಂಗ್ರೆಸ್ ಟಿಕೆಟ್ ಸಿಗದೇ ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಗೆದ್ದು ಬಂದೆ. ಆಗಿನ ವಿಷಾದದ ಸಂಗತಿಯೆಂದರೆ ನನಗೆ ವಿರುದ್ಧವಾಗಿ ಬೆಳೆದ ಸಂಘಟನೆಗೆ ಬೆಂಬಲ ನೀಡಿ ಸಚಿವನಾಗುವ ದೌರ್ಭಾಗ್ಯ ಬಂದಿತು. ಹಾಗಾಗಿಯೇ ಹೆಚ್ಚು ಕಾಲ ಅಲ್ಲಿ ಉಳಿಯಲಿಲ್ಲ. ನಾನು ಸುಪ್ರಿಂಕೋರ್ಟ್‌ನಲ್ಲಿ ಕೇಸು ಗೆಲ್ಲುವ ತನಕ ಪಡಬಾರದ ಪಾಡುಪಟ್ಟೆ. ಆಗ ಈ ವ್ಯವಸ್ಥೆಯಲ್ಲಿ ಶೋಷಣೆ ಯಾವ ಹಂತಕ್ಕೆ ಹೋದರು ಬಿಡುವುದಿಲ್ಲ. ಸಚಿವನಾದರೂ ಅಷ್ಟೇ ಎಂಬ ಸತ್ಯದ ದರ್ಶನವಾಯಿತು. ಏಕೆಂದರೆ ಶೂದ್ರರಲ್ಲಿ ಒಗ್ಗಟ್ಟು ಇಲ್ಲ. ಕಾರಣ ಅವರೊಳಗೆ ಶ್ರೇಣೀಕೃತ ಸಮಾಜ ಸೃಷ್ಟಿ ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ನುಡಿ ನಮನ ಸಲ್ಲಿಸಿದ ಹಿರಿಯ ಸಾಹಿತಿ ಪ್ರೊ.ಕೆ.ಎಸ್. ಭಗವಾನ್, ಮಹೇಶ್ ಚಂದ್ರಗುರು ಅವರು ಸಮಾಜದಲ್ಲಿ ಉನ್ನತ ಬದಲಾವಣೆ ತರಬೇಕೆಂದು ಬಯಸಿದ್ದ ಅಪರೂಪದ ಚಿಂತಕರು. ನಮ್ಮದು ಜಾತಿಗ್ರಸ್ತ ಸಮಾಜ. ಯಾವ ಧರ್ಮದಲ್ಲಿಯೂ ಇಲ್ಲದಂತಹ ಕೊಳಕು ಜಾತಿ ವ್ಯವಸ್ಥೆ ಇಲ್ಲಿದೆ. ಆದರೆ ಬೇರೆ ಯಾವ ಧರ್ಮದಲ್ಲೂ ಈ ರೀತಿಯ ಅಸಮಾನತೆ ಇಲ್ಲ. ಹಾಗಾಗಿ ಹಿಂದೂ ಧರ್ಮ ಹಿಂದಕ್ಕೆ ಚಲಿಸುತ್ತಿದೆ. ಇದು ಮುಂದಕ್ಕೆ ಹೋಗಲಾಗದು. ಇಂತಹ ಅಸಮಾನತೆಯ ವಿರುದ್ಧ ದಿಟ್ಟ ಹೋರಾಟ ಮಾಡಿದವರು ಮಹೇಶ್ ಚಂದ್ರಗುರು. ಯುವ ಜನರನ್ನು ಪ್ರೀತಿ ವಿಶ್ವಾಸಕ್ಕೆ ತೆಗೆದುಕೊಂಡು ಅವರ ಮೂಲಕ ಸಮಾಜದಲ್ಲಿ ಬದಲಾವಣೆ ತರಬೇಕೆಂಬುದರಲ್ಲಿ ಕಾಳಜಿ ಹೊಂದಿದ್ದ ಮಹೇಶ್‌ಚಂದ್ರಗುರು ಅವರಿಗೆ ಡಾ.ಅಂಬೇಡ್ಕರ್ ದೊಡ್ಡ ಆದರ್ಶವಾಗಿದ್ದರು ಎಂದರು.

> ಮಹೇಶ್ ಚಂದ್ರಗುರು ಹಾಸ್ಟೆಲ್‌ನಲ್ಲಿ ಬಡ ವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದರು. ಪದವಿ ಮುಗಿಸಿ ತಮ್ಮ ಊರುಗಳಿಗೆ ಹಿಂತಿರುಗಿ ಹೋಗಲಾಗದ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುವವರೆಗೆ ಹಾಸ್ಟೆಲ್‌ನ ಯಾರದಾದರೂ ರೂಮ್‌ನಲ್ಲಿ ಇರಲು ಅವಕಾಶ ಕೊಡುತ್ತಿದ್ದರು. ಪ್ರೊ.ಕೆ.ಎಸ್. ಭಗವಾನ್, ಮಹೇಶ್‌ಚಂದ್ರಗುರು ಮೊದಲಾದ ಚಿಂತಕರ ಕಾರಣಕ್ಕೆ ಮೈಸೂರು ವಿವಿಯು ಅಂಬೇಡ್ಕರ್ ಚಿಂತನೆ ಸೇರಿದಂತೆ ಸತ್ಯದ ವಿಚಾರಗಳಿಗೆ ಗಟ್ಟಿಧ್ವನಿ ಕೇಂದ್ರವಾಗಿದೆ. ಆದರೆ ಹಿಂದಿನ ದಿನಗಳಿಗೆ ಹೋಲಿಸಿದರೆ ಪ್ರಸ್ತುತಕ್ಕೆ ಅದು ಸಾಲದು.
>
> - ಪಿ.ಎಂ.ನರೇಂದ್ರಸ್ವಾಮಿ, ಶಾಸಕ

ಗಾಂಧಿನಗರದ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮಾಜಿ ಮೇಯರ್ ಪುರುಷೋತ್ತಮ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು ಅವರ ಪತ್ನಿ ಪ್ರೊ.ಸಿ. ಹೇಮಾವತಿ, ಹಿರಿಯ ಪತ್ರಕರ್ತ ಡಾ.ಕೆ.ಶಿವಕುಮಾರ್, ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಎನ್.ನಾಗರಾಜು, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ್, ಪ್ರಸಾರಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಮುಖಂಡರಾದ ದಿಲೀಪ್ ನರಸಯ್ಯ, ಮರಿದೇವಯ್ಯ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 2 ಸೆಪ್ಟೆಂಬರ್ 2024

ಬಿ.ವೈ. ವಿಜಯೇಂದ್ರಗೆ ಅಭಿನಂದನೆ...



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬೆಂಗಳೂರಿನ ಅವರ ನಿವಾಸ ಧವಳಗಿರಿಯಲ್ಲಿ ಬಿದರಗೂಡು ಹಾಲು ಉತ್ಪಾದಕ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡ ಗುರುಪಾದಸ್ವಾಮಿ ಅವರ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರ ಬಿಜೆಪಿ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪಂಚಾಕ್ಷರಿ, ಮುಖಂಡರಾದ ನವೀನ್ ಕುಮಾರ್, ಹರೀಶ್ ಸಾತಗಹಳ್ಳಿ, ಮಹೇಂದ್ರ ಶೈವ, ತೀರ್ಥಗೌಡ ಹಾಜರಿದ್ದರು.

ಒಕ್ಕಲಿಗರ ಆರಕ್ಷಕರ ಸೇವಾ ಟ್ರಸ್ಟ್‌ನಿಂದ ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಅಭಿನಂದನೆ; ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಒಕ್ಕಲಿಗರ ಆರಕ್ಷಕರ ಸೇವಾ ಟ್ರಸ್ಟ್ ವತಿಯಿಂದ ಮೈಸೂರಿನ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.1(ಆರ್‌ಕೆ)– ಒಕ್ಕಲಿಗರ ಆರಕ್ಷಕರ ಸೇವಾ ಟ್ರಸ್ಟ್ ವತಿಯಿಂದ ಮೈಸೂರಿನ ಜಯನಗರದಲ್ಲಿರುವ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ನಡೆದ ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮೈಸೂರು ನಗರ ಮಾಜಿ ಪೊಲೀಸ್ ಆಯುಕ್ತರಾದ ಸಿ.ಚಂದ್ರಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸಿದ ಬಳಿಕ ನಿವೃತ್ತ ಎಸಿಪಿಗಳಾದ ಜಿ.ಎನ್.ಮೋಹನ್, ರಾಮೇಗೌಡ, ನಿವೃತ್ತ ಡಿವೈಎಸ್ಪಿಗಳಾದ ಧನಂಜಯ, ಜಯರಾಂ, ಜೆ.ಬಿ.ರಂಗಸ್ವಾಮಿ ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ ಗೋಪಾಲಕೃಷ್ಣ ಅವರನ್ನು ಸನ್ಮಾನಿಸಿದರು.

ಅದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು.

ಈ ಸಂದರ್ಭ ಮಾತನಾಡಿದ ಸಿ. ಚಂದ್ರಶೇಖರ್, ಪೊಲೀಸರ ಮಕ್ಕಳು ಪೊಲೀಸರೇ ಆಗಬೇಕೆಂದಿಲ್ಲ. ಪೋಷಕರು ತಮ್ಮ ಮಕ್ಕಳ ಪ್ರತಿಭೆ, ಆಸಕ್ತಿಗನುಗುಣವಾಗಿ ಪ್ರೇರಣೆ ನೀಡಿ ಉತ್ತಮ ಭವಿಷ್ಯ ರೂಪಿಸಲು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಪೊಲೀಸರ ಆರೋಗ್ಯ ಮತ್ತು ಕಲ್ಯಾಣಕ್ಕೆ ಆದ್ಯತೆ ನೀಡಬೇಕು. ನಿವೃತ್ತಿ ನಂತರ ಇಲಾಖೆ ಸಂಬಂಧ ಕಡಿತವಾಯಿತೆಂಬ ಭಾವನೆ ಬರಬಾರದು. ಇಲಾಖೆಯೂ ಸಹ ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕೆಂಬ ತಮ್ಮ ಕಲ್ಪನೆಯನ್ನು ಆಸ್ಪತ್ರೆ, ಕಲ್ಯಾಣ ಮಂಟಪ (ಪೊಲೀಸ್ ಭವನ)ವನ್ನು ಸಾಕಾರಗೊಳಿಸಿದೆ ಎಂದ ಅವರು, ಆಯುಕ್ತರಾಗಿದ್ದಾಗ ಕೆಂಪಯ್ಯ ಆರಂಭಿಸಿದ್ದ ಮೈಸೂರಿನ ಪೊಲೀಸ್ ಭವನ ಕಟ್ಟಡವನ್ನು ತಾವು ಪೂರ್ಣಗೊಳಿಸಿದ್ದನ್ನು ಇದೇ ಸಂದರ್ಭ ಸ್ಮರಿಸಿಕೊಂಡರು.

ಕರುಣಾಮಯಿ ಟ್ರಸ್ಟ್‌ನ ನಾಲ್ವರು ಅಂಧರು, ಜಯನಗರ ಸ್ಮಶಾನದಲ್ಲಿ 13 ವರ್ಷಗಳಿಂದ ಪಾರ್ಥಿವ ಶರೀರಗಳ ಅಂತ್ಯಕ್ರಿಯೆ ಕಾಯಕ ಮಾಡುತ್ತಿರುವ ಜವರಯ್ಯ ಅವರನ್ನು ಗೌರವಿಸಲಾಯಿತು.

ಒಕ್ಕಲಿಗ ಆರಕ್ಷಕರ ಸೇವಾ ಟ್ರಸ್ಟ್‌ನ ಕಾನೂನು ಸಲಹೆಗಾರರಾದ ಬಿ.ಪಿ. ಸುರೇಶ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಜಿಪಿ ಕೆ.ಟಿ.ಬಾಲಕೃಷ್ಣ, ಆಂತರಿಕ ಭದ್ರತಾ ವಿಭಾಗದ ಎಸ್ಪಿ ಡಾ.ಎ.ಎನ್. ಪ್ರಕಾಶ್‌ಗೌಡ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ. ರವಿಕುಮಾರ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್, ಸುಕನ್ಯ ರಾಮಲಿಂಗು, ಶ್ರೀಮತಿ ರೂಪಾ ಸಿ. ಚಂದ್ರಶೇಖರ್, ಟ್ರಸ್ಟ್‌ನ ಗೌರವಾಧ್ಯಕ್ಷ ಟಿ.ಎನ್.ನಾಗೇಶ್, ಅಧ್ಯಕ್ಷ ಸಿ.ಧನಂಜಯ, ಉಪಾಧ್ಯಕ್ಷರಾದ ಟಿ.ಚೆಲುವೇಗೌಡ, ಶ್ರೀನಿವಾಸಗೌಡ, ಮೊಗಣ್ಣೇಗೌಡ, ಹೆಚ್.ಎಲ್.ವೀಣಾ, ಕಾರ್ಯಾಧ್ಯಕ್ಷ ಜೆ. ಸ್ವಾಮಿ, ಪ್ರಧಾನ ಕಾರ್ಯದರ್ಶಿ ಮರೀಗೌಡ, ಪದಾಧಿಕಾರಿಗಳಾದ ಎಂ.ಆರ್. ಗಣೇಶ್, ಕೆ.ಎಂ. ನಾರಾಯಣ್, ಎಸ್. ಕೃಷ್ಣೇಗೌಡ, ಬಿ.ಎನ್.ಲಿಂಗರಾಜು, ಇಂದ್ರಮ್ಮ, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಪಾಲ್ಗೊಂಡಿದ್ದರು.

ಕೇಂದ್ರ ಸರ್ಕಾರ ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಾ ಬಂದಿದೆ: ಎಲ್‌ಆರ್‌ಎಂ



ಬಿಜೆಪಿ ಕಚೇರಿಯಲ್ಲಿ ನಡೆದ ರೈತಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿದರು.

ಮೈಸೂರು, ಸೆ1(ಎಂಕೆ)– ಕೇಂದ್ರಸರ್ಕಾರವು ಹಲವು ಯೋಜನೆಗಳ ಮೂಲಕ ರೈತರ ಕಷ್ಟಕ್ಕೆ ಸ್ಪಂದಿಸಿದೆ ಎಂದು ಬಿಜೆಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ರೈತಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ರೈತರಿಗೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಅಡಿ 6 ಸಾವಿರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರಂಭವಾದ 4 ಸಾವಿರ ರೂ. ಸೇರಿ ಒಟ್ಟು 10 ಸಾವಿರ ರೂ. ನೀಡಲಾಗುತ್ತಿದೆ ಎಂದರು.

ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಹೆಸರುಕಾಳು, ಸೂರ್ಯಕಾಂತಿ, ಉದ್ದು ಹಾಗೂ ಸೋಯಾಬೀನ್ ಖರೀದಿಸಲು ನಿರ್ಧರಿಸಿದೆ. ರೈತರ ಆದಾಯ ದ್ವಿಗುಣಗೊಳಿಸಲು ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನೀರಾವರಿ ವ್ಯವಸ್ಥೆ, ಆಧುನಿಕ ಕೃಷಿ ತಂತ್ರಜ್ಞಾನಗಳ ಅಳವಡಿಕೆಗೆ ಕೃಷಿ ವಿಕಾಸ್ ಯೋಜನೆ, ಸಾವಯವ ಕೃಷಿ ಉತ್ತೇಜನಕ್ಕೆ ಮಣ್ಣಿನ ಆರೋಗ್ಯ ಕಾರ್ಡ್ ವಿತರಣೆ, ಹೊಸ ಯೂರಿಯಾ ನೀತಿ ಜಾರಿಗೊಳಿಸಲಾಗಿದೆ ಇವುಗಳ ಬಗ್ಗೆ ರೈತ ಮೋರ್ಚಾ ಪದಾಧಿಕಾರಿಗಳು ರೈತರಿಗೆ ತಿಳಿಸಬೇಕು ಹಾಗೆಯೇ ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ಪಕ್ಷಕ್ಕೆ ಸದಸ್ಯತ್ವ ನೀಡುವ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಕಾಂಗ್ರೆಸ್‌ನ ಉಚಿತ ಯೋಜನೆಗಳಿಂದ ಅಭಿವೃದ್ಧಿ ಕ್ಷೀಣವಾಗಿದೆ. ಮುಡಾ ಹಗರಣ ಮುಚ್ಚಿ ಹಾಕಲು ಯತ್ನಿಸುತ್ತಿರುವ ಸಂಪುಟವೇ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದೆ. ಜನತೆ ನೆಮ್ಮದಿಯಿಂದ ಜೀವನ ನಡೆಸಲು ಬಿಜೆಪಿ ಸರ್ಕಾರ ಮತ್ತೆ ಅಸ್ತಿತ್ವಕ್ಕೆ ಬರಬೇಕು ಎಂದರು. ಜಿಲ್ಲಾ ರೈತಮೋರ್ಚಾ ಅಧ್ಯಕ್ಷ ಶ್ರೀನಿವಾಸ್ ಗೌಡ, ಪ್ರಧಾನ ಕಾರ್ಯದರ್ಶಿ ಮಹೇಶ್ ಬಾಬು, ಗಂಗಾಧರ್, ವೆಂಕಟೇಶ್, ಪದಾಧಿಕಾರಿಗಳು ಉಪಸ್ಥಿತರಿದ್ದರು.

ವಾಣಿಜ್ಯ ಬಳಕೆಯ 19 ಕೆಜಿ ಸಿಲಿಂಡರ್ ದರ 39 ರೂ. ಹೆಚ್ಚಳ



ನವದೆಹಲಿ: ತೈಲ ಮಾರಾಟ ಕಂಪನಿಗಳು ಇಂದಿನಿಂದಲೇ (ಭಾನುವಾರ) ಜಾರಿಗೆ ಬರುವಂತೆ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರವನ್ನು 39 ರೂ. ಹೆಚ್ಚಿಸಿವೆ. ದೆಹಲಿಯಲ್ಲಿ ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಸಿಲಿಂಡರ್ ದರವು 1,691ಕ್ಕೆ ಏರಿಕೆ ಆಗಿದೆ ಎಂದು ಸುದ್ದಿ ಸಂಸ್ಥೆ 'ಎಎನ್‌ಐ' ವರದಿ ಮಾಡಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಏರಿಕೆಗೆ ಅನುಗುಣವಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ಕಂಪನಿಗಳು ತಿಳಿಸಿವೆ.

ಜುಲೈನಲ್ಲಿ ಪ್ರತಿ ಸಿಲಿಂಡರ್‌ಗೆ 30 ರೂ. ಜೂನ್‌ನಲ್ಲಿ 69.50 ಮತ್ತು ಮೇನಲ್ಲಿ 19 ರೂ. ಹೆಚ್ಚಳ ಮಾಡಲಾಗಿತ್ತು. ಎಲ್‌ಪಿಜಿ ಬೆಲೆಗಳಲ್ಲಿನ ಹಠಾತ್ ಹೆಚ್ಚಳವು ರೆಸ್ಟೋರೆಂಟ್‌ಗಳು ಮತ್ತು ಹೋಟೆಲ್‌ಗಳಿಂದ ಹಿಡಿದು ಸಣ್ಣ–ಪ್ರಮಾಣದ ಕೈಗಾರಿಕೆಗಳವರೆಗೆ ವಿವಿಧ ವಲಯಗಳ ವ್ಯವಹಾರಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಯಿದೆ. ಈಗ ಸೆಪ್ಟೆಂಬರ್ 1ರಿಂದ ದೆಹಲಿ ಯಲ್ಲಿ 19 ಕೆಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ 1691.50 ರೂ.ಗೆ ಲಭ್ಯವಾಗಲಿದೆ. ಹೊಸ ದರಗಳ ಪ್ರಕಾರ ಇಂದಿನಿಂದ ವಾಣಿಜ್ಯ ಸಿಲಿಂಡರ್ ಬೆಲೆ 39 ರೂ. ಈಗ ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆ 1691.50 ರೂ. IOCL ವೆಬ್‌ಸೈಟ್ ಪ್ರಕಾರ, ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಹೆಚ್ಚಳವು ಸೆಪ್ಟೆಂಬರ್ 1ರಿಂದ ಜಾರಿಗೆ ಬಂದಿದೆ

ಹೊಲಿಗೆ ಎಂಬ್ರಾಯಿಡಿರಿ ಫೇಸ್ ಬ್ಯುಟಿಫಿಕೇಶನ್ ತರಬೇತಿ ಸಮಾರೋಪ



ಮೈಸೂರಿನ ಜೆ.ಪಿ.ನಗರ ಲಯನ್ಸ್ ಕ್ಲಬ್ಬಿನ ಸಹಯೋಗದಲ್ಲಿ ನಡೆಯುತ್ತಿದ್ದ ಹೊಲಿಗೆ ಎಂಬ್ರಾಯಿಡಿರಿ ಫೇಸ್ ಬ್ಯುಟಿಫಿಕೇಶನ್ ಇತ್ಯಾದಿ ತರಬೇತಿ ಮುಕ್ತಾಯ ಸಮಾರಂಭ ನಡೆಯಿತು. ಲಯನ್ಸ್ ಕ್ಲಬ್ಬಿನ ಅಧ್ಯಕ್ಷ ಕೆ.ಎ.ಸಿದ್ದಲಿಂಗಪ್ಪ, ಕಾರ್ಯದರ್ಶಿ ವಿ.ಸತ್ಯನಾರಾಯಣ, ಗ್ಲೋಬಲ್ ಸರ್ವಿಸ್ ಟೀಮ್‌ನ ಮುಖ್ಯಸ್ಥ ವಿ.ವೆಂಕಟೇಶ್, ಜೆಪಿನಗರ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಮ್ಯಾನೇಜರ್ ಅಲಪೇಶ್, ಬ್ಯಾಂಕಿನ ಮಾರ್ಕೆಟಿಂಗ್ ಆಫೀಸರ್ ವಿಜಯಲಕ್ಷ್ಮಿ ಇನ್ನಿತರರಿದ್ದರು.

ರೈತರ ಬೇಡಿಕೆಗಳಿಗೆ ಸರ್ಕಾರದ ಕಡೆಗಣನೆಗೆ ಖಂಡನೆ

- ಸೆ.15ರಂದು ಹರಿಯಾಣದಲ್ಲಿ ರೈತರ ಮಹಾ ಸಮಾವೇಶ
- ಸೆ.22ರಂದು ಕುರುಕ್ಷೇತ್ರದಲ್ಲಿ ಕಿಸಾನ್ ಮಹಾ ಪಂಚಾಯತ್



ಸಭೆಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿದರು.

ಮೈಸೂರು,ಸೆ.1(ಎಂಟಿವೈ)– ರೈತರ ಬೇಡಿಕೆಗಳ ಈಡೇರಿಕೆಗಾಗಿ ದೆಹಲಿಯಲ್ಲಿ ರೈತರು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೂ, ಕೇಂದ್ರ ಸರ್ಕಾರ ರೈತರನ್ನು ಕಡೆಗಣಿಸಿರುವುದು ಖಂಡನೀಯ ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಗನ್‌ಹೌಸ್ ಬಳಿಯಿರುವ ಉದ್ಯಾನವನದಲ್ಲಿ ರೈತರ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 200 ದಿನಗಳಿಂದ ದೆಹಲಿಯ ಶಂಬು ಬಾರ್ಡರ್ ಹಾಗೂ ಕನೋರಿ ಬಾರ್ಡರ್ ಸುತ್ತ ಗಡಿಗಳಲ್ಲಿ ರೈತರು ನಿರಂತರವಾಗಿ ಹೋರಾಟ ನಡೆಸುತ್ತಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ಹೋರಾಟದಿಂದ ಕೂಡಲೇ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು, ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು, ಸ್ವಾಮಿನಾಥನ್ ವರದಿಯಂತೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು. ರೈತರ ಸಾಲ ಮನ್ನಾ ಮಾಡಬೇಕು ಎಂದರು.

ಸರ್ವೋಚ್ಚ ನ್ಯಾಯಾಲಯ ರೈತರ ಸಮಸ್ಯೆ ಬಗೆಹರಿಸುವಂತೆ ಹಾಗೂ ಅದಕ್ಕೆ ಪರಿಹಾರಕ್ಕಾಗಿ ಮಧ್ಯವರ್ತಿಗಳ ಸಮಿತಿ ರಚಿಸುವಂತೆ ಸೂಚನೆ ನೀಡಿದೆ. ಆದರೂ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮುಂಬರುವ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ರೈತರು ತಕ್ಕಪಾಠ ಕಲಿಸಲು ತೀರ್ಮಾನಿಸಿದ್ದಾರೆ. ಸೆ.15ರಂದು ಹರಿಯಾಣದ ಜಿಂದ್‌ನಲ್ಲಿ 2 ಲಕ್ಷ ರೈತರ ಮಹಾ ಸಮಾವೇಶ ನಡೆಸಲಾಗುತ್ತಿದೆ. ಸೆ.22ರಂದು ಕುರುಕ್ಷೇತ್ರದಲ್ಲಿ ಕಿಸಾನ್ ಮಹಾ ಪಂಚಾಯತ್ ನಡೆಸಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆಯ ಸಂದೇಶ ನೀಡಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಕೃಷಿ ಸಾಲ ವಸೂಲಿಗಾಗಿ ಸರ್ಫೈಸಿ ಕಾಯ್ದೆ ಜಾರಿಗೆ ತಂದ ಪರಿಣಾಮ ರೈತರ ಭೂಮಿಯನ್ನು ಬ್ಯಾಂಕುಗಳು ವಶಪಡಿಸಿಕೊಂಡು ಹರಾಜು ಹಾಕುತ್ತಿವೆ. ಆ ಮೂಲಕ ರೈತರನ್ನು ಬೀದಿಪಾಲು ಮಾಡಲಾಗುತ್ತಿದೆ. ಈ ಕಾಯ್ದೆ ರದ್ದು ಮಾಡಲು ಕೇಂದ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.


ರಾಜ್ಯ ಸರ್ಕಾರ ಜಿಂದಾಲ್ ಕಂಪನಿಗೆ 3,660 ಎಕರೆ ಜಮೀನನ್ನು 1.25 ಲಕ್ಷ ರೂ. ಗೆ ನೀಡಿರುವುದು ಖಂಡನೀಯ. ಇದರಿಂದ ಸರ್ಕಾರಗಳು ಬಂಡವಾಳಶಾಹಿ, ಶ್ರೀಮಂತರ ಪರ ಇದೆ ಎನ್ನುವುದನ್ನು ಸಾಬೀತು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಭೂಮಿಯನ್ನು ವಾಪಸ್ ಪಡೆಯಬೇಕು ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ಲಿಂಕ್ ಕೈಬಿಡಬೇಕು. ಉಚಿತ ವಿದ್ಯುತ್ ನಿಲ್ಲಿಸುವ ಹುನ್ನಾರ ತಪ್ಪಿಸಬೇಕು. ರಾಜ್ಯ ಸರ್ಕಾರ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ ರದ್ದು ಮಾಡಬೇಕು ಎಂದರು. ರೈತ ಮುಖಂಡರಾದ ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರ ಶಂಕರ, ನೀಲಕಂಠಪ್ಪ, ಪೈಲ್ವಾನ್ ವೆಂಕಟೇಶ್, ಸಿದ್ದೇಶ್, ವಿಜೇಂದ್ರ, ರಾಜೇಶ, ಮಂಜುನಾಥ್, ನಾಗೇಶ, ಪ್ರದೀಪ್, ಮಹದೇವಸ್ವಾಮಿ, ರಾಜು ಹಾಗೂ ಇನ್ನಿತರರು ಇದ್ದರು.

ಶಂಕರಮಹಾದೇವ ಬಿದರಿ ಅವರಿಗೆ ಸನ್ಮಾನ...



ಮೈಸೂರಿನ ನಟರಾಜ ಕಲ್ಯಾಣ ಮಂಟಪದಲ್ಲಿ ಶ್ರೀ ಗುರುಮಲ್ಲೇಶ್ವರ ಪದವೀಧರ ಪತ್ತಿನ ಸಹಕಾರ ಸಂಘದ ವತಿಯಿಂದ ನಿವೃತ್ತ ಪೊಲೀಸ್ ಮಹಾನಿರ್ದೇಶಕರು ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಮಹಾದೇವ ಬಿದರಿ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಅಶ್ವಿನ್ ಆರ್ ಪಾಳೇಗಾರ, ಉಪಾಧ್ಯಕ್ಷ ಕಲ್ಮಳ್ಳಿ ನಟರಾಜು, ನಿರ್ದೇಶಕರು, ಸರ್ವ ಸದಸ್ಯರು ಉಪಸ್ಥಿತರಿದ್ದರು.

ಜೆಡಿಯು ವಕ್ತಾರ ಸ್ಥಾನಕ್ಕೆ ಕೆಸಿ ತ್ಯಾಗಿ ರಾಜೀನಾಮೆ



ಪಾಟ್ನ: ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರ ಆಪ್ತ ಕೆ.ಸಿ. ತ್ಯಾಗಿ ಅವರು ಜೆಡಿಯು ಪಕ್ಷದ ವಕ್ತಾರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕೆ.ಸಿ.ತ್ಯಾಗಿ ರಾಜೀನಾಮೆ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ರಾಜೀವ್ ರಂಜನ್ ಪ್ರಸಾದ್ ಅವರನ್ನು ನಿತೀಶ್‌ಕುಮಾರ್ ನೇಮಿಸಿದ್ದಾರೆ. ಈ ನಡುವೆ ವೈಯಕ್ತಿಕ ಕಾರಣಗಳಿಗಾಗಿ ತ್ಯಾಗಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆಂದು ಪಕ್ಷ ಹೇಳಿದೆ. ಆದರೆ, ಜೆಪಿ ನಾಯಕತ್ವಕ್ಕೆ ಹೊಂದಿಕೆಯಾಗದ ರೀತಿಯಲ್ಲಿ ಪ್ರಮುಖ ವಿಷಯಗಳ ಕುರಿತು ತ್ಯಾಗಿ ಅವರು ಹೇಳಿಕೆ ನೀಡಿದ್ದು, ಇದರಿಂದ ಪಕ್ಷಕ್ಕೆ ಇರಿಸು ಮುರಿಸಾಗುತ್ತಿದೆ ಎನ್ನಲಾಗಿದೆ. ಕಳೆದ ಕೆಲವು ತಿಂಗಳಿಂದ ನಾನು ಟಿವಿ ಚರ್ಚೆಗಳಿಂದ ದೂರವಿರುವುದನ್ನು ನೀವು ಗಮನಿಸಿರಬೇಕು. ಬೇರೆ ಕೆಲಸಗಳಿಂದಾಗಿ ವಕ್ತಾರ ಹುದ್ದೆಗೆ ನ್ಯಾಯ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ನನ್ನನ್ನು ಈ ಜವಾಬ್ದಾರಿಯಿಂದ ಮುಕ್ತಗೊಳಿಸಿ. ನಿಮ್ಮ ಮತ್ತು ಬಿಹಾರ ಸರ್ಕಾರದ ಸಾಧನೆಗಳ ಬಗ್ಗೆ ಪ್ರಚಾರ ಮಾಡಲು ನಾನು ಲಭ್ಯವಿರುತ್ತೇನೆ ಎಂದು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ರಾಜೀನಾಮೆ ಪತ್ರದಲ್ಲಿ ತ್ಯಾಗಿ ಹೇಳಿದ್ದಾರೆ.

ತಂತ್ರಜ್ಞಾನಕ್ಕೆ ತಕ್ಕಂತೆ ಬದುಕು ರೂಪುಗೊಳ್ಳುತ್ತಿರುವುದು ಒಳ್ಳೆದಲ್ಲ

- ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಬೇಸರ
- ಸಹಜರಂಗ ತರಬೇತಿ ಶಿಬಿರಕ್ಕೆ ಚಾಲನೆ



ಸಹಜ ರಂಗ 2024ರ ತರಬೇತಿ ಶಿಬಿರವನ್ನು ಶಿಬಿರಾರ್ಥಿಗೆ ಮೇಕಪ್ ಮಾಡುವ ಮೂಲಕ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಉದ್ಘಾಟಿಸಿದರು.

ಮೈಸೂರು, ಸೆ.1(ಎಸ್‌ಪಿಎನ್)– ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಪದ್ಧತಿಯ ಪಠ್ಯದಲ್ಲಿ ಅಪ್‌ಡೇಟ್ ಆಗುವ ವೇಗಕ್ಕಿಂತಲೂ ಆಧುನಿಕ ರಂಗಭೂಮಿಯ ಹೊಸಹೊಸ ಆಲೋಚನೆಗಳು ನಾಟಕದ ಕಥಾವಸ್ತುವಾಗುತ್ತವೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ಗಾಂಧಿಭವನದಲ್ಲಿ ಮೈಸೂರು ನಿರಂತರ ಫೌಂಡೇಷನ್, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ಭಾರತ ಸರ್ಕಾರದ ಸಂಸ್ಕೃತಿ ಮಂತ್ರಾಲಯ ಸಹಯೋಗದೊಂದಿಗೆ ಆಯೋಜಿಸಿರುವ 30 ದಿನಗಳ ಸಹಜ ರಂಗ 2024ರ ತರಬೇತಿ ಶಿಬಿರವನ್ನು ಶಿಬಿರಾರ್ಥಿಗೆ ಮೇಕಪ್ ಮಾಡುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಪ್ರಸ್ತುತ ನಾವು ಮೊಬೈಲ್‌ಗೆ ಬರುವ ಕರೆಗಳಿಗೆ ಅನುಗುಣವಾಗಿ ಬದುಕು ಕಟ್ಟಿಕೊಳ್ಳುತ್ತಿದ್ದೇವೆ. ಆದರೆ, ತಂತ್ರಜ್ಞಾನವನ್ನು ನಮ್ಮ ಅನುಕೂಲ ತಕ್ಕಂತೆ ಬಳಸಿಕೊಳ್ಳದೇ, ಅದರ ಬಳಕೆಗೆ ತಕ್ಕಂತೆ ನಮ್ಮ ಬದುಕು ರೂಪುಗೊಳ್ಳುತ್ತಿರುವುದು ಬೇಸರದ ಸಂಗತಿ. ಪೋಷಕರು ಮತ್ತು ಮಕ್ಕಳಿಗೆ ಮೊಬೈಲ್ ಬಳಕೆಯೇ ದಿನನಿತ್ಯದ ಬದುಕಾಗಿದೆ. ಈ ಹವ್ಯಾಸ ಹೀಗೆ ಮುಂದುವರೆದರೆ ನಮ್ಮಲ್ಲಿನ ಪ್ರಜ್ಞೆ, ಬುದ್ಧಿ ಕೆಲಸ ಮಾಡಲ್ಲ. ಈ ಅಭಿರುಚಿ ತಡೆಯುವ ಶಕ್ತಿ ರಂಗಭೂಮಿಗಿದೆ ಎಂದ ಅವರು, ಆಧುನಿಕ ಶಿಕ್ಷಣ ಎಂದರೆ, ರಂಗಭೂಮಿ ಎಂದು ಹೇಳುವುದಕ್ಕೆ ರಂಗಭೂಮಿ ವಿದ್ಯಾರ್ಥಿಯಾದ ನನಗೆ ಹೆಮ್ಮೆ ಎನಿಸುತ್ತಿದೆ ಎಂದರು.

ರಂಗಭೂಮಿ ಕಾಲಕಾಲಕ್ಕೆ ಆಧುನಿಕ ಶಿಸ್ತನ್ನು ಮೈಗೂಡಿಸಿಕೊಂಡು ಬರುತ್ತಿದೆ. ಸಮುದಾಯ ಒಳಗೊಳ್ಳುವಿಕೆ ಪ್ರಧಾನವಾಗಿಟ್ಟುಕೊಂಡು ಎಲ್ಲಾ ಕಾಲದ ಅನಿವಾರ್ಯತೆಗಳನ್ನು ಎದುರಿಸುವ ಶಕ್ತಿ ರಂಗಭೂಮಿಗಿದೆ ಎಂದ ಅವರು, 1992–93ನೇ ಸಾಲಿನಲ್ಲಿ ನಾನೂ ಅನಿಮೇಷನ್ ಡಿಪ್ಲೋಮಾ ಸರ್ಟಿಫಿಕೆಟ್ ಕೋರ್ಸ್ ಅಧ್ಯಯನ ಮಾಡುತ್ತಿದ್ದೆ. ನಂತರ ರಂಗಭೂಮಿ ಗೀಳು ಎಳೆದು ರಂಗಭೂಮಿಯಲ್ಲಿ ತೊಡಗಿಸಿಕೊಂಡೆ ಎಂದು ತಮ್ಮ ರಂಗಭೂಮಿ ಪಯಣವನ್ನು ವಿವರಿಸಿದರು.

ಆಧುನಿಕ ತಂತ್ರಜ್ಞಾನ ಮತ್ತು ಶಿಕ್ಷಣ ಪದ್ಧತಿಯಲ್ಲಿ ಅಧ್ಯಯನ ಮಾಡುತ್ತಿರುವ ಇಂದಿನ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನಕ್ಕೆ ಪಠ್ಯೇತರ ಚಟುವಟಿಕೆಗಳಾದ ಸಂಗೀತ, ನೃತ್ಯ, ಚಿತ್ರಕಲೆ, ರಂಗಭೂಮಿ ನಾಟಕಗಳ ಕಲಿಕೆ ಮೂಲಕ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರ, ರಂಗ ತರಬೇತಿಗಳ ಆಯೋಜನೆ ಅಗತ್ಯವಿದೆ ಎಂದರು.

ಇಂದಿನ ತರಬೇತಿ ಶಿಬಿರಗಳು ವಿದ್ಯಾರ್ಥಿಗಳಲ್ಲಿನ ಸೃಜನಾತ್ಮಕ ಪ್ರತಿಭೆಯನ್ನು ಹೊರತರುವ ವೇದಿಕೆಯಾಗಿ, ವಿದ್ಯಾರ್ಥಿಗಳ ಮನೋಸ್ಥೈರ್ಯ ಹೆಚ್ಚಿಸುವ ಶಿಬಿರಗಳಾಗಿ ಮಾರ್ಪಾಡಾಗಬೇಕು. ಈ ತರಬೇತಿಗಳು ಶೈಕ್ಷಣಿಕ ಬೆಳವಣಿಗೆಗಳ ಪೂರಕವಾಗಿರಬೇಕು ಎಂದು ಶಿಬಿರದ ಆಯೋಜಕರಿಗೆ ಕಿವಿಮಾತು ಹೇಳಿದರು.

ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ನರೇಂದ್ರ ಕುಮಾರ್ ಮಾತನಾಡಿ, ನಗರ ವಿದ್ಯಾರ್ಥಿಗಳಿಗೆ ಹಳ್ಳಿ ಬದುಕಿನ ವಾತಾವರಣವನ್ನು ತಿಳಿಸುವ ಕಾರ್ಯವನ್ನು ರಂಗಭೂಮಿ ತರಬೇತಿ ಶಿಬಿರಗಳು ಮಾಡುತ್ತಿರುವುದು ಸಂತಸದ ವಿಚಾರ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ ಮಾತನಾಡಿ, ಸಮಾಜದೊಂದಿಗೆ ಮುಖಾಮುಖಿಯಾಗುವ ಬಗೆಬಗೆಯ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು,. ಕ್ರೀಡೆ, ಕೃಷಿ, ಚಿತ್ರಕಲೆ ಸೇರಿದಂತೆ ಇತರೆ ವಿಷಯಗಳಲ್ಲಿನ ಕೌಶಲ್ಯ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳು ಪ್ರಯತ್ನಿಸಬೇಕು ಎಂದರು.

ಸಮಾರಂಭದಲ್ಲಿ ನಿರಂತರ ಫೌಂಡೇಷನ್ ತಂಡದ ಪ್ರಸಾದ್ ಕುಂದೂರು, ಗೀತಾಂಜಲಿ, ಸುಗುಣ, ಹರಿಪ್ರಸಾದ್, ನಿರಂತರ ಶ್ರೀನಿವಾಸ್, ಡಾ.ರಾಜೇಂದ್ರ, ವಸಂತಮ್ಮ, ಕಿರಣ್, ಸಂದೀಪ್, ಕಿರಣ್, ಸಂತೋಷ್, ಆಕಾಶ್, ಧನುಷ್, ಭೂಮಿ, ಯಶಸ್ವಿನಿ, ನಾಗಶ್ರೀ, ಪದ್ಮಶ್ರೀ ಇತರರಿದ್ದರು.

ದೇಶ - ವಿದೇಶ

ಜಪಾನ್‌ನಲ್ಲಿ ಒಂಟಿಯಾಗಿದ್ದ 37 ಸಾವಿರ ಮಂದಿ ಸಾವು!



ಟೋಕಿಯೋ: ವೃದ್ಧರ ಸಂಖ್ಯೆ ಹೆಚ್ಚಾಗಿ, ಯುವಜನರ ಸಂಖ್ಯೆ ಕಡಿಮೆಯಾಗುತ್ತಿರುವ ಸಮಸ್ಯೆ ಎದುರಿಸುತ್ತಿರುವ ಜಪಾನ್‌ನಲ್ಲಿ ಇದೀಗ ವೃದ್ಧರ ಸುರಕ್ಷತೆಯ ವಿಚಾರವೂ ಸವಾಲಾಗಿದೆ. 2024ರ ಮೊದಲಾರ್ಧದಲ್ಲೇ ಮನೆಗಳಲ್ಲಿ ಒಬ್ಬಂಟಿಯಾಗಿದ್ದ 37 ಸಾವಿರ ಮಂದಿ ಮೃತಪಟ್ಟಿದ್ದು, ಈ ಪೈಕಿ ಶೇ.70 ಮಂದಿ 65 ವರ್ಷದ ಮೇಲ್ಪಟ್ಟವರಾಗಿದ್ದಾರೆ ಎಂದು ಜಪಾನ್‌ನ ನ್ಯಾಷನಲ್ ಪೊಲೀಸ್ ಏಜೆನ್ಸಿ ವರದಿ ನೀಡಿದೆ.

ಮಾಹಿತಿ ಪ್ರಕಾರ ಒಂಟಿಯಾಗಿ ಬದುಕುತ್ತಿದ್ದ ಸುಮಾರು 37,227 ಮಂದಿ ಮೃತದೇಹ ಮನೆಯಲ್ಲಿ ದೊರೆತಿದೆ. ಅವರಲ್ಲಿ ಶೇ.70ರಷ್ಟು ಮಂದಿ 65ರ ವಯಸ್ಸು ದಾಟಿದವರು ಎನ್ನಲಾಗಿದೆ. ಶೇ.40ರಷ್ಟು ಮಂದಿಯ ದೇಹ ಅವರು ಸತ್ತ ಒಂದು ದಿನದಲ್ಲೇ ದೊರೆತಿದೆ. ಆದರೆ 3,939 ಮಂದಿಯ ಮೃತದೇಹ ಅವರು ಸತ್ತು 1 ತಿಂಗಳು ಕಳೆದ ಬಳಿಕ ದೊರೆತಿದೆ. 130 ಮಂದಿ ನಾಪತ್ತೆಯಾಗಿದ್ದಾರೆ ಎಂದುಕೊಂಡ ಒಂದು ವರ್ಷದ ಬಳಿಕ ಶವವಾಗಿ ಪತ್ತೆಯಾಗಿದ್ದಾರೆ. ಅದರಲ್ಲಿ 85 ವರ್ಷ ಮೇಲ್ಪಟ್ಟವರ 7,498 ಶವಗಳು, 75–79 ವರ್ಷದವರ 5,920 ಶವಗಳು ದೊರೆತಿವೆ.

ಮೊಬೈಲ್‌ನಲ್ಲಿ ಆಟವಾಡುತ್ತಿದ್ದ ಬಾಲಕರಿಗೆ ರೈಲು ಡಿಕ್ಕಿ ಹೊಡೆದು ಸಾವು



ಛತ್ತೀಸ್‌ಗಢ: ಇಲ್ಲಿನ ದುರ್ಗ್ ಜಿಲ್ಲೆಯಲ್ಲಿ ರೈಲ್ವೇ ಹಳಿ ಮೇಲೆ ಕುಳಿತು ಮೊಬೈಲ್‌ನಲ್ಲಿ ಆಟವಾಡುತ್ತಿದ್ದ ಇಬ್ಬರು ಬಾಲಕರು ರೈಲು ಡಿಕ್ಕಿ ಹೊಡೆದು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪದ್ಮನಾಭ್‌ಪುರ ಪೊಲೀಸ್ ಠಾಣಾ ವ್ಯಾಪ್ತಿಯ ರಿಸಾಲಿ ಪ್ರದೇಶದಲ್ಲಿ 14 ವರ್ಷದ ಬಾಲಕರು ರೈಲು ಹಳಿ ಮೇಲೆ ಕುಳಿತಿದ್ದಾಗ ಶನಿವಾರ ಸಂಜೆ 7 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪುರಾನ್ ಸಾಹು ಮತ್ತು ವೀರ್ ಸಿಂಗ್ ಭಿಲಾಯಿ ನಗರದ ರಿಸಾಲಿ ವಲಯದ ನಿವಾಸಿಗಳು. ಇಬ್ಬರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಎಷ್ಟು ಮುಳುಗಿದ್ದರು ಎಂದರೆ ಅವರಿಗೆ ದಲ್ಲಿ ರಾಜರಾ–ದುರ್ಗ್ ಲೋಕಲ್ ರೈಲಿನಿಂದ ಹಾರ್ನ್ ಕೇಳಿಸಲಿಲ್ಲ. ಬಾಲಕರಿಗೆ ರೈಲು ಡಿಕ್ಕಿ ಹೊಡೆದಿದ್ದು, ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದರು. ಪೊಲೀಸರು ಸ್ಥಳಕ್ಕಾಗಮಿಸಿ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಪಾಕ್‌ನಲ್ಲಿ 'ಡ್ರೀಮ್ ಬಜಾರ್' ಮಾಲ್ ಉದ್ಘಾಟನೆಗೊಂಡ ಮೊದಲ ದಿನವೇ ಧ್ವಂಸ!



ಇಸ್ಲಾಮಾಬಾದ್: ಪಾಕಿಸ್ತಾನದ ಕರಾಚಿಯಲ್ಲಿ 'ಡ್ರೀಮ್ ಬಜಾರ್' ಮಾಲ್ ಅನ್ನು ಉದ್ಘಾಟನೆಗೊಂಡ ಮೊದಲ ದಿನವೇ ಜನರ ಗುಂಪೊಂದು ಧ್ವಂಸಗೊಳಿಸಿದೆ. ಜತೆಗೆ, ಬ್ರಾಂಡೆಡ್ ಬಟ್ಟೆಗಳು ಸೇರಿದಂತೆ ಸಿಕ್ಕಸಿಕ್ಕ ವಸ್ತುಗಳನ್ನು ದೋಚಿ ಪರಾರಿಯಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಮಾಲ್ ಒಳಗೆ ಏಕಾಏಕಿ ನುಗ್ಗಿರುವ ಜನರ ಗುಂಪು ಬಟ್ಟೆಗಳು ಮತ್ತು ಸಿಕ್ಕಸಿಕ್ಕ ವಸ್ತುಗಳನ್ನು ದೋಚುತ್ತಿರುವ ಫೋಟೊ ಮತ್ತು ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಕರಾಚಿಯ ಗುಲಿಸ್ತಾನ್–ಎ–ಜೋಹರ್‌ನಲ್ಲಿರುವ 'ಡ್ರೀಮ್ ಬಜಾರ್' ಮಾಲ್‌ನ ಉದ್ಘಾಟನೆ ಪ್ರಯುಕ್ತ ಮಾಲೀಕರು ವಿಶೇಷ ರಿಯಾಯಿತಿ ಘೋಷಿಸಿದ್ದರು. ಜತೆಗೆ ಸಾರ್ವಜನಿಕರನ್ನು ಆಕರ್ಷಿಸಲು ಟಿವಿ, ದಿನಪತ್ರಿಕೆ, ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತುಗಳನ್ನು ನೀಡುವ ಮೂಲಕ ಪ್ರಚಾರವನ್ನು ಮಾಡಿದ್ದರು. ಆದರೆ, ನಿಗದಿಯಂತೆ ಕಾರ್ಯಕ್ರಮ ನಡೆಯಲಿಲ್ಲ. ಹಾಗಾಗಿ ಮಾಲ್ ವ್ಯವಸ್ಥಾಪಕರು ಬಂದ್ ಮಾಡಲು ಮುಂದಾಗಿದ್ದರು. ಇದೇ ವೇಳೆ ಜನರು ಮಾಲ್ ಅನ್ನು ಧ್ವಂಸಗೊಳಿಸಿದ್ದಾರೆ. ಜತೆಗೆ ಸಿಕ್ಕಸಿಕ್ಕ ವಸ್ತುಗಳನ್ನು ದೋಚಿಕೊಂಡು ಹೋಗಿದ್ದಾರೆ.

ಜಬಲ್‌ಪುರ–ಹೈದರಾಬಾದ್ ಇಂಡಿಗೊ ವಿಮಾನಕ್ಕೆ ಬಾಂಬ್ ಬೆದರಿಕೆ



ನಾಗ್ಪುರ: ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಮಧ್ಯಪ್ರದೇಶದ ಜಬಲ್‌ಪುರದಿಂದ ತೆಲಂಗಾಣದ ಹೈದರಾಬಾದ್‌ಗೆ ತೆರಳುತ್ತಿದ್ದ ಇಂಡಿಗೊ ವಿಮಾನವನ್ನು ನಾಗ್ಪುರಕ್ಕೆ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'6ಇ–7308 ಇಂಡಿಗೊ ವಿಮಾನವು ಜಬಲ್‌ಪುರದಿಂದ ಹೈದರಾಬಾದ್‌ಗೆ ತೆರಳುತ್ತಿತ್ತು. ವಿಮಾನದಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿದ್ದರಿಂದ ಕೂಡಲೇ ವಿಮಾನವನ್ನು ನಾಗ್ಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮಾರ್ಗ ಬದಲಾವಣೆ ಮಾಡಲಾಯಿತು' ಎಂದು ಇಂಡಿಗೊ ಏರ್‌ಲೈನ್ಸ್ ಪ್ರಕಟಣೆಯಲ್ಲಿ ತಿಳಿಸಿದೆ. 'ನಾಗ್ಪುರ ವಿಮಾನ ನಿಲ್ದಾಣದಲ್ಲಿ ಇಂಡಿಗೊ ವಿಮಾನದಲ್ಲಿದ್ದ ಪ್ರಯಾಣಿಕರನ್ನು ಕೆಳಗಿಳಿಸಿ, ತ್ವರಿತಗತಿಯಲ್ಲಿ ತಪಾಸಣೆ ನಡೆಸಲಾಯಿತು. ಬಾಂಬ್ ಇರಿಸಲಾಗಿದೆ ಎಂದು ಬರೆದಿರುವ ಕಾಗದವು ವಿಮಾನದ ಸ್ನಾನಗೃಹದಲ್ಲಿ ಪತ್ತೆಯಾಗಿದೆ. ಭದ್ರತಾ ಏಜೆನ್ಸಿಗಳ ಸಂಪೂರ್ಣ ಪರಿಶೀಲನೆಯ ಬಳಿಕ ವಿಮಾನದಲ್ಲಿ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಕ್ರೇನ್‌ನ 158 ಡ್ರೋನ್ ಹೊಡೆದುರುಳಿಸಿದ ರಷ್ಯಾ



ಮಾಸ್ಕೋ: ರಷ್ಯಾದ ವಾಯುಪಡೆಯು ಉಕ್ರೇನ್‌ನ 158 ಡ್ರೋನ್‌ಗಳನ್ನು ಹೊಡೆದುರುಳಿಸಿದೆ. 'ಮಾಸ್ಕೊದಲ್ಲಿ 2, ಮಾಸ್ಕೊದ ಹೊರವಲಯದಲ್ಲಿ 9 ಮತ್ತು ಕುರ್ಸ್ಕ್ ಪ್ರದೇಶದಲ್ಲಿ 46, ಬ್ರ್ಯಾನ್ಸ್ಕ್‌ನಲ್ಲಿ 34, ವೊರೊನೆಜ್‌ನಲ್ಲಿ 28, ಬೆಲ್ಗೊರೊಡ್‌ನಲ್ಲಿ 14 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಭಾನುವಾರ ತಿಳಿಸಿದೆ. 'ಡ್ರೋನ್‌ನ ಅವಶೇಷಗಳು ಬಿದ್ದ ಪರಿಣಾಮ ನಗರದ ತೈಲ ಸಂಸ್ಕರಣಾಗಾರದಲ್ಲಿ ಬೆಂಕಿ ಹತ್ತಿಕೊಂಡಿದೆ' ಎಂದು ಮಾಸ್ಕೊದ ಮೇಯರ್ ಸೆರ್ಗಿ ಸೊಬಯೆನಿನ್ ಅಮಾಹಿತಿ ನೀಡಿದ್ದಾರೆ. ವರ್ಷದ ಆರಂಭದಿಂದ ತೈಲಸಂಸ್ಕರಣಾ ಘಟಕ ಮತ್ತು ಟರ್ಮಿನಲ್‌ಗಳ ಮೇಲೆ ಪದೇ ಪದೆ ವೈಮಾನಿಕ ದಾಳಿಗಳನ್ನು ನಡೆಸುವ ಮೂಲಕ ಉಕ್ರೇನ್ ರಷ್ಯಾಕ್ಕೆ ಸೆಡ್ಡು ಹೊಡೆಯುತ್ತಿದೆ. 'ಉಕ್ರೇನ್ ಒಳಗೆ ಬಂದಿದ್ದ ರಷ್ಯಾದ 11 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ' ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ರಾಜಕೀಯ ಸ್ವಾಯತ್ತತೆ ಕೊಡವರ ಹಕ್ಕು

'ಕೈಲ್ ಪೊಳ್ದ್' ಆಚರಣೆಯಲ್ಲಿ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರತಿಪಾದನೆ

ಮಡಿಕೇರಿ, ಸೆ.1–ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಪಡೆಯುವುದು ಕೊಡವರ ಸಂವಿಧಾನಬದ್ಧ ಹಕ್ಕಾಗಿದೆ ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರತಿಪಾದಿಸಿದರು.

ನಗರದ ಹೊರ ವಲಯದ ಕ್ಯಾಪಿಟಲ್ ವಿಲೇಜ್‌ನಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ನಡೆದ 29ನೇ ವರ್ಷದ ಸಾರ್ವತ್ರಿಕ 'ಕೈಲ್ ಪೊಳ್ದ್' ಹಬ್ಬದ ಆಚರಣೆಯಲ್ಲಿ ಮಾತನಾಡಿದ ಅವರು, ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಮತ್ತು ಕಲಂ 244ರಡಿಯಲ್ಲಿ ಕೊಡವರಿಗೆ ಸ್ವಯಂ ಆಡಳಿತ ಅಗತ್ಯವಿದೆ ಎಂದು ತಿಳಿಸಿದರು.

ಕೊಡವರು ಕೊಡವ ಸೀಮೆಯ ಪುರಾತನ ಬುಡಕಟ್ಟು ಜನರಾಗಿರುವುದರಿಂದ ಸಂವಿಧಾನದ ಖಾತರಿಗಳ ಮೂಲಕ ಈ ಮಣ್ಣಿನ ರಾಜಕೀಯ ಬಲ, ನೆಲ, ಜಲ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ಧರಿಸುವ ಹಕ್ಕನ್ನು ಅವರು ಹೊಂದಿರಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಕೊಡವರ ಅವೋಘ ಸೇವೆ ಮತ್ತು ರಾಷ್ಟ್ರ ನಿರ್ಮಾಣದ ಅಪಾರ ಕೊಡುಗೆಗಾಗಿ ಋಣಿಯಾಗಿರಬೇಕು ಎಂದರು.

ಕೊಡವರ ಶಕ್ತಿಯಂತಿರುವ ಸಿಎನ್‌ಸಿಯ ಬಹುಕಾಲದ ಬೇಡಿಕೆಯನ್ನು ಈಡೇರಿಸುವುದು ಸಾಂವಿಧಾನಿಕ ಬಾಧ್ಯತೆಯಾಗಿದ್ದು, ಇದನ್ನು ಆದ್ಯತೆ ಮತ್ತು ಮಾನವೀಯ ಧೋರಣೆಯೊಂದಿಗೆ ಪರಿಹರಿಸಬೇಕು. ಕೊಡವರ ಆಕಾಂಕ್ಷೆಗಳನ್ನು ಸಿಎನ್‌ಸಿ ಸಂಘಟನೆ ಇಷ್ಟು ದಿನ ಜೀವಂತವಾಗಿರಿಸಿಕೊಂಡಿರುವುದು ಶ್ಲಾಘನೀಯ ಸಾಧನೆಯಾಗಿದೆ.



ಮಡಿಕೇರಿ ಹೊರ ವಲಯದಲ್ಲಿ ನಡೆದ 'ಕೈಲ್ ಪೊಳ್ದ್' ಹಬ್ಬದ ಆಚರಣೆಯಲ್ಲಿ ಸಿಎನ್‌ಸಿ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು.

ಹುಟ್ಟುವ ಪ್ರತಿಯೊಬ್ಬ ಕೊಡವ ನೈತಿಕ, ಆರ್ಥಿಕ ಮತ್ತು ದೈಹಿಕವಾಗಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಬೇಕು. ಸೈದ್ಧಾಂತಿಕವಾಗಿ ವಿಭಿನ್ನ ಅಭಿಪ್ರಾಯ ಹೊಂದಿರುವ ನಾನು ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಕೊಡವರ ವಿಚಾರದಲ್ಲಿ ಮಾತ್ರ ಸಂವಿಧಾನಬದ್ಧವಾದ ಸಿಎನ್‌ಸಿ ಬೇಡಿಕೆಗಳಿಗೆ ಪೂರಕವಾಗಿ ಕೊಡವರ ಪರ ಇರುವುದಾಗಿ ಹೇಳಿದರು.

ಕಾರ್ಯಕ್ರಮಕ್ಕೂ ಮೊದಲು ಎನ್.ಯು. ನಾಚಪ್ಪ ನೇತೃತ್ವದಲ್ಲಿ ಕೈಲ್ ಪೊಳ್ದ್ ಪ್ರಯುಕ್ತ 'ತೋಕ್ ಪೂವ್'ನಿಂದ ಬಂದೂಕುಗಳನ್ನು ಸಿಂಗರಿಸಿ ಪ್ರಾರ್ಥಿಸಲಾಯಿತು. ಗುರುಕಾರೋಣರಿಗೆ ಮೀದಿ ಇಟ್ಟು ಸಿಎನ್‌ಸಿ ಹೋರಾಟಕ್ಕೆ ಬೆಂಬಲ ಕೋರಲಾಯಿತು. ಕೊಡವರು ಹಾಗೂ ಕೊಡವತಿಯರು ಶಸ್ತ್ರಾಸ್ತ್ರಗಳ ಸಾಮೂಹಿಕ ಆರಾಧನೆಯಲ್ಲಿ ಬಂದೂಕು ಮತ್ತು ಒಡಿಕತ್ತಿಯೊಂದಿಗೆ ಗಾಳಿಯಲ್ಲಿ ಗುಂಡು ಹಾರಿಸಿ ಕೋವಿಯ ಹಕ್ಕು ಪ್ರತಿಪಾದಿಸಿದರು. ಇದೇ ವೇಳೆ ಕೊಡವ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಕಲಿಯಂಡ ಮೀನಾ, ಬೊಪ್ಪಂಡ ಬೊಳ್ಳಮ್ಮ, ಪಟ್ಟಮಾಡ ಲಲಿತಾ, ಪುಲ್ಲೇರ ಸ್ವಾತಿ, ಅಪ್ಪಚ್ಚೀರ ರೀನಾ, ನಂದೇಟಿರ ಕವಿತಾ, ಚೋಳಪಂಡ ಜ್ಯೋತಿ, ಬೊಟ್ಟಂಗಡ ಸವಿತಾ, ಅರೆಯಡ ಸವಿತಾ, ಮಂದಪಂಡ ರಚನ, ನಂದಿನೆರವಂಡ ನಿಶಾ, ಪಾಲಂದಿರ ಲೀಲ, ನಂದಿನೆರವಂಡ ಬೀನಾ, ಅಜ್ಜಿನಿಕಂಡ ಇನಿತಾ, ಅಪ್ಪಾರಂಡ ವಿನ್ನಿ ನಂದಿನೆರವಂಡ ಸೋನಿ, ಮುದ್ದಿಯಡ ಲೀಲಾವತಿ, ಮಂದಪಂಡ ನೇಹಲಿ ದೇಚಕ್ಕ, ಕಲಿಯಂಡ ಪ್ರಕಾಶ್, ಬಾಚರಣಿಯಂಡ ಚಿಪ್ಪಣ್ಣ, ಅಳ್ಮಂಡ ಜೈ, ಕಾಂಡೇರ ಸುರೇಶ್, ಅಪ್ಪಚ್ಚಿರ ರಮ್ಮಿ ನಾಣಯ್ಯ, ಅಜ್ಜಿಕುಟ್ಟೀರ ಲೋಕೇಶ್, ಪಟ್ಟಮಾಡ ಕುಶ, ಕಿರಿಯಮಾಡ ಶೆರಿನ್, ಚಂಬಂಡ ಜನತ್, ಅರೆಯಡ ಗಿರೀಶ್ ಜಿಲ್ಲೆಯ ಸಿಎನ್‌ಸಿ ಸಂಘಟನೆ ಬೆಂಬಲಿತರು ಪಾಲ್ಗೊಂಡಿದ್ದರು.

> ಕೊಡವರ ಪರವಾಗಿ ನಡೆಸುತ್ತಿರುವ ಹೋರಾಟದ ಕುರಿತು ದೇಶದ ಆಡಳಿತ ವ್ಯವಸ್ಥೆ ಮತ್ತು ವಿಶ್ವದ ಗಮನ ಸೆಳೆಯಲು ನ.1ರಂದು ದೆಹಲಿ ಚಲೋ ರ್‍ಯಾಲಿ ನಡೆಸಲು ನಿರ್ಧರಿಸಲಾಗಿದೆ. ಕೊಡವ ಲ್ಯಾಂಡ್ ಭೌಗೋಳಿಕ ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯಗಳನ್ನು ಮಂಡಿಸುವ 34ನೇ ವರ್ಷದ 'ಕೊಡವ ನ್ಯಾಷನಲ್ ಡೇ' ಕಾರ್ಯಕ್ರಮವನ್ನು ನ.26ರಂದು ಕ್ಯಾಪಿಟಲ್ ವಿಲೇಜ್‌ನಲ್ಲಿ ಆಯೋಜಿಸಲಾಗುವುದು.
>
> –ಅಧ್ಯಕ್ಷ ನಾಚಪ್ಪ, ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ

ಕೊಡಂದೇರ ಪಿ.ತಿಮ್ಮಯ್ಯ



ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ಕೈಕೇರಿ ಗ್ರಾಮದ ನಿವಾಸಿ ಹಾಗೂ ಖಜಾನೆ ನಿವೃತ್ತ ಉಪನಿರ್ದೇಶಕ ಕೊಡಂದೇರ ಪಿ.ತಿಮ್ಮಯ್ಯ (90) ಅವರು ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಕಸ್ತೂರಿ ಅಕ್ಕಮ್ಮ (ಬಿದ್ದಂಡ), ಮಕ್ಕಳಾದ ಮಿತ್ರ ಪೂವಣ್ಣ, ಮಾಯಾ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಅಂತ್ಯಕ್ರಿಯೆ ನಾಳೆ (ಸೋಮವಾರ) ಬೆಳಗ್ಗೆ 9.30ಕ್ಕೆ ಕುಂದದ ಕೊಡಂದೇರ ಕುಟುಂಬದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಸಂಪರ್ಕಕ್ಕೆ 98451–77412, 98802–49560).

ಬಲ್ಯಮಿದೆರಿರ ಪೂವಮ್ಮ



ಕೊಡಗಿನ ಪೊನ್ನಂಪೇಟೆ ತಾಲೂಕಿನ ಬಾಡಗರಕೇರಿ ಗ್ರಾಮದ ಪೊರಾಡ್ ದಿವಂಗತ ಕಾರ್ಯಪ್ಪ ಅವರ ಪತ್ನಿ ಶ್ರೀಮತಿ ಬಲ್ಯಮಿದೆರಿರ ಪೂವಮ್ಮ(96) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪುತ್ರ ರಾಜ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಪೊರಾಡ್‌ನ ಬಲ್ಯಮಿದೆರಿರ ಕುಟುಂಬದ ರುದ್ರಭೂಮಿಯಲ್ಲಿ ನಾಳೆ (ಸೋಮವಾರ) ಬೆಳಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಸಂಪರ್ಕಕ್ಕೆ 81059–25354).

ಟ್ರಾನ್ಸ್‌ಫಾರ್ಮರ್ ಕಂಬಗಳ ಬದಲಾವಣೆ

ಮಡಿಕೇರಿ, ಸೆ.1–ಕುಶಾಲನಗರ ತಾಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೂಡ್ಲೂರು ಕೈಗಾರಿಕಾ ಬಡಾವಣೆಯಲ್ಲಿ ಬೀಳುವ ಹಂತದಲ್ಲಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಕಂಬಗಳನ್ನು ಬದಲಿಸಲಾಯಿತು.

ಸಿಮೆಂಟ್ ಕಿತ್ತು ಹೋಗಿ ಕಬ್ಬಿಣದ ಸರಳಗಳು ಕಾಣುತ್ತಿದ್ದ ಟ್ರಾನ್ಸ್‌ಫಾರ್ಮರ್‌ನ ಎಲ್ಲಾ 4 ಕಂಬಗಳನ್ನು ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಬದಲಿಸಿದರು. ಈ ಕುರಿತು ಆ.19ರಂದು ಮೈಸೂರು ಮಿತ್ರ 'ಕುಸಿಯುವ ಸ್ಥಿತಿಯಲ್ಲಿ ವಿದ್ಯುತ್ ಕಂಬ' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ಇದರಿಂದ ಎಚ್ಚೆತ್ತ ಸೆಸ್ಕ್ ಅಧಿಕಾರಿಗಳು ಕಂಬಗಳನ್ನು ಬದಲಿಸುವ ಮೂಲಕ ಅಲ್ಲಿನ ನಿವಾಸಿಗಳ ಬೇಡಿಕೆಗೆ ಸ್ಪಂದಿಸಿದ್ದಾರೆ.

ಟ್ರಾನ್ಸ್‌ಫಾರ್ಮರ್‌ನ ಕಂಬಗಳಲ್ಲಿ ಸಿಮೆಂಟ್ ಉದುರಿ ಕಬ್ಬಿಣದ ರಾಡ್ ಹಾಗೂ ತಂತಿಗಳು ಗೋಚರಿಸುತ್ತಿದ್ದು, ಕಂಬ ಬಿದ್ದರೆ ಜೀವ ಹಾನಿಯಾಗುವ ಸಾಧ್ಯತೆಗಳಿವೆ. ಜನರ ಪ್ರಾಣ ರಕ್ಷಣೆ ದೃಷ್ಟಿಯಿಂದ ಕಂಬವನ್ನು ಸೆಸ್ಕ್ ಬದಲಾಯಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದರು. ಕೂಡ್ಲೂರು ಇಂಡಸ್ಟ್ರಿಯಲ್ ಏರಿಯಾ ಭಾಗದಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಾಗಿ ನೆಲೆಸಿದ್ದು, ಟ್ರಾನ್ಸ್‌ಫಾರ್ಮರ್ ಕಂಬವನ್ನು ಬದಲಾವಣೆ ಮಾಡುವಂತೆ ಹಲವು ಬಾರಿ ಸೆಸ್ಕ್ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದರು. ಆದರೆ, ಈಗ 'ಮೈಸೂರು ಮಿತ್ರ' ವರದಿ ನಂತರ ಟ್ರಾನ್ಸ್‌ಫಾರ್ಮರ್‌ನ ಎಲ್ಲಾ 4 ಕಂಬಗಳನ್ನು ಬದಲಿಸಲಾಗಿದೆ.

ಮಿತ್ರನ ಫಲಶ್ರುತಿ



ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಕೂಡ್ಲೂರು ಕೈಗಾರಿಕಾ ಬಡಾವಣೆಯ ಟ್ರಾನ್ಸ್‌ಫಾರ್ಮರ್ ಕಂಬಗಳನ್ನು ಬದಲಿಸಲಾಯಿತು.

ಪೊಲೀಸರಿಗೆ ಬೀಳ್ಕೊಡುಗೆ...



ಮಡಿಕೇರಿ ನಗರ ಸಂಚಾರ ಪೊಲೀಸ್ ಠಾಣೆಯಿಂದ ವರ್ಗಾವಣೆಗೊಂಡ 6 ಪೊಲೀಸ್ ಸಿಬ್ಬಂದಿಯನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ನಗರ ಸಂಚಾರ ಠಾಣಾಧಿಕಾರಿ ಶ್ರೀಧರ್, ತಮ್ಮಯ್ಯ, ಎಎಸ್‌ಐ ಐ.ಪಿ.ನಂದ, ಪುರುಷ ಮತ್ತು ಮಹಿಳಾ ಸಿಬ್ಬಂದಿ ಇದ್ದರು.

ಕಾರಿಗೆ ಮಿನಿಲಾರಿ ಡಿಕ್ಕಿ: ಮೂವರಿಗೆ ಸಣ್ಣಪುಟ್ಟ ಗಾಯ



ಐಗೂರಿನ ಬಳಿ ಕಾರಿಗೆ ಮಿನಿಲಾರಿ ಡಿಕ್ಕಿ.

ಸುಂಟಿಕೊಪ್ಪ ಸೆ1–ಕಾರಿಗೆ ಮಿನಿಲಾರಿ ಡಿಕ್ಕಿ ಹೊಡೆದ ಪರಿಣಾಮ ಮೂವರು ಸಣ್ಣಪುಟ್ಟ ಗಾಯಗೊಂಡಿರುವ ಘಟನೆ ಮಾದಾಪುರ ರಾಜ್ಯ ಹೆದ್ದಾರಿ ಐಗೂರಿನ ಬಳಿ ಭಾನುವಾರ ನಡೆದಿದೆ.

ಕಾರು ಸೋಮವಾರಪೇಟೆ ಸಮೀಪದ ಬಜೆಗುಂಡಿಯಿಂದ ಮಾದಾಪುರ ಕಡೆಗೆ ಹೋಗುತ್ತಿದ್ದು, ಈ ವೇಳೆ ಸುಂಟಿಕೊಪ್ಪ ಕಡೆಯಿಂದ ಸೋಮವಾರಪೇಟೆಗೆ ಬರುತ್ತಿದ್ದ ಲಾರಿ ಚಾಲಕನ ನಿಯಂತ್ರಣ ತಪ್ಪಿ ಕಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಎರಡು ವಾಹನಗಳ ಮುಂಭಾಗ ಜಖಂ ಆಗಿದ್ದು, ಲಾರಿ ಚಾಲಕ ಸೇರಿ ಕಾರಿನಲ್ಲಿದ್ದ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಚಾಲಕನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಮಾದಾಪುರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮ್ಯಾರಥಾನ್ ಸ್ಪರ್ಧೆಗೆ ಚಾಲನೆ...



ಮಡಿಕೇರಿ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಯುವ ಜನೋತ್ಸವ ಎಚ್‌ಐವಿ, ಏಡ್ಸ್ ಅರಿವು ಆಂದೋಲನ ಅಂಗವಾಗಿ ನಡೆದ ಮ್ಯಾರಥಾನ್ ಸ್ಪರ್ಧೆಗೆ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಶುಭಾ ಚಾಲನೆ ನೀಡಿದರು.

ಮಲೆತಿರಿಕೆಬೆಟ್ಟದ ಶನೇಶ್ವರ ದೇವಸ್ಥಾನದಲ್ಲಿ ಕಡೇ ಶ್ರಾವಣ ಪೂಜೆ



ಮಲೆತಿರಿಕೆಬೆಟ್ಟ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಡೇ ಶ್ರಾವಣ ಶನಿವಾರ ಅಂಗವಾಗಿ ವಿಶೇಷ ಪೂಜಾ ಕಾರ್ಯ ನೆರವೇರಿಸಲಾಯಿತು.

ವಿರಾಜಪೇಟೆ, ಸೆ.1–ಇಲ್ಲಿನ ಮಲೆತಿರಿಕೆ ಬೆಟ್ಟದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಡೇ ಶ್ರಾವಣ ಶನಿವಾರ ಅಂಗವಾಗಿ ವಿಶೇಷ ಪೂಜಾ ಕಾರ್ಯ ನೆರವೇರಿಸಲಾಯಿತು.

ಮಧ್ಯಾಹ್ನ ಮಹಾಪೂಜೆ ನಡೆಸಲಾಯಿತು. ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ವಾದ್ಯಗೋಷ್ಠಿಯೊಂದಿಗೆ ದೇವರ ಉತ್ಸವ ಮೂರ್ತಿ ಮೆರವಣಿಗೆ ಪಟ್ಟಣದ ಮುಖ್ಯ ಬೀದಿಗಳಲ್ಲಿ ನಡೆಸಲಾಯಿತು.

ಶ್ರಾವಣ ಮಹೋತ್ಸವ ಅಂಗವಾಗಿ ಪ್ರತಿ ನಾಲ್ಕು ಶನಿವಾರ ಬೆಳಗ್ಗೆ ಗಣಪತಿ, ದುರ್ಗಾ ಹೋಮ, ಅಲಂಕಾರ ಪೂಜೆ, ನವಗ್ರಹ ಪೂಜೆ, ಸತ್ಯನಾರಾಯಣಸ್ವಾಮಿ ಪೂಜೆ, ದೇವಸ್ಥಾನದಲ್ಲಿ ದೀಪೋತ್ಸವ ಹಾಗೂ ದುರ್ಗಾದೇವಿ ಪೂಜೆ ನಡೆಸಲಾಯಿತು.

ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಖರೀದಿ ಕೇಂದ್ರ ಆರಂಭ

ಇಂದಿನಿಂದ ವಿವಿಧೆಡೆ ನೋಂದಣಿ ಆರಂಭ

ಚಾಮರಾಜನಗರ: ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯ ವಿವಿಧೆಡೆ ಸೂರ್ಯಕಾಂತಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ಸೆ.2ರಿಂದ ರೈತರು ನೋಂದಣಿ ಮಾಡಿಕೊಳ್ಳಬಹುದು.

ಚಾಮರಾಜನಗರ, ಗುಂಡ್ಲುಪೇಟೆ, ತೆರಕಣಾಂಬಿ ಹಾಗೂ ಹನೂರು ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ರೈತರಿಂದ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿಸಲು ಕೇಂದ್ರ ಸರ್ಕಾರ ಪ್ರತಿ ಕ್ವಿಂಟಾಲ್‌ಗೆ 7280 ರೂ. ದರ ನಿಗದಿ ಮಾಡಿದೆ. ಬೆಂಗಳೂರಿನ ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ (ಕೆಓಎಫ್) ಸಂಸ್ಥೆ ವತಿಯಿಂದ ಖರೀದಿಸಲಾಗುವುದು.

ನೋಂದಣಿಗೆ ರೈತರು ಪಹಣಿ (ಆರ್‌ಟಿಸಿ), ಆಧಾರ್, ಬ್ಯಾಂಕ್ ಪುಸ್ತಕದ ಜೆರಾಕ್ಸ್ (ಆಧಾರ್ ಜೋಡಣೆ ಕಡ್ಡಾಯ), ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ ತಾಲೂಕಿನ ಕೃಷಿ ಇಲಾಖೆಯಿಂದ ಫ್ರೂಟ್ಸ್ ತಂತ್ರಾಂಶದಿಂದ ರೈತರ ನೋಂದಣಿ ಸಂಖ್ಯೆ (ಎಫ್‌ಐಡಿ)ಯನ್ನು ಕಡ್ಡಾಯವಾಗಿ ಪಡೆಯಬೇಕು. ಬೆಳೆ ಸಮೀಕ್ಷೆಯಲ್ಲಿ ಸೂರ್ಯಕಾಂತಿ ಬೆಳೆ ಎಂದು ಆರ್‌ಟಿಸಿ ವಾರು ನಮೂದಾಗಿರುವ ರೈತರು ಮಾತ್ರ ಯೋಜನೆಗೆ ಅರ್ಹರಾಗಿದ್ದು, ಪ್ರತಿ ಎಕರೆಗೆ 3 ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಾಲ್ ಖರೀದಿಸಲಾಗುವುದು. ಆಧಾರ್ ಸಂಖ್ಯೆಗೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಮಾತ್ರ ಡಿಬಿಟಿ ಮುಖಾಂತರ ಹಣ ಪಾವತಿಸಲಾಗುವುದು. ಸೆ.2ರಿಂದ ರೈತರ ನೋಂದಣಿ ಕಾರ್ಯ ಪ್ರಾರಂಭಗೊಳ್ಳಲಿದ್ದು, ಜಿಲ್ಲೆಯ ಎಲ್ಲಾ ರೈತರು ಬೆಂಬಲ ಬೆಲೆ ಯೋಜನೆಯಡಿ ಸೂರ್ಯಕಾಂತಿ ಖರೀದಿ ಕೇಂದ್ರದಲ್ಲಿ ನೋಂದಾಯಿಸಿಕೊಳ್ಳಬೇಕು.

ಮಾಹಿತಿಗೆ ಜಂಟಿ ಕೃಷಿ ನಿರ್ದೇಶಕರು ಮೊ.ಸಂ: 8277930760, ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರು ಮೊ.ಸಂ: 9916643000, ಗುಂಡ್ಲುಪೇಟೆಯ ಕಾರ್ಯದರ್ಶಿ ಎಪಿಎಂಸಿ ಮೊ.ಸಂ:9844211885, ಹನೂರಿನ ಎಪಿಎಂಸಿ ಕಾರ್ಯದರ್ಶಿ ಮೊಸಂ: 9686707090 ಹಾಗೂ ಕೆಓಎಫ್‌ನ ಸಹಾಯಕ ವ್ಯವಸ್ಥಾಪಕರು ಮೊ.ಸಂ: 80730 93473 ಅನ್ನು ಸಂಪರ್ಕಿಸುವಂತೆ ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ತೆರಕಣಾಂಬಿಹುಂಡಿ ಹಾಲು ಉತ್ಪಾದಕರ ಸಂಘದ ಸಭೆ...



ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸಭೆಯನ್ನು ಅಧ್ಯಕ್ಷ ನಾಗಪ್ಪ ಉದ್ಘಾಟಿಸಿದರು. ಸಂಘದ ಉಪಾಧ್ಯಕ್ಷ ಶಂಕರಪ್ಪ, ನಿರ್ದೇಶಕರಾದ ನಾಗಮಲ್ಲಪ್ಪ, ನಂಜಪ್ಪ, ಮಹೇಶ್, ನಾಗರಾಜು, ಗುರುಸ್ವಾಮಪ್ಪ, ಪುಟ್ಟದಾಸಯ್ಯ, ಸುರೇಶ್, ಬಿ.ಮಹದೇವಮ್ಮ, ಮಹದೇವಮ್ಮ ಇದ್ದರು.

ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ

ಚಾಮರಾಜನಗರ: ತಾಲೂಕಿನ ಶಿವಪುರ ಗ್ರಾಮದ ಹೊರವಲಯದ ಅಡ್ಡಹಳ್ಳದಲ್ಲಿ ನಿರ್ಮಾಣವಾಗಲಿರುವ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಕೃಷಿ ಚಟುವಟಿಕೆಗೆ ರೈತರು ತಮ್ಮ ಜಮೀನುಗಳಿಗೆ ತೆರಳಲು ಅಡ್ಡಹಳ್ಳದ ಮೂಲಕವೇ ಹೋಗಬೇಕಿದೆ. ಮಳೆಗಾಲದಲ್ಲಿ ರೈತರು ತೊಂದರೆ ಅನುಭವಿಸುತ್ತಿದ್ದರು. ಗ್ರಾಮಸ್ಥರ ಮನವಿ ಮೇರೆಗೆ ಸಣ್ಣ ನೀರಾವರಿ ಇಲಾಖೆಯಿಂದ 50 ಲಕ್ಷ ರೂ. ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗುವುದು ಎಂದರು. ಸಂಬಂಧಪಟ್ಟ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ, ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಗ್ರಾಮಸ್ಥರ ಬಳಕೆಗೆ ನೀಡಬೇಕು ಎಂದು ಸೂಚಿಸಿದರು.

ಇದೇ ವೇಳೆ ಗ್ರಾಪಂ ಅಧ್ಯಕ್ಷ ಎಂ.ಸಿ.ಮಹದೇವಮ್ಮ, ಉಪಾಧ್ಯಕ್ಷೆ ತುಂಗಾ, ಸದಸ್ಯರಾದ ಸರಸ್ವತಿ, ಪ್ರಮೋದ್, ಶಿವಕುಮಾರ್, ಜಯಮ್ಮ, ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ್, ಮುಖಂಡ ಶಂಕರೇಗೌಡ, ಮಂಜುಳಾ, ಗ್ರಾಮಸ್ಥರು ಹಾಜರಿದ್ದರು.



ಶಿವಪುರ ಗ್ರಾಮದ ಅಡ್ಡಹಳ್ಳದ ಬಳಿ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಲಿಂಗಾಯತರನ್ನು ಓಬಿಸಿಗೆ ಸೇರಿಸಲು ಶ್ರಮ

ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ಹೇಳಿಕೆ

ಕೊಳ್ಳೇಗಾಲ, ಸೆ.1–ವೀರಶೈವ–ಲಿಂಗಾಯತ ಸಮುದಾಯವನ್ನು ಓಬಿಸಿಗೆ ಸೇರಿಸಲು ಶ್ರಮಿಸಲಾಗುವುದು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ಹೇಳಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ವೀರಶೈವ–ಲಿಂಗಾಯತ ನೌಕರರ ಬಸವ ಸೇವಾ ಸಮಿತಿ, ಬಸವ ಸೇವಾ ಪತ್ತಿನ ಸಹಕಾರ ಸಂಘ ಹಾಗೂ ಬಸವ ಮಹಾಮನೆ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಓಬಿಸಿಗೆ ಸೇರಿಸುವ ಹಿನ್ನೆಲೆಯಲ್ಲಿ ರಾಷ್ಟ್ರಮಟ್ಟದಲ್ಲೂ ಹೋರಾಟ ನಡೆಸುವ ಮೂಲಕ ಅನ್ಯಾಯಕ್ಕೊಳಗಾದ ವೀರಶೈವ–ಲಿಂಗಾಯತ ಸಮಾಜಕ್ಕೆ ನ್ಯಾಯ ಒದಗಿಸುವುದೆ ನನ್ನ ಗುರಿ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾಗೆ ಪ್ರತಿ ಜಿಲ್ಲೆಯಿಂದ 10 ಸಾವಿರ ಸದಸ್ಯರನ್ನು ನೋಂದಾಯಿಸುವ ಗುರಿ ಹೊಂದಲಾಗಿದೆ. ಇದಕ್ಕೆ ಸಮಾಜದವರು ಕೈಜೋಡಿಸಬೇಕು. ವೀರಶೈವ–ಲಿಂಗಾಯತ ಎರಡು ಒಂದೇ ಆಗಿದ್ದು, ಎಲ್ಲರೂ ಒಗ್ಗೂಡಿದಾಗ ಮಾತ್ರ ನಮ್ಮ ಸಮಾಜದ ಬೇಡಿಕೆ ಹಾಗೂ ಆಶಯ ಈಡೇರಿಸಿಕೊಳ್ಳಲು ಸಾಧ್ಯ. ಹಾಗಾಗಿ ಎಲ್ಲರೂ ಸಂಘಟಿತ ಹೋರಾಟಕ್ಕೆ ಸಜ್ಜಾಗಬೇಕು ಎಂದರು. ಮೈಸೂರಿನ ಕುದೇರು ಮಠಾಧ್ಯಕ್ಷ ಶ್ರೀ ಗುರು ಶಾಂತಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸುತ್ತೂರು ವಿದ್ಯಾಸಂಸ್ಥೆಗಳ ಸಂಯೋಜನಾಧಿಕಾರಿ ವಿ.ಎಲ್.ತ್ರಿಪುರಾಂತಕ, ವೀರಶೈವ–ಲಿಂಗಾಯತ ನೌಕರರ ಬಸವ ಸೇವಾ ಸಮಿತಿ ಅಧ್ಯಕ್ಷ ಎಸ್.ಮಲ್ಲೇಶಪ್ಪ, ಬಸವ ಸೇವಾ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷ ಎಸ್.ಸೋಮಶೇಖರಪ್ಪ, ಬಸವ ಮಹಾಮನೆ ಟ್ರಸ್ಟ್‌ನ ಕಾರ್ಯದರ್ಶಿ ಜಿ.ವೀರಭದ್ರಸ್ವಾಮಿ ಇದ್ದರು.



ಕೊಳ್ಳೇಗಾಲದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಪ್ರತಿಭಾವಂತರಿಗೆ ಪುರಸ್ಕಾರ ನೀಡಲಾಯಿತು.

ಸೆ.14ರವರೆಗೆ ತೆರಿಗೆ ಪಾವತಿಗೆ ಅವಧಿ ವಿಸ್ತರಣೆ

ಚಾಮರಾಜನಗರ, ಸೆ.1– ರಾಜ್ಯದ ನಗರ ಸ್ಥಳೀಯ ಸಂಸ್ಥೆ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ) ಹಾಗೂ ಮಹಾನಗರ ಪಾಲಿಕೆಗಳಲ್ಲಿ ಆರ್ಥಿಕ ವರ್ಷದ ತೆರಿಗೆ ಪಾವತಿ ಶೇ.5ರಷ್ಟು ರಿಯಾಯಿತಿ ಅವಧಿಯನ್ನು ಸೆ.14 ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ಈ ಹಿನ್ನಲೆಯಲ್ಲಿ 2024–25ನೇ ಸಾಲಿನವರೆಗೆ ಬಾಕಿ ಇರುವ ನಗರಸಭೆ ವ್ಯಾಪ್ತಿಗೆ ಒಳಪಡುವ ಕಟ್ಟಡ, ನಿವೇಶನಗಳ ಮಾಲೀಕರು ಆಸ್ತಿ ತೆರಿಗೆಯನ್ನು ಸೆ.14ರೊಳಗಾಗಿ ಪಾವತಿಸಿದ್ದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಉಪನ್ಯಾಸಕ ಲಕ್ಷ್ಮಣ್‌ಗೆ ಬೀಳ್ಕೊಡುಗೆ



ಚಂದಕವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನ ನಿವೃತ್ತ ಉಪನ್ಯಾಸಕ ಡಿ.ಲಕ್ಷ್ಮಣ್ ಅವರನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಚಾಮರಾಜನಗರ, ಸೆ.1–ತಾಲೂಕಿನ ಚಂದಕವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಇತಿಹಾಸ ನಿವೃತ್ತ ಉಪನ್ಯಾಸಕ ಡಿ.ಲಕ್ಷ್ಮಣ್ ಅವರನ್ನು ಕಾಲೇಜು ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು.

ಉಪನ್ಯಾಸಕ ಪಿ.ನಟರಾಜ್ ಮಾತನಾಡಿ, ಕಾಲೇಜಿನ ಹಿರಿಯರಾಗಿ ಲಕ್ಷ್ಮಣ್ ಅವರು ನಮಗೆ ಮಾರ್ಗದರ್ಶನ ನೀಡುತ್ತಿದ್ದರು. ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡುತ್ತಿದ್ದರು. ಜೊತೆಗೆ ಕಾಲೇಜಿನಲ್ಲಿ ಎಲ್ಲರೊಡನೆ ಉತ್ತಮ ಬಾಂಧವ್ಯ ಹೊಂದಿದ್ದರು ಎಂದರು.

ನಿವೃತ್ತ ಉಪನಿರ್ದೇಶಕ ಡಿ.ಎಸ್.ಕೃಷ್ಣಮೂರ್ತಿ ಮಾತನಾಡಿ, ಪ್ರತಿಯೊಬ್ಬರು ಸರ್ಕಾರಿ ವೃತ್ತಿಯಲ್ಲಿ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಡಿ.ಲಕ್ಷ್ಮಣ್, ವೃತ್ತಿ ಜೀವನದಿಂದ ಆತ್ಮೀಯತೆ ಕಂಡುಕೊಂಡೆ. ವಯಸ್ಸಿನಲ್ಲಿ ಹಿರಿಯನಾದರು ವೃತ್ತಿಯಲ್ಲಿ ಕಿರಿಯವನಾಗಿ ಕೆಲಸ ಮಾಡಿದ ಸಂತೃಪ್ತಿ ನನಗಿದೆ ಎಂದರು.

ಇದೇ ವೇಳೆ ವರ್ಗಾವಣೆಗೊಂಡ ಉಪನ್ಯಾಸಕಿಯರಾದ ಬಿ.ವಿ.ಸುಧಾ ಮತ್ತು ಶಕುಂತಲಾ ಹೊಸದಾಗಿ ಕರ್ತವ್ಯಕ್ಕೆ ಹಾಜರಾದ ಕೇಶವ್ ಮತ್ತು ಸಾವಿತ್ರಿ ಅವರನ್ನು ಸನ್ಮಾನಿಸಲಾಯಿತು.

ಪ್ರಾಂಶುಪಾಲ ಹೆಚ್.ಎನ್.ಸ್ವಾಮಿ, ಉಪಪ್ರಾಂಶುಪಾಲ ಚಂದ್ರಶೇಖರ್, ದಡದಹಳ್ಳಿ ರಮೇಶ್, ಮುನೀರ್, ನಿವೃತ್ತ ಪ್ರಾಂಶುಪಾಲರಾದ ಬಂಗಾರನಾಯಕ, ಡಿ.ಎಸ್.ಲಿಂಗರಾಜು, ಮಂಜುನಾಥ್, ಪ್ರಿಯಶಂಕರ್, ಸತೀಶ್, ಪ್ರಭುಸ್ವಾಮಿ, ಗಾಯತ್ರಿ, ಹೇಮಾ, ಶಿವಸ್ವಾಮಿ, ಅಮಚವಾಡಿ ಮೂರ್ತಿ, ಪಟ್ಟೇಶ್, ಶಾಜೀಯ ಹಸನ್, ರತ್ನಮ್ಮ, ಬಸವಣ್ಣ, ಸಿದ್ದರಾಜು ಇತರರು ಇದ್ದರು.

ರಸ್ತೆಯಲ್ಲಿ ಹರಿಯುತ್ತಿರುವ ಒಳಚರಂಡಿ ನೀರು



ಸೋಮವಾರಪೇಟೆಯಲ್ಲಿ ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿರುವುದು.

ಚಾಮರಾಜನಗರ ಸೆ.1–ನಗರಸಭೆ ವ್ಯಾಪ್ತಿಯ 1ನೇ ವಾರ್ಡ್‌ನ ಸೋಮವಾರಪೇಟೆಯಲ್ಲಿ ಒಳಚರಂಡಿ ಕಾಮಗಾರಿ ಅಪೂರ್ಣಗೊಂಡ ಪರಿಣಾಮ ಕೊಳಚೆ ನೀರು ರಸ್ತೆಯಲ್ಲಿ ಹರಿದು ಅಲ್ಲಿನ ಜನರು ಸಂಕ್ರಾಮಿಕ ರೋಗದ ಭೀತಿ ಎದುರಿಸುತ್ತಿದ್ದಾರೆ.

ಸೋಮವಾರಪೇಟೆ ಹಾಗೂ ಕರಿನಂಜನಪುರ ರಸ್ತೆಯ ಹುಣಸೇಮರದ ಬಳಿ ಒಳಚರಂಡಿ ಮ್ಯಾನ್ ಹೋಲ್‌ನಿಂದ ನೀರು ಮುಂದೆ ಸಾಗಲು ಆಗದೆ ಇರುವುದರಿಂದ ರಸ್ತೆಯಲ್ಲಿ ಹರಿದು ವಾರ್ಡ್‌ನ ಜನರು ತಿರುಗಾಡಲು ಸಾಧ್ಯವಾಗುತ್ತಿಲ್ಲ. ಜೊತೆಗೆ ದುರ್ನಾತದಿಂದ ಜೀವನ ನಡೆಸುವಂತಾಗಿದೆ. ಅಲ್ಲದೆ, ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದೆ. ಈ ಕುರಿತು ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದರೂ ಯಂತ್ರದ ಮೂಲಕ ನೀರು ತೆರವು ಮಾಡಲಾಗುತ್ತಿದೆ ಹೊರತು, ಶಾಶ್ವತ ಪರಿಹಾರ ಸಿಗುತ್ತಿಲ್ಲ.

ಈ ಸಂಬಂಧ ಜಿಲ್ಲಾಧಿಕಾರಿ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಂಡು ಬಾಕಿ ಕಾಮಗಾರಿ ಪೂರ್ಣಗೊಳಿಸಿಕೊಡಬೇಕು ಎಂದು ನಗರಸಭೆ ಮಾಜಿ ಸದಸ್ಯ ಎಸ್.ಮಹದೇವು ಒತ್ತಾಯಿಸಿದ್ದಾರೆ.

ಒಂದನೇ ಪುಟದಿಂದ

ಮೈಸೂರು ವಾರಿಯರ್ಸ್ ಚಾಂಪಿಯನ್ಸ್

ತಕ್ಕ ಆಟವಾಡಿದ ಕರುಣ್ ನಾಯರ್ 45 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ 66 ರನ್ ಗಳಿಸಿ ನಿರ್ಗ ಮಿಸಿದರು. ಈ ವೇಳೆ ತಂಡದ ಮೊತ್ತ 4 ವಿಕೆಟ್ ನಷ್ಟಕ್ಕೆ 167 ರನ್ ಆಗಿತ್ತು. ನಂತರ ಕ್ರೀಸ್‌ಗೆ ಆಗಮಿಸಿದ ಮನೋಜ್ ಭಾಂಡಗೆ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿ ದರು. ಕೇವಲ 13 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ

ಒಳಗೊಂಡ ಅಜೇಯ 44 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಉಳಿದಂತೆ ಜೆ.ಸುಚಿತ್ 7 ರನ್ ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಮೈಸೂರು ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 207 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಬೆಂಗಳೂರು ಬ್ಲಾಸ್ಟರ್ಸ್ ಪರ ಎಂ.ನವೀನ್ 2, ಕ್ರಾಂತಿ ಕುಮಾರ್ ಹಾಗೂ ಶುಭಾಂಗ್ ಹೆಗ್ಗಡೆ ತಲಾ ಒಂದೊಂದು ವಿಕೆಟ್ ಪಡೆದರು. ಮೈಸೂರು ವಾರಿಯರ್ಸ್ ನೀಡಿದ 208 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಬೆಂಗಳೂರು ಬ್ಲಾಸ್ಟರ್ ಆರಂಭ ಕೂಡ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 26 ರನ್ ಆಗುವಷ್ಟರಲ್ಲಿ 6 ರನ್ ಗಳಿಸಿದ್ದ ನಾಯಕ ಮಯಾಂಕ್ ಅಗರ್ವಾಲ್, ಭುವನ್ ರಾಜು 1 ರನ್, 5 ರನ್ ಗಳಿಸಿದ್ದ ಶಿವಕುಮಾರ್ ರಕ್ಷಿತ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಬಂದ ಶುಭಾಂಗ್ ಹೆಗ್ಗಡೆ 5, ಸೂರಜ್ ಅಹುಜಾ 8ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಮತ್ತೊಂದೆಡೆ ಇನ್ನಿಂಗ್ಸ್ ಆರಂಭಿಸಿದ ಎಲ್.ಆರ್.ಚೇತನ್ 32 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಒಳಗೊಂಡ 51 ರನ್ ಗಳಿಸಿ ಔಟಾದರು. ಉಳಿದಂತೆ ಇನ್ನಿಂಗ್ಸ್‌ನ ಅಂತಿಮ ಓವರ್‌ಗಳಲ್ಲಿ ಜಯಕ್ಕಾಗಿ ಹೋರಾಡಿದ ಕ್ರಾಂತಿ ಕುಮಾರ್ 21 ಎಸೆತಗಳಲ್ಲಿ 2 ಬೌಂಡರಿ, 3 ಸಿಕ್ಸರ್ ಒಳಗೊಂಡ 39, ಅನಿರುದ್ಧ ಜೋಷಿ 2 ಸಿಕ್ಸರ್ ಒಳಗೊಂಡ 18, ಎಂ.ಜಿ.ನವೀನ್ 17 ರನ್ ಗಳಿಸಿದರು. ಅಂತಿಮವಾಗಿ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು. ಮೈಸೂರು ವಾರಿಯರ್ಸ್ ಪರ ವಿದ್ಯಾಧರ ಪಾಟೀಲ್ 3, ಕೃಷ್ಣಪ್ಪ ಗೌತಮ್ 2, ಕೋದಂಡ ಅಜಿತ್ ಕಾರ್ತಿಕ್, ಧನುಶ್ ಗೌಡ ಹಾಗೂ ದೀಪಕ್ ದೇವಾಡಿಗ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ ಎಸ್.ಯು.ಕಾರ್ತಿಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೆ, ಸರಣಿಯುದ್ದಕ್ಕೂ ನಾಯಕತ್ವದೊಂದಿಗೆ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ಚಾಂಪಿಯನ್: ಮೊದಲ ಆವೃತ್ತಿಯಲ್ಲಿ ಸೆಮಿ ಫೈನಲ್, 2ನೇ ಆವೃತ್ತಿಯಲ್ಲಿ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟಿದ್ದ ಕರುಣ್ ನಾಯರ್ ನಾಯಕತ್ವದ ಮೈಸೂರು ವಾರಿಯರ್ಸ್ 2024ರಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ನಾನೂ ಸಿಎಂ ಆಗುವೆ...!

ನನಗೆ ಮುಖ್ಯಮಂತ್ರಿ ಆಗುವ ಆಸೆ ಇದೆ. ನನ್ನನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ನೋಡುವ ಆಸೆ ಜನರಿಗೂ ಇದೆ. ಜೀವನದಲ್ಲಿ ಮಹತ್ವಾಕಾಂಕ್ಷೆ ಇರ ಬೇಕು. ಆಗ ಎಲ್ಲವೂ ಸಾಧ್ಯ ಎಂದು ತಿಳಿಸಿದರು. ಆದರೆ, ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿ ಆಗಿರುತ್ತಾರೆ. ಸಿದ್ದ ರಾಮಯ್ಯ ಅವರನ್ನು ಬದಲಾವಣೆ ಮಾಡುವ ಯಾವುದೇ ಚರ್ಚೆ ನಡೆದಿಲ್ಲ. ಇಲಾಖೆಗೆ ಸಂಬಂಧಪಟ್ಟಂತೆ ಗೃಹ ಸಚಿವ ಡಾ.ಪರಮೇಶ್ವರ್ ಹಾಗೂ ಲೋಕೋಪ ಯೋಗಿ ಸಚಿವ ಸತೀಶ್ ಜಾರಕಿಹೊಳಿ ಸಭೆ ನಡೆಸಿದ್ದು, ಇದು ಯಾವುದೇ ರಾಜಕೀಯ ಕಾರಣಕ್ಕಲ್ಲ ಎಂದು ದೇಶಪಾಂಡೆ ಸ್ಪಷ್ಟನೆ ನೀಡಿದರು.

ಗ್ಯಾರಂಟಿಗಳಿಂದ ಸರ್ಕಾರಕ್ಕೆ ಆರ್ಥಿಕ ಹೊರೆ

ಗ್ಯಾರಂಟಿ ಯೋಜನೆಯಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಆಗಿರುವುದು ನಿಜ ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಒಪ್ಪಿಕೊಂಡಿದ್ದಾರೆ. ಗ್ಯಾರಂಟಿ ಯೋಜನೆಗೆ 50 ರಿಂದ 60 ಸಾವಿರ ಕೋಟಿ ಬೇಕಾಗಿದೆ. ಇದನ್ನು ಸರಿದೂಗಿಸುವ ಕೆಲಸ ನಡೆಯುತ್ತಿದೆ ಎಂದು ಹೇಳಿದರು. ಆದರೆ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಗ್ಯಾರಂಟಿ ಯೋಜನೆ ಕಾರಣವಲ್ಲ. ದೇಶದಲ್ಲೆ ಬೆಲೆ ಹೆಚ್ಚಳವಾಗಿದೆ. ಇದರಿಂದ ಜನ ಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ದೇಶಪಾಂಡೆ ಕೇಂದ್ರ ಸರ್ಕಾರದ ಆರ್ಥಿಕ ನೀತಿ ವಿರುದ್ಧ ಬೊಟ್ಟು ಮಾಡಿದರು.

ಇಂದು ಮಹತ್ವದ ದಿನ

ಚರ್ಚೆ ಮಾಡುತ್ತೇವೆ ಎಂದಿದ್ದಾರೆ. ಕಾಂಗ್ರೆಸ್‌ನಲ್ಲಿ ಸಿಎಂ ಬದಲಾವಣೆ ಕೂಗು ಕೇಳುತ್ತಿದ್ದಂತೆ ಸಚಿವ ಜಮೀರ್ ಅಹ್ಮದ್ ಸಿದ್ದರಾಮಯ್ಯ ಬೆನ್ನಿಗೆ ನಿಂತಿದ್ದಾರೆ. ಸಿಎಂ ಸಿದ್ದರಾಮಯ್ಯ ಟಗರು, ಒಂಥರಾ ಹುಲಿ ಇದ್ದಂಗೆ ನಮ್ಮ ಸಿಎಂ. ಸಿದ್ದರಾಮಯ್ಯ ಭಯಪಡೋ ಪ್ರಶ್ನೆಯೇ ಇಲ್ಲ. ಟಗರು ಗುಟುರು ಹಾಕು ತ್ತಲ್ಲಾ ಆ ಥರಾ ನಮ್ಮ ಸಿಎಂ, ಸಿದ್ದರಾಮಯ್ಯ ಬದಲಾ ವಣೆ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ಇನ್ನು ಕಾಂಗ್ರೆಸ್‌ನ ಸಿಎಂ ಬದಲಾವಣೆ ವಿಚಾರಕ್ಕೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವ್ಯಂಗ್ಯವಾಡಿದ್ದಾರೆ. ಸಿಎಂ ಟಗರು, ಹುಲಿ ಇದ್ದ ಹಾಗೇ ಯಾರು ಏನು ಮಾಡಲು ಆಗಲ್ಲ ಅಂತಾ ಜಮೀರ್ ಹೇಳುತ್ತಾರೆ. ಹಾಗಾದರೆ ಮನೆಯಲ್ಲಿ ಸುಮ್ಮನೆ ಕುಳಿತುಬಿಡಲಿ. ನೈತಿಕ ಹೊಣೆ ಹೊತ್ತು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಭಾವನಾತ್ಮಕ ಬ್ಲಾಕ್‌ಮೇಲ್ ತಂತ್ರಗಾರಿಕೆ ನಡೀತಿದೆ. ಒಂದೇ ವರ್ಷದಲ್ಲಿ ಸಿದ್ಧರಾಮಯ್ಯ, ಕಾಂಗ್ರೆಸ್ ಜನಪ್ರಿಯತೆ ಕುಸಿದಿದೆ ಎಂದು ಟಾಂಗ್ ಕೊಟ್ಟಿದ್ದಾರೆ. ಪ್ರಾಸಿಕ್ಯೂಷನ್ ಬಗ್ಗೆ ಮಾತನಾಡಿದ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ಮಿತ್ರರು ಯಾಕೆ ಆತಂಕಕ್ಕೆ ಒಳಗಾಗಿದ್ದಾರೋ ಗೊತ್ತಿಲ್ಲ. ಅಂತಿಮ ಘಟ್ಟದಲ್ಲಿದ್ದು ಕಾದು ನೋಡೋಣಾ. ಕೋರ್ಟ್ ತೀರ್ಪಿನ ಮೇಲೆ ಸಿಎಂ ಮುಂದುವರಿಕೆ ನಿಂತಿದೆ. ಕಾಂಗ್ರೆಸ್ ನವರು ತಮ್ಮನ್ನ ತಾವು ಉಳಿಸಿಕೊಳ್ಳಲು ಆಧಾರವಿಲ್ಲದ ಆರೋಪ ಮಾಡುತ್ತಿದ್ದಾರೆ. ತಮ್ಮ ತಪ್ಪನ್ನ ಮುಚ್ಚಿಕೊಳ್ಳಲು ಬಳಸುತ್ತಿರುವ ಟ್ರಿಕ್ಸ್ ಇದು ಅಂತ ಆರೋಪ ಮಾಡಿದ್ದಾರೆ. ಒಟ್ಟಿನಲ್ಲಿ ನಾಳೆ ಸಿಎಂ ಸಿದ್ದರಾಮಯ್ಯಗೆ ಮಹತ್ವದ ದಿನ ಕೋರ್ಟ್‌ನಲ್ಲಿ ಏನಾಗುತ್ತೆ ಅನ್ನೋ ಆತಂಕದ ನಡುವೆ ಟೆಂಪಲ್ ರನ್‌ಗೆ ಮುಂದಾಗಿದ್ದಾರೆ. ಈ ಮಧ್ಯೆ ಕೈಪಡೆಯಲ್ಲಿ ಸಿಎಂ ಖುರ್ಚಿಯ ಕಿತ್ತಾಟ ಶುರುವಾಗಿದ್ದು, ಸಿಎಂಗಾದಿ ಮೇಲೆ ಒಬ್ಬೊಬ್ಬರೇ ಟವೆಲ್ ಹಾಕುತ್ತಿದ್ದಾರೆ.

ಅಕ್ರಮ ಮಂಜೂರಾತಿ ರದ್ದು ಮಾಡಿ

ಕ್ರಮ ಕೈಗೊಳ್ಳುವ ಬದಲು ಕಸದ ಬುಟ್ಟಿಗೆ ಎಸೆದಿದ್ದೀರಾ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ರಘು ಕೌಟಿಲ್ಯ, ಯಾವುದೇ ಕ್ರಮಕ್ಕೆ ಮುಂದಾಗದ ನಿಮ್ಮ ಧೋರಣೆ ಗಮನಿಸಿದರೆ ಹಗರಣದಲ್ಲಿ ತಾವು ಕೂಡ ಪಾಲುದಾರರಾಗಿದ್ದೀರಾ ಎಂಬ ಅನುಮಾನ ಗಳು ರಾಜ್ಯದ ಜನರನ್ನು ಕಾಡುತ್ತಿದೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ 14 ನಿವೇಶನಗಳನ್ನು ಅಕ್ರಮ ವಾಗಿ ಮಂಜೂರು ಮಾಡಿರುವುದರಿಂದ ತಾವು ಒತ್ತಡಕ್ಕೆ ಒಳಗಾಗಿ ಮೌನ ವಹಿಸಿದ್ದೀರಾ ಎಂದು ಪ್ರಶ್ನಿಸಿದರು.

ಮೈಸೂರಿನ ಸಾವಿರಾರು ಜನ ನಿವೇ ಶನಕ್ಕೆ ಅರ್ಜಿ ಸಲ್ಲಿಸಿ ಕಾಯುತ್ತಿದ್ದರೂ ಯಾರಿಗೂ ಒಂದು ನಿವೇಶನ ನೀಡದೇ ಇದ್ದರೂ ಮುಡಾದ ಹಿಂದಿನ ಆಯುಕ್ತ ರಾದ ಡಿ.ಬಿ.ನಟೇಶ್ ಹಾಗೂ ಜಿ.ಟಿ. ದಿನೇಶ್‌ಕುಮಾರ್, ಅಕ್ರಮವಾಗಿ ನಿವೇ ಶನಗಳನ್ನು ಕ್ರಯ ಮಾಡಿದ್ದಾರೆ. ಸಾವಿ ರಾರು ಕೋಟಿ ರೂಪಾಯಿ ಅಕ್ರಮ ನಡೆಸಿರುವ ಈ ಇಬ್ಬರ ವಿರುದ್ಧ ಇಲ್ಲಿ ತನಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗಲಾದರೂ ಅಕ್ರಮವಾಗಿ ಮಂಜೂರು ಮಾಡಿರುವ ಎಲ್ಲಾ ನಿವೇಶನ ಗಳನ್ನು ರದ್ದು ಮಾಡಿ ಅಧಿಸೂಚನೆ ಹೊರ ಡಿಸಬೇಕು. ಜೊತೆಗೆ ಅಕ್ರಮದ ಪಾಲು ದಾರರಾದ ನಟೇಶ್ ಹಾಗೂ ದಿನೇಶ್ ಕುಮಾರ್ ಸೇರಿದಂತೆ ತಪ್ಪಿತಸ್ಥ ಅಧಿಕಾರಿ ಗಳನ್ನು ಅಮಾನತು ಮಾಡಿ, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಒಂದು ವಾರದೊಳಗೆ ಯಾವುದೇ ಕ್ರಮ ಜರುಗಿಸದಿದ್ದರೆ ನೀವು ಕೂಡ ಹಗರಣ ದಲ್ಲಿ ಪಾಲುದಾರರೆಂದು ಪರಿಗಣಿಸಿ ನಿಮ್ಮ ವಿರುದ್ಧ ಕಾನೂನು ಹೋರಾಟ ನಡೆಸ ಬೇಕಾಗುತ್ತದೆ. ಈ ಮೂಲಕ ನ್ಯಾಯಾ ಲಯದ ಕಟಕಟೆಯಲ್ಲಿ ನಿಲ್ಲಿಸಬೇಕಾ ಗುತ್ತದೆ ಎಂದು ಶಾಲಿನಿ ರಜನೀಶ್ ಅವರನ್ನು ರಘು ಕೌಟಿಲ್ಯ ಎಚ್ಚರಿಸಿದ್ದಾರೆ.

ಅಕ್ರಮವಾಗಿ ಮಂಜೂರಾಗಿರುವ ನಿವೇಶನಗಳ ಕ್ರಯ ಮಾಡುವ ವೇಳೆ ಮುದ್ರಾಂಕ ಶುಲ್ಕ ಪಾವತಿಸದೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಕೂಡ ಮಾಡಿದ್ದಾರೆ. ಈ ಬಗ್ಗೆ ಕೂಡ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ ಎಂದು ತಿಳಿಸಿದರು. ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಗಿರಿಧರ್, ಮಾಧ್ಯಮ ಸಂಚಾಲಕ ಮಹೇಶ್ ರಾಜ್ ಅರಸ್, ಸಹ ಸಂಚಾಲಕ ಸಂತೋಷ್ ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹಗರಣದ ಹೆಗ್ಗಣದ ಗೂಡಿಗೆ ಹೋಗಲಾಗದೆ ಕೈ ಚೆಲ್ಲಿದ್ದಾರೆ

ಮುಡಾದಲ್ಲಿ ನಡೆದಿರುವ ಹಗರಣದ ಹೆಗ್ಗಣದ ಗೂಡಿಗೆ ಹೋಗಲು ಸಾಧ್ಯವಿಲ್ಲವೆಂದು ಅಕ್ರಮದ ಬಗ್ಗೆ ತನಿಖೆ ನಡೆಸುತ್ತಿರುವ ಐಎಎಸ್ ಅಧಿಕಾರಿ ವೆಂಕಟಾಚಲಪತಿ ಕೈ ಚೆಲ್ಲಿ ಕೂತಿದ್ದಾರೆ ಎಂದು ರಘು ಕೌಟಿಲ್ಯ ಲೇವಡಿ ಮಾಡಿದರು.

ಮುಡಾ ಅಕ್ರಮಗಳ ತನಿಖೆಯ ಜವಾಬ್ದಾರಿಯನ್ನು ವೆಂಕಟಾಚಲಪತಿ ನೇತೃತ್ವದ ತಂಡಕ್ಕೆ ಸರ್ಕಾರ ವಹಿಸಿತ್ತು. ಆದರೆ ಈ ತನಕ ಇವರು ಯಾರೂ ಕೂಡ ಪತ್ತೆ ಇಲ್ಲ ಎಂದು ಹೇಳಿದರು. ಬಗೆದಷ್ಟು ಮುಡಾ ಅಕ್ರಮ ಬಯಲಾಗುತ್ತಿದ್ದರೂ ಸರ್ಕಾರ ಈ ತನಕ ಯಾವ ಅಧಿಕಾರಿ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಇದನ್ನು ನೋಡಿದರೆ ರಾಜ್ಯದಲ್ಲಿ ಸರ್ಕಾರ ಅಸ್ತಿತ್ವದಲ್ಲಿ ಇದೆಯಾ ಇಲ್ಲ ನಿದ್ರೆ ಮಾಡುತ್ತಿದೆಯಾ ಎಂಬ ಪ್ರಶ್ನೆಗಳು ಎದುರಾಗುತ್ತಿವೆ ಎಂದರು.

ಮುಡಾ ಆಯುಕ್ತರಾಗಿದ್ದ ದಿನೇಶ್ ಕುಮಾರ್ ಅವರನ್ನು ಹಾವೇರಿ ವಿಶ್ವವಿದ್ಯಾನಿಲಯದ ಕುಲಸಚಿವರನ್ನಾಗಿ ನೇಮಕ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ರಘು ಕೌಟಿಲ್ಯ, ಈ ಸರ್ಕಾರದಲ್ಲಿ ಬಡ್ತಿ ಬೇಕೆಂದರೆ ಭ್ರಷ್ಟಾಚಾರ ಮಾಡಬೇಕು. ಇದು ಅಧಿಕಾರಿಗಳಿಗೆ ಈ ಸರ್ಕಾರದಲ್ಲಿರುವ ಮಾನದಂಡ. ಕೋಟಿ ಕೋಟಿ ಲೂಟಿ ಮಾಡಿರುವ ಅಧಿಕಾರಿಗಳಿಗೆ ಬಡ್ತಿ ನೀಡಿರುವುದು ವಿಪರ್ಯಾಸದ ಸಂಗತಿ ಎಂದರು.

ಮೈಸೂರು ಮಿತ್ರ ಸೋಮವಾರ 2 ಸೆಪ್ಟೆಂಬರ್ 2024

ನನ್ನ ಕೈ ಹಿಡಿದಿರುವ ನಿಮ್ಮ ಋಣ ನಾ ಹೇಗೆ ತೀರಿಸಲಿ...!

ಹುಣಸೂರಲ್ಲಿ ಕೆಂಪೇಗೌಡರ ಜಯಂತಿ ಉದ್ಘಾಟಿಸಿದ ಶಾಸಕ ಹರೀಶ್‌ಗೌಡ



ಹುಣಸೂರಲ್ಲಿ ನಡೆದ ಕೆಂಪೇಗೌಡ ಜಯಂತಿಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಸೆ.1– ನಗರದ ಆದಿ ಚುಂಚನಗಿರಿ ಸಮುದಾಯ ಭವನದಲ್ಲಿ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಶಿಕ್ಷಣದಲ್ಲಿ ಹೆಚ್.ಎನ್.ಗಿರೀಶ್, ಯುಪಿಎಸ್ಸಿ ಯಂತಹ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಲೇಖನ್ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಪ್ರೇಮ್‌ಕುಮಾರ್ ಅವರು ಸಾಧನೆ ಮಾಡುವ ಮೂಲಕ ಸಮುದಾಯಕ್ಕೆ ಮತ್ತು ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ನಾಡಪ್ರಭು ಕೆಂಪೇಗೌಡರು ಎಲ್ಲಾ ಸಮುದಾಯದ ಬದುಕಿಗೆ ನೆರವಾಗಲು ಅಂದು ಪೇಟೆಗಳನ್ನು ನಿರ್ಮಿಸಿ ನಾಲ್ಕು ಶತಮಾನ ಕಳೆದರೂ ಇಂದಿಗೂ ಮನೆ ಮಾತಾಗಿದ್ದಾರೆ. ಅದೇ ರೀತಿ ತಾಲೂಕಿನ ಜನತೆ ನನ್ನ ಕೈಹಿಡಿದು ಮುನ್ನಡೆಸಿ ಹರಸಿದ್ದಾರೆ. ಆದ್ದರಿಂದ ನಿಮ್ಮ ಋಣವನ್ನು ಈ ಜನ್ಮದಲ್ಲಿ ತೀರಿಸಲಾರೆ ಎಂದರು. ಪ್ರಧಾನ ಭಾಷಣಕಾರ ನಿವೃತ್ತ ಪ್ರಾಂಶುಪಾಲ ಸಿದ್ದರಾಮೇಗೌಡ ಮಾತನಾಡಿ, ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯ ಹರಿಕಾರ. ಅವರ ಆಳ್ವಿಕೆಯಲ್ಲಿ ಸಮಾಜದ ಪ್ರತಿಯೊರ್ವ ನಾಗರಿಕರಿಗೆ ಸಮಾನತೆ ನೀಡಿದ ಮಹಾನಾಯಕ ನಾಡಪ್ರಭು ಕೆಂಪೇಗೌಡರು ಎಂದರು.

ಬಾಲ್ಯದಲ್ಲೇ ಉತ್ತಮ ನಾಯಕತ್ವ ಗುಣ ಹೊಂದಿದ್ದ ಅವರು ಬೆಂದಕಾಳೂರಿನ ನಾಲ್ಕು ದಿಕ್ಕುಗಳಿಗೂ ಗೋಪುರ ನಿರ್ಮಿಸಿ. ಚೌಕಟ್ಟು ಹಾಕಿದ ಬೆಂಗಳೂರು ಇಂದಿಗೂ ವಿಶ್ವ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ ಕೀರ್ತಿ ನಾಡಪ್ರಭುಗಳು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆ.ಗಣೇಶ್ ಗೌಡ, 2009 ರಿಂದಲೂ ಕೆಂಪೇಗೌಡರ ಜಯಂತಿ ಮತ್ತು ತಾಲೂಕಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಸಲಾಗುತ್ತಿದೆ ಎಂದರು. ದಿವ್ಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದ ಆದಿಚುಂಚನಗಿರಿ ಮಠದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮಿ, ನಾಡಿನ ಒಕ್ಕಲಿಗ ಸಮುದಾಯ ದೇಶ ಕಾಯುವ ಸೈನಿಕರಂತೆ. ದೇಶಕ್ಕೆ ಅನ್ನ ನೀಡುವ ರೈತರ ಮಕ್ಕಳು ಐಎಎಸ್, ಐಪಿಎಸ್, ಕೆಎಎಸ್ ನಂತಹ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಮೂಲಕ ದೇಶದ ಉನ್ನತ ಹುದ್ದೆಗಳ ಅಲಂಕರಿಸಬೇಕೆಂದರು.

ಕಾರ್ಯಕ್ರಮದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪಾಸಾದ ಲೇಖನ್ ಹಾಗೂ ಅಂತಾರಾಷ್ಟ್ರೀಯ ಥ್ರೋ ಬಾಲ್ ಕ್ರೀಡೆಗೆ ಆಯ್ಕೆಯಾಗಿರುವ ಪ್ರೇಮ್ ಕುಮಾರ್ ಹಾಗೂ 98 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಸ್ .ಯೋಗಾನಂದ್ ಕುಮಾರ್, ತಾಲೂಕಿನ ಸೀತಾರಾಮು, ಬಿಳಿಕೆರೆ ಗೌರಿ ಶಂಕರ್, ಒಕ್ಕಲಿಗರ ಸಂಘದ ನಿರ್ದೇಶಕರಾದ ಬಾಲಕೃಷ್ಣ, ಸುರೇಶ್, ಡಾ.ಕೀರ್ತಿ ಕುಮಾರ್, ಚಿಕ್ಕಹುಣಸೂರು ಗೋವಿಂದೇಗೌಡ, ರಾಮಕೃಷ್ಣೇಗೌಡ, ಅಣ್ಣಯ್ಯ, ಉದಯ ರಾಯನಹಳ್ಳಿ, ಸತೀಶ್ ಪಾಪಣ್ಣ, ಬಿಳಿಕೆರೆ ಪ್ರಸನ್ನ, ಸುನಿತಾ ಜಯರಾಮೇಗೌಡ, ರುದ್ರೇಗೌಡ, ಚಂದ್ರೇಗೌಡ ಇನ್ನು ಮುಂತಾದವರು ಇದ್ದರು.

ಇಂದು ಬನ್ನೂರಿಗೆ ಸುವರ್ಣ ಸಂಭ್ರಮದ ಕನ್ನಡ ತೇರು



ಬನ್ನೂರು, ಸೆ.1– ಸುವರ್ಣ ಕರ್ನಾಟಕದ 50ನೇ ಸಂಭ್ರಮ, ಸಡಗರದ ಆಚರಣೆಯ ನಿಮಿತ್ತ ಕನ್ನಡದ ತೇರು ಬನ್ನೂರಿಗೆ ಸೋಮವಾರ ಮಧ್ಯಾಹ್ನ 3 ಗಂಟೆಗೆ ಆಗಮಿಸಲಿದ್ದು, ಬನ್ನೂರಿನ ವಿವಿಧ ಸಂಘದ ಪದಾಧಿಕಾರಿಗಳು, ಅಧಿಕಾರಿಗಳು, ಸಾರ್ವಜನಿಕರು, ಮುಖಂಡರು ಜನಪರ ಸಂಘಟನೆಯ ಮುಖಂಡರು, ವಿವಿಧ ರಾಜಕೀಯ ಪಕ್ಷದ ಮುಖಂಡರು, ಹೋರಾಟಗಾರರು ಪಾಲ್ಗೊಂಡು ಸುವರ್ಣ ಕರ್ನಾಟಕದ ಸಂಭ್ರಮಕ್ಕೆ ಮೆರಗು ನೀಡುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬನ್ನೂರು ವೈ.ಎಸ್. ರಾಮಸ್ವಾಮಿ ತಿಳಿಸಿದರು.

ತಿ.ನರಸೀಪುರದಲ್ಲಿ ಪುರಸಭೆ, ಪೊಲೀಸರಿಂದ ಭರ್ಜರಿ ಕಾರ್ಯಾಚರಣೆ

ಬಸ್ ನಿಲ್ದಾಣ, ಮಾರುಕಟ್ಟೆ ರಸ್ತೆಯಲ್ಲಿ ಫುಟ್‌ಪಾತ್ ಅತಿಕ್ರಮಣ ತೆರವು



ತಿ.ನರಸೀಪುರ ಪಟ್ಟಣದ ಮಾರುಕಟ್ಟೆ ರಸ್ತೆಯಲ್ಲಿ ಭಾನುವಾರ ಅಕ್ರಮ ಫುಟ್ ಪಾತ್ ವ್ಯಾಪಾರದ ಒತ್ತುವರಿಯನ್ನ ತೆರವುಗೊಳಿಸಿ, ವ್ಯಾಪಾರದ ವಸ್ತುಗಳನ್ನು ಜಪ್ತಿ ಮಾಡಿ ಹಿಟಾಚಿ ಮೂಲಕ ಟ್ರ್ಯಾಕ್ಟರ್‌ಗಳಿಗೆ ತುಂಬುತ್ತಿರುವುದು.

ತಿ.ನರಸೀಪುರ, ಸೆ.1– ಪಟ್ಟಣದಲ್ಲಿ ಭಾನುವಾರ ಪೊಲೀಸರು ಹಾಗೂ ಪುರಸಭೆ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಹಾಗೂ ಮಾರುಕಟ್ಟೆ ರಸ್ತೆಯಲ್ಲಿ ಪಾದಚಾರಿ ರಸ್ತೆಯನ್ನು ಅತಿಕ್ರಮಿಸಿಕೊಂಡು ಅಕ್ರಮವಾಗಿ ತಲೆಯೆತ್ತಿದ್ದ ಫುಟ್‌ಪಾತ್ ವ್ಯಾಪಾರವನ್ನು ತೆರವುಗೊಳಿಸಿದ್ದಾರೆ.

ಸರ್ಕಾರಿ ಸಾರಿಗೆ ಬಸ್ ನಿಲ್ದಾಣದ ಮುಂಭಾಗ ತಳ್ಳುಗಾಡಿಯ ಹಲವು ಹೋಟೆಲ್‌ಗಳು ತಲೆಯೆತ್ತಿದ್ದವು. ಮಾರುಕಟ್ಟೆ ರಸ್ತೆಯನ್ನು ಆಕ್ರಮಿಸಿಕೊಂಡು ಫುಟ್‌ಪಾತ್ ವ್ಯಾಪಾರ ಮಾಡುತ್ತಿದ್ದ ಬಗ್ಗೆ ವ್ಯಾಪಕ ದೂರುಗಳು ಬಂದ ಹಿನ್ನೆಲೆಯಲ್ಲಿ ಪೊಲೀಸ್ ಹಾಗೂ ಪುರಸಭೆ ಅಧಿಕಾರಿಗಳು ಇಂದು ಬೆಳಗ್ಗೆಯಿಂದ ಸಂಜೆವರೆಗೂ ಜಂಟಿ ಕಾರ್ಯಚರಣೆ ನಡೆಸಿ, ಎಲ್ಲಾ ವಿಧದ ವ್ಯಾಪಾರವನ್ನು ತೆರವುಗೊಳಿಸಿದರು.

ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದಿಂದ ಒತ್ತುವರಿ ತೆರವು ಕಾರ್ಯಾಚರಣೆ ವಿಧ್ಯುಕ್ತವಾಗಿ ಆರಂಭವಾಯಿತು. ಇಟಾಚಿ ಮೂಲಕ ತಳ್ಳುಗಾಡಿ ಹೋಟೆಲ್ ಸೇರಿದಂತೆ ಹಣ್ಣು, ತರಕಾರಿ, ಬಟ್ಟೆ ಹಾಗೂ ಇನ್ನಿತರೆ ವಸ್ತುಗಳ ಮಾರಾಟದ ವ್ಯಾಪಾರವನ್ನು ತೆರವುಗೊಳಿಸಿ, ಕೈ ಗಾಡಿಗಳನ್ನು ಜಪ್ತಿ ಮಾಡಿ ಪುರಸಭೆ ಟ್ರ್ಯಾಕ್ಟರ್‌ಗಳಿಗೆ ತುಂಬಲಾಯಿತು. ಅಲ್ಲದೆ ರಸ್ತೆ ಬದಿಯಲ್ಲಿ ಹಾಕಲಾಗಿದ್ದ ಅನಧಿಕೃತ ನಾಮ ಫಲಕವನ್ನೂ ತೆರವುಗೊಳಿಸಲಾಯಿತು.

ಖಾಲಿ ನಿವೇಶನ ಹಾಗೂ ರಸ್ತೆ ಬದಿಯನ್ನು ಆಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದ ಪರಿಣಾಮ ಸಂಚಾರದ ಸಮಸ್ಯೆಯಾಗುತ್ತಿತ್ತು. ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಹೋಗಿತ್ತು. ಒತ್ತುವರಿ ತೆರವು ಮಾಡಿಕೊಡುವಂತೆ ಕಳೆದ 15 ದಿನಗಳ ಹಿಂದೆಯೇ ಸೂಚನೆ ನೀಡಿದ್ದರೂ ರಸ್ತೆ ಬದಿ ವ್ಯಾಪಾರಿಗಳು ನಿರ್ಲಕ್ಷ್ಯ ವಹಿಸಿದ್ದರಿಂದ ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಅವರೇ ಖುದ್ದಾಗಿ ನಿಂತು ರಸ್ತೆ ಬದಿ ವ್ಯಾಪಾರದ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದರು. ಬೆಳಗ್ಗೆ 10 ರಿಂದ ಸಂಜೆ 6 ರವರೆಗೂ ಭಗವಾನ್ ಚಿತ್ರ ಮಂದಿರದವರೆಗಿನ ಫುಟ್ಪಾತ್ ವ್ಯಾಪಾರವನ್ನು ತೆರವುಗೊಳಿಸಲಾಯಿತು.

ಕಾನೂನು ಸುವ್ಯವಸ್ಥೆ ವಿಭಾಗದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಧೂಳಶೆಟ್ಟಿ ಮಾತನಾಡಿ, ಎಲ್ಲಾ ವಿಧದ ರಸ್ತೆ ಬದಿಯ ವ್ಯಾಪಾರವನ್ನು ತೆಗೆಯಿರಿ ಎಂದು ಹಲವಾರು ಬಾರಿ ತಿಳಿಸಲಾಗಿತ್ತಾದರೂ ಪ್ರಯೋಜನವಾಗದ ಕಾರಣ ಕಾರ್ಯಾಚರಣೆಯನ್ನು ನಡೆಸಿದ್ದೇವೆ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಹಾಗೂ ಮಾರುಕಟ್ಟೆ ರಸ್ತೆ ಈಗಷ್ಟೇ ತೆರವುಗೊಂಡಿವೆ. ಮುಂದಿನ ದಿನಗಳಲ್ಲಿ ಲಿಂಕ್ ರಸ್ತೆ ಹಾಗೂ ಕಾಲೇಜು ರಸ್ತೆಯಲ್ಲಿನ ತೆರವುಗೊಳಿಸಲಾಗುವುದು ಎಂದು ತಿಳಿಸಿದರು. ಕಾರ್ಯಾಚರಣೆಯಲ್ಲಿ ಪುರಸಭೆಯ ಮುಖ್ಯ ಅಧಿಕಾರಿ ಬಿ.ಕೆ.ವಸಂತಕುಮಾರಿ, ಆರೋಗ್ಯ ಅಧಿಕಾರಿ ಎಂ.ಮಧು ಸೇರಿದಂತೆ ಪೊಲೀಸ್ ಸಿಬ್ಬಂದಿ, ಪುರಸಭೆ ಪೌರ ಕಾರ್ಮಿಕರು ಹಾಗೂ ಚಾಲಕರು ಭಾಗವಹಿಸಿದ್ದರು.

ನಾಳೆ ನಂ.ಗೂಡು ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ನಂಜನಗೂಡು ನಗರಸಭೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ?

ನಂಜನಗೂಡು, ಸೆ.1– ನಂಜನಗೂಡು ನಗರಸಭೆಯಲ್ಲಿ ಬಿಜೆಪಿ ಪಕ್ಷದಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಆಯ್ಕೆ ಸಂಬಂಧ ಭಿನ್ನಮತ ಭುಗಿಲೆದ್ದಿದ್ದು, ನಾಲ್ವರು ಬಿಜೆಪಿ ಸದಸ್ಯರು ಬಿಜೆಪಿ ಸಂಪರ್ಕಕ್ಕೆ ಸಿಗದೆ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಪ್ರವಾಸ ಕೈಗೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಸೆ.3 ರಂದು ನಂಜನಗೂಡು ನಗರಸಭೆಗೆ 2ನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗಾಗಿ ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಶ್ರೀಕಂಠಸ್ವಾಮಿ ಆಯ್ಕೆಗೊಂಡಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಇನ್ನೂ ಅಭ್ಯರ್ಥಿ ಆಯ್ಕೆಗೊಂಡಿಲ್ಲ. ಬಿಜೆಪಿ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಪಿ.ದೇವು, ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಚಿಹ್ನೆಯಿಂದ ಆಯ್ಕೆಗೊಂಡಿರುವ ರಿಯಾನ ಭಾನು ಅವರನ್ನು ಆಯ್ಕೆಗೊಳಿಸಲಾಗಿದೆ.

31 ಸ್ಥಾನ ಬಲದ ನಂಜನಗೂಡು ನಗರಸಭೆಯಲ್ಲಿ ಪ್ರಸ್ತುತ ಬಿಜೆಪಿ 15, ಕಾಂಗ್ರೆಸ್ 10, ಜೆಡಿಎಸ್ 3, ಹಾಗೂ 3 ಸ್ಥಾನಗಳಲ್ಲಿ ಪಕ್ಷೇತರರು ಆಯ್ಕೆಯಾಗಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಹಿನ್ನೆಲೆಯಲ್ಲಿ 18 ಸ್ಥಾನಗಳಿಂದ ಎನ್‌ಡಿಎ ಮೈತ್ರಿಕೂಟ ನಗರಸಭೆಯ ಅಧಿಕಾರ ಹಿಡಿಯಲಿದೆ ಎಂದು ಬಿಜೆಪಿ ಆತ್ಮ ವಿಶ್ವಾಸದಲ್ಲಿತ್ತು. ಆದರೆ ಈಗಾಗಲೇ ನಾಲ್ವರು ಬಿಜೆಪಿ ಸದಸ್ಯರು ಮತ್ತು ಮೂವರು ಪಕ್ಷೇತರರು ಕಾಂಗ್ರೆಸ್ ಪಕ್ಷದ ಪರವಾಗಿ ಗುರ್ತಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ 10 ಸದಸ್ಯರು ಮತ್ತು ಬಿಜೆಪಿಯ ನಾಲ್ವರು ಸದಸ್ಯ, ಪಕ್ಷೇತರ 3 ಸದಸ್ಯರು, ಶಾಸಕ, ಸಂಸದರ ಮತಗಳಿಂದ ಅಧಿಕಾರ ಹಿಡಿಯುವ ಸಂಭವವಿದೆ. ಒಂದು ವೇಳೆ ಬಿಜೆಪಿಯ ನಾಲ್ವರು ಸದಸ್ಯರು ಚುನಾವಣೆಗೆ ಗೈರು ಹಾಜರಾದಲ್ಲಿ ಕಾಂಗ್ರೆಸ್ ಪಕ್ಷಕ್ಕೇ ವರದಾನವಾಗಲಿದ್ದು ಮೂವರು ಪಕ್ಷೇತರ ಸದಸ್ಯರು ಶಾಸಕ, ಸಂಸದರ ಮತಗಳಿಂದ ಅಧಿಕಾರ ಹಿಡಿಯುವ ಸಂಭವವೇ ಹೆಚ್ಚಿದೆ.

ಈಗಾಗಲೇ ಬಿಜೆಪಿ ಪಕ್ಷ ಎಲ್ಲಾ ಸದಸ್ಯರಿಗೂ ವ್ಹಿಪ್ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಒಂದು ವೇಳೆ ಗೈರಾಗಿರುವ ಸದಸ್ಯರು ಸಂಪರ್ಕಕ್ಕೆ ಸಿಗದ ಎಲ್ಲಾ ಸದಸ್ಯರು ಚುನಾವಣೆಗೆ ಹಾಜರಾಗಿ ಜೆಡಿಎಸ್ ಸದಸ್ಯರ ಜೊತೆಗೂಡಿ ಬಿಜೆಪಿ ಅಧಿಕಾರದ ಗದ್ದುಗೆ ಏರುವುದು ಖಚಿತವಾಗಿದೆ. ಆದರೆ ಆ ಸಾಧ್ಯತೆಗಳು ದೂರ ಉಳಿದಿದೆ.

ಕ್ಷೇತ್ರದಲ್ಲಿ ಶಾಸಕರು ಮತ್ತು ಸಂಸದರು ಕಾಂಗ್ರೇಸ್ ಪಕ್ಷದವರೇ ಆಗಿರುವುದರಿಂದ ಮತ್ತು ಉಸ್ತುವಾರಿ ಸಚಿವರೂ ಕೂಡ ನಂಜನಗೂಡು ತಾಲೂಕಿನವರೇ ಆಗಿರುವ ಕಾರಣ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಹಿಡಿಯುವುದು ಪ್ರತಿಷ್ಠೆಯಾಗಿದೆ. ಬಿಜೆಪಿ ಪಕ್ಷದ ಬಿ.ಹರ್ಷವರ್ಧನ್ ಕೂಡ ನೇರವಾಗಿ ಚುನಾವಣೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಎರಡೂ ಪಕ್ಷದವರಿಗೂ ಪ್ರತಿಷ್ಠೆಯಾಗಿದ್ದು ನಗರಸಭೆಯ ಅಧಿಕಾರದ ಗದ್ದುಗೆ ಯಾವ ಪಕ್ಷದ ಪಾಲಾಗಲಿದೆ. ಯಾರಿಗೆ ವಿಜಯಲಕ್ಷ್ಮಿ ಒಲಿಯಲಿದ್ದಾಳೆ ಎಂಬುದನ್ನು ಕಾದು ನೋಡಬೇಕಿದೆ.

ಹೆಚ್.ಡಿ.ಕೋಟೆಯಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಹೆಚ್.ಡಿ.ಕೋಟೆ ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಪಕ್ಷದ ಸದಸ್ಯತ್ವ ಅಭಿಯಾನದ ಕಾರ್ಯಾಗಾರಕ್ಕೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಸಿ. ಚಿಕ್ಕರಂಗನಾಯಕ ಚಾಲನೆ ನೀಡಿದರು.

ಹೆಚ್.ಡಿ.ಕೋಟೆ, ಸೆ.1– ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಾಗೂ ಜಿಪಂ ಸದಸ್ಯ ಸಿ.ಚಿಕ್ಕರಂಗನಾಯಕ ಚಾಲನೆ ನೀಡಿದರು.

ಮಿಸ್‌ಕಾಲ್ ಕೊಡುವ ಮೂಲಕ ಸದಸ್ಯತ್ವ ಅಭಿಯಾನ ಉದ್ಘಾಟಿಸಿ ಮಾತನಾಡಿದ ಅವರು, ಬಡವರ ಪರವಾಗಿ ಕೆಲಸ ಮಾಡಿಕೊಂಡು ಬಂದ ಬಿಜೆಪಿ ಪಕ್ಷ ದೇಶದಲ್ಲಿ ದೊಡ್ಡ ರಾಜಕೀಯ ಪಕ್ಷವಾಗಿ ಬೆಳೆದು ನಿಂತಿದೆ. ಪ್ರತಿ ಆರು ವರ್ಷಗಳಿಗೊಮ್ಮೆ ಪಕ್ಷದಲ್ಲಿ ಸದಸ್ಯತ್ವ ಅಭಿಯಾನವನ್ನು ನಡೆಸಿಕೊಂಡು ಬರಲಾಗುತ್ತಿದೆ. ದೇಶ ಮತ್ತು ರಾಜ್ಯದಲ್ಲಿ ಅಭಿಯಾನ ನಡೆಸಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿಯವರು ಕಾರ್ಯಾಗಾರಕ್ಕೆ ಚಾಲನೆ ನೀಡಿದ್ದಾರೆ ಎಂದರು.

ಜಗತ್ತಿನಲ್ಲಿ ಭಾರತ ದೇಶ ಗುರುತಿಸಿಕೊಳ್ಳುತ್ತಿದೆ ಎಂದರೆ ಅದಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಕಾರಣ. ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಳ್ಳಲು ಸಾಕಷ್ಟು ಕಾರ್ಯಕರ್ತರು ಮತ್ತು ಮುಖಂಡರು ಮುಗಿಬೀಳುತ್ತಿದ್ದಾರೆ. ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿಯನ್ನು ರದ್ದು ಮಾಡುವ ಮೂಲಕ ಬಿಜೆಪಿ ಸರ್ಕಾರ ದಿಟ್ಟ ಹೆಜ್ಜೆಯನ್ನು ಇಟ್ಟು ನಾವು ಭಾರತೀಯರು ಎಂಬ ಸಂದೇಶವನ್ನು ಸಾರಿದ್ದಾರೆ. 500 ವರ್ಷಗಳಿಂದ ರಾಮಮಂದಿರಕ್ಕಾಗಿ ಹೋರಾಟ ನಡೆಸಿಕೊಂಡು ಬರಲಾಗುತ್ತಿತ್ತು. ಆ ಹೋರಾಟವನ್ನು ಮನಗಂಡು ಪ್ರಧಾನಿ ನರೇಂದ್ರ ಮೋದಿಯವರು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮಾಡುವುದರ ಮೂಲಕ ನಾಂದಿಹಾಡಿದ್ದಾರೆ ಎಂದರು.

ಜನರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಅನುದಾನವನ್ನು ಕಾಂಗ್ರೆಸ್ ಪಕ್ಷದ ಉಚಿತ ಯೋಜನೆಗಳಿಗೆ ಬಳಸಿಕೊಂಡು ಕತ್ತರಿ ಹಾಕಲಾಗಿದೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ಪರಿಣಾಮ ಜನರಿಗೆ ತೊಂದರೆಯಾಗಿದೆ. ವಾಲ್ಮೀಕಿ ನಿಗಮದಲ್ಲಿ 187 ಕೋಟಿ ಹಣವನ್ನು ಬಳಸಿಕೊಂಡಿದ್ದಾರೆ. 100% ಪರ್ಸೆಂಟ್ ರಾಜ್ಯ ಸರ್ಕಾರವಾಗಿದೆ. ಮೂಡ ಹಗರಣದಲ್ಲೂ ಸಿಲುಕಿಕೊಂಡಿದೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಗುಡುಗಿದರು.

ಮುಂಬರುವ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗೆ ಕಾರ್ಯಕರ್ತರು ಸಜ್ಜಾಗಬೇಕು. 10 ಕೋಟಿಗೂ ಹೆಚ್ಚು ಸದಸ್ಯತ್ವವನ್ನು ಮಾಡಬೇಕು ಎಂಬ ಗುರಿಯಿದೆ. ಮಹಿಳೆಯರು ಮತ್ತು ಯುವಕರನ್ನು ಸೆಳೆದು ಸದಸ್ಯತ್ವವನ್ನು ಮಾಡಿಸಬೇಕು. ಮೊಬೈಲ್ ಫೋನ್‌ನಿಂದ ಮಿಸ್ ಕಾಲ್ ಕೊಡುವ ಮೂಲಕ ಸದಸ್ಯತ್ವ ನೋಂದಣಿ ಮಾಡಿಕೊಳ್ಳಬಹುದು ಎಂದು ಹೇಳಿದರು.

ಬಿಜೆಪಿ ಮಂಡಲ ಅಧ್ಯಕ್ಷ ಶಂಭುಗೌಡ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ವೆಂಕಟೇಶ್, ರುದ್ರ, ಅಕ್ರಂಪಾಷ, ಸತೀಶ್, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗುರುಸ್ವಾಮಿ, ಡಿ.ಆರ್.ನಾಗರಾಜು, ಚಿನ್ನಪ್ಪ, ನಂದೀಶ್, ಶಿವರಾಜ್, ಹನುಮಂತ ನಾಯಕ, ಚಂದ್ರಶೇಖರ್, ನಟರಾಜು, ಚಂದ್ರ ಮೌಳಿ, ಬಡಗಲ ರಾಜು, ರಾಜೇಂದ್ರ, ಮಲ್ಲಿಕಾರ್ಜುನ್, ಕಾಶಿಪತಿ, ಮಹಾದೇವಪ್ಪ, ಜವರಯ್ಯ, ಚೆಲುವಯ್ಯ, ರವೀಂದ್ರ, ಗಿರಿಜಾ, ದೊರೆಸ್ವಾಮಿ, ಮಂಜುಳಾ, ಪೃಥ್ವಿ, ಕುಮಾರ್, ಬಸವರಾಜು, ಶಿವರಾಜು, ಮಹೇಶ್, ರೂಪೇಶ್, ಸುರೇಶ್, ಮಂಜುನಾಥ್, ಮಾದೇಶ್, ಲೋಕೇಶ್, ಪರಮೇಶ್, ನಾಗನಾಯಕ, ಕುಮಾರ್ ಇನ್ನು ಮುಂತಾದವರು ಹಾಜರಿದ್ದರು.

ನಾಲ್ವರು ಬಿಜೆಪಿ ಸದಸ್ಯರು ನಾಪತ್ತೆ; ಮನೆ ಬಾಗಿಲಿಗೆ ವ್ಹಿಪ್ ಪತ್ರ

ನಂಜನಗೂಡು, ಸೆ.1– ಮಂಗಳವಾರ (ಸೆ.3) ನಂಜನಗೂಡು ನಗರಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಆದೇಶದ ಮೇರೆಗೆ ಬಿಜೆಪಿ ನಗರ ಸಮಿತಿ ಸದಸ್ಯರು ಸಂಪರ್ಕಕ್ಕೆ ಸಿಗದೆ ನಾಪತ್ತೆಯಾಗಿರುವ ನಾಲ್ವರು ಬಿಜೆಪಿ ನಗರಸಭಾ ಸದಸ್ಯರ ಮನೆ ಬಾಗಿಲಿಗೆ ವ್ಹಿಪ್ ಪತ್ರವನ್ನು ಅಂಟಿಸಲಾಗಿದೆ.



ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು ಮಾತನಾಡಿ, ಸೆ.3 ರಂದು ನಗರಸಭಾ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ನಡೆಯಲಿದ್ದು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮೈತ್ರಿಯೊಂದಿಗೆ ಪಕ್ಷದ ಆದೇಶದ ಮೇರೆಗೆ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಪಕ್ಷದ ಪಿ.ದೇವು, ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಪಕ್ಷದ ರಿಯಾನಾ ಭಾನು ಅವರನ್ನು ಆಯ್ಕೆ ಮಾಡಲಾಗಿದೆ. ಆದರೆ 1ನೇ ವಾರ್ಡ್‌ನ ಸದಸ್ಯರಾದ ಗಿರೀಶ್, 12ನೇ ವಾರ್ಡ್‌ನ ಸದಸ್ಯರಾದ ಗಾಯತ್ರಿ ಮುರುಗೇಶ್, 22ನೇ ವಾರ್ಡ್‌ನ ಸದಸ್ಯರಾದ ಮೀನಾಕ್ಷಿ ನಾಗರಾಜ್, 27ನೇ ವಾರ್ಡ್‌ನ ಸದಸ್ಯರಾದ ವಿಜಯಲಕ್ಷ್ಮಿ ಎಸ್.ಕುಮಾರ್ ಅವರು ಬಿಜೆಪಿ ಪಕ್ಷದ ಯಾವುದೇ ಸಭೆಗಾಗಲೀ, ದೂರವಾಣಿ ಸಂಪರ್ಕಕ್ಕಾಗಲಿ ಸಿಗದೆ ಕಾಂಗ್ರೆಸ್ ಪಕ್ಷದವರೊಂದಿಗೆ ಸೇರಿ ಪ್ರವಾಸ ಕೈಗೊಂಡಿರುವುದು ಕಂಡುಬಂದಿದೆ.

ಈ ಹಿನ್ನೆಲೆಯಲ್ಲಿ ಈ ನಾಲ್ವರು ಸದಸ್ಯರಿಗೆ ಪಕ್ಷದ ಸೂಚನೆ ಹಾಗೂ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿಯವರ ಆದೇಶದ ಮೇರೆಗೆ ಈ ನಾಲ್ವರು ಸದಸ್ಯರಿಗೆ ವ್ಹಿಪ್ ಜಾರಿಗೊಳಿಸಲಾಗಿದೆ. ಅವರು ಮನೆಯಲ್ಲೂ ಲಭ್ಯವಾಗದ ಹಿನ್ನೆಲೆಯಲ್ಲಿ ಅವರ ಮನೆ ಬಾಗಿಲಿಗೆ ವ್ಹಿಪ್ ಜಾರಿ ಆದೇಶದ ಪ್ರತಿಯನ್ನು ಅಂಟಿಸ ಲಾಗಿದೆ, ಈ ನಾಲ್ವರು ಸದಸ್ಯರೂ ಕೂಡ ಸೆ.3 ರಂದು ನಗರಸಭೆಯಲ್ಲಿ ನಡೆಯುವ ಚುನಾವಣೆಯಲ್ಲಿ ಭಾಗವಹಿಸಿ ಪಕ್ಷ ಸೂಚಿಸಿದ ಅಭ್ಯರ್ಥಿ ಪರವಾಗಿ ಮತ ಚಲಾವಣೆ ಮಾಡಬೇಕು. ಇಲ್ಲವಾದಲ್ಲಿ ಪಕ್ಷ ಅವರ ಮೇಲೆ ಶಿಸ್ತು ಕ್ರಮ ಕೈಗೊಂಡು ಕಾನೂನು ಕ್ರಮ ಜರುಗಿಸಲು ಮುಂದಾಗಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಹುಟ್ಟುಹಬ್ಬಕ್ಕೆ ಅಭಿನಂದನೆ...



ತಿ.ನರಸೀಪುರ ಸಂಸದ ಸುನೀಲ್ ಬೋಸ್ ಅವರ ಹುಟ್ಟುಹಬ್ಬಕ್ಕೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ ಶುಭಾಶಯ ಕೋರಿದರು. ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ ಇದ್ದಾರೆ

ತ್ರಿಪುರ ಸುಂದರಿ ಅಮ್ಮನವರ ದರ್ಶನ ಪಡೆದ ಶಂಕರ್ ಬಿದರಿ



ಶಂಕರ್ ಬಿದರಿಯವರು ತ್ರಿಪುರ ಸುಂದರಿ ಅಮ್ಮನವರ ದರ್ಶನ ಪಡೆದರು

ಮೂಗೂರು, ಸೆ.1– ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷರಾದ ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಶಂಕರ್ ಬಿದರಿ ಅವರು ಭಾನುವಾರ ಮೂಗೂರು ಗ್ರಾಮಕ್ಕೆ ಭೇಟಿ ನೀಡಿದ್ದರು.

ಈ ವೇಳೆ ವೀರಶೈವ ಸಮುದಾಯದ ಮುಖಂಡರು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಂಡರು. ನಂತರ ಅವರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಭೇಟಿ ನೀಡಿ ಅಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದರು. ಇದೇ ವೇಳೆ ಗ್ರಾಮದ ಮುಖಂಡರಾದ ಉದ್ಯಮಿ ಗೌಡರ ಎಂ ಪಿ ಛಾಯಾಕುಮಾರ್ ಅವರ ನಿವಾಸಕ್ಕೆ ಆಗಮಿಸಿದರು ಬಳಿಕ ಗೌಡರ ಕುಟುಂಬ ವರ್ಗ ಶಂಕರ್ ಬಿದರಿ ಅವರನ್ನು ಅಭಿನಂದಿಸಿ ಗೌರವಿಸಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಡಿ.ಲೋಕೇಶ್ ಗೌಡ, ಎಂ.ಪಿ.ನಾಗರಾಜು, ಉದ್ಯಮಿ ಎಂ.ಪಿ. ಛಾಯಾ ಕುಮಾರ್, ತಾಪಂ ಮಾಜಿ ಸದಸ್ಯ ಎಂ.ಪಿ.ಚಂದ್ರಶೇಖರ್, ಕುಮಾರಸ್ವಾಮಿ, ಹೋಟೆಲ್ ಪುಟ್ಟಸ್ವಾಮಿ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಬಿ.ಮಹೇಂದ್ರ, ಕುಮಾರ್ ಸ್ವಾಮಿ, ರಾಜೇಶ್, ಅರವಿಂದ್ ಇದ್ದರು.

ಕಾಂಕ್ರೀಟ್ ರಸ್ತೆ ಕಾಮಗಾರಿ ವೀಕ್ಷಣೆ...



ಪಿರಿಯಾಪಟ್ಟಣ ತಾಲೂಕಿನ ಚಪ್ಪರದಹಳ್ಳಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಸುಮಾರು 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಕಾಂಕ್ರೀಟ್ ರಸ್ತೆಯ ಕಾಮಗಾರಿ ಗುಣಮಟ್ಟವನ್ನು ಸಹಾಯಕ ಅಭಿಯಂತರ ಕುಮಾರ್ ವೀಕ್ಷಿಸಿದರು. ಈ ಸಮಯದಲ್ಲಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಸಿ.ಜೆ.ಪ್ರಕಾಶ್ ಹಾಗೂ ಇತರರು ಹಾಜರಿದ್ದರು.

ರಾಜಕಾರಣದಿಂದ ಸಹಕಾರ ಸಂಘದ ಅಭಿವೃದ್ಧಿ ಕುಂಠಿತ

ಹಾಲು ಉತ್ಪಾದಕರ ಸಂಘದ ನೂತನ ಕಟ್ಟಡ ಉದ್ಘಾಟಿಸಿದ ಮೈಮುಲ್ ಅಧ್ಯಕ್ಷ



ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೊಸಂಬಾಯನಹಳ್ಳಿ ಗ್ರಾಮದಲ್ಲಿ 8.5 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಲಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡವನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು.

ತಿ.ನರಸೀಪುರ, ಸೆ.1– ಸಹಕಾರ ಸಂಘದಲ್ಲಿ ಯಾವುದೇ ರಾಜಕೀಯ ಸಲ್ಲದು. ರಾಜಕಾರಣದಿಂದ ಸಂಘದ ಅಭಿವೃದ್ಧಿಗೆ ಹಿನ್ನಡೆ ಆಗುತ್ತದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಹೇಳಿದರು.

ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೊಸಂಬಾಯನಹಳ್ಳಿ ಗ್ರಾಮದಲ್ಲಿ 8.5 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಲಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಸಂಘಕ್ಕೆ ಎಂದೂ ರಾಜಕಾರಣ ಬೆರೆಸುವ ಕೆಲಸ ಮಾಡಬಾರದು. ಹಾಗೆ ಮಾಡಿದ ಸಂಘದ ಅಭಿವೃದ್ಧಿಗೆ ಹಿನ್ನಡೆ ಉಂಟಾಗಿ ಸಂಘವು ನಷ್ಟ ಅನುಭವಿಸುವ ಸಾಧ್ಯತೆ ಹೆಚ್ಚಿರುತ್ತದೆ ಹಾಗಾಗಿ ಯಾವುದೇ ಸಂದರ್ಭದಲ್ಲೂ ಸಹಕಾರ ಸಂಘಕ್ಕೆ ರಾಜಕೀಯ ತರಬೇಡಿ, ನಿಸ್ವಾರ್ಥದಿಂದ ಯಾರು ಕೆಲಸ ಮಾಡುತ್ತಾರೋ ಅವರನ್ನು ನಿರ್ದೇಶಕರಾಗಿ,ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಂಡು ಸಂಘದ ಬೆಳವಣಿಗೆಗೆ ಸಹಕಾರ ನೀಡಿ ಎಂದು ಸಲಹೆ ನೀಡಿದರು.

ಇಂದು ರೈತ ಬೆಳೆದಂತಹ ಪ್ರತಿಯೊಂದು ಬೆಳೆಗೂ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಆದರೆ ಹಾಲು ಉತ್ಪಾದಕರಿಗೆ ಯಾವುದೇ ಸಂದರ್ಭದಲ್ಲಿ ಬೆಲೆ ಸ್ಥಿರವಾಗಿರುತ್ತದೆ. ಹಾಲು ಮಾರಾಟಗಾರರು ಎಷ್ಟೇ ಹಾಲು ಉತ್ಪಾದನೆ ಮಾಡಿದರೂ ಒಕ್ಕೂಟ ಯಾವತ್ತಿಗೂ ಹಾಲು ಬೇಡವೆಂದು ತಿರಸ್ಕಾರ ಮಾಡಿಲ್ಲ. ರೈತರು ಉತ್ಪಾದನೆ ಮಾಡುವ ಹಾಲನ್ನು ಯಾವತ್ತೂ ವಾಪಸ್ ಕಳುಹಿಸಿಲ್ಲ. ಬಹು ದಿನಗಳ ಹಿಂದೆ ಒಕ್ಕೂಟದಲ್ಲಿ ಹಾಲು ಮಾರಾಟವಾಗದೇ ಶೇಖರಣೆಯಾದರೆ ರೈತರಿಂದ ಹಾಲು ತೆಗೆದುಕೊಳ್ಳದ ಪರಿಸ್ಥಿತಿ ಇತ್ತು. ಆದರೆ ಈಗ ಮುಂದುವರೆದ ತಂತ್ರಜ್ಞಾನದಿಂದ ನೀವು ಎಷ್ಟೇ ಹಾಲು ಉತ್ಪಾದನೆ ಮಾಡಿದರೂ ಹಾಲನ್ನು ಶೇಖರಣೆ ಮಾಡಿ, ಮಾರಾಟ ಮಾಡುವ ಮೂಲಕ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಹಣ ಪಾವತಿ ಮಾಡಲಾಗುತ್ತಿದೆ ಎಂದರು.

ಅನುದಾನ ನೀಡುವೆ....!: ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವು 12 ವರ್ಷಗಳ ನಂತರ ಪೂರ್ಣಗೊಂಡು ಉದ್ಘಾಟನೆಗೊಂಡಿದೆ. ಈಗ ಡೈರಿ ಅಧ್ಯಕ್ಷರು ಮೇಲೆ ಸಭಾಂಗಣ ನಿರ್ಮಿಸಲು ಅನುದಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಮಾಜಿ ಅಧ್ಯಕ್ಷರಾದ ಉಮಾಶಂಕರ್, ಲೀಲಾ ನಾಗರಾಜ್ ಹಾಗೂ ಗುರುಸ್ವಾಮಿ ಹಾಗೂ ನಿರ್ದೇಶಕರೊಂದಿಗೆ ಚರ್ಚಿಸಿ ಅನುದಾನ ನೀಡಲು ಪ್ರಾಮಾಣಿಕ ಯತ್ನ ಮಾಡುತ್ತೇನೆ. ಶಾಸಕ ಯತೀಂದ್ರ ಅವರು ಎಷ್ಟು ಅನುದಾನ ಕೊಡುತ್ತಾರೋ ಕೊಡಲಿ ಉಳಿದ ಅನುದಾನವನ್ನು ಒಕ್ಕೂಟದ ವತಿಯಿಂದ ನೀಡಿ ಸಭಾಂಗಣ ನಿರ್ಮಿಸಲು ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕ ಕೆ.ಉಮಾಶಂಕರ್ ಡೈರಿ ಶಿಲಾನ್ಯಾಸ ಅನಾವರಣ ಮಾಡಿದರು. ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಅಣ್ಣಪ್ಪ, ಮೈಮುಲ್ ನಿರ್ದೇಶಕ ಬಿ.ಗುರುಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ ಎಲ್.ಆರ್.ಕರಿಬಸವರಾಜು, ಎಂ.ಬಿ.ಹಳ್ಳಿ ಗ್ರಾಪಂ ಅಧ್ಯಕ್ಷೆ ಸಾಕಮ್ಮ ವಾಸು, ಮೈಮುಲ್ ತಾಲೂಕು ಮೇಲ್ವಿಚಾರಕ ಸಂತೋಷ್ ಕುಮಾರ್, ವಿಸ್ತರಣಾಧಿಕಾರಿ ಆರ್.ನಂದೀಶ್, ಗ್ರಾಪಂ ಸದಸ್ಯ ಪಾಲಾಕ್ಷ, ಶಿವಮ್ಮ, ನಾಗರಾಜು, ರಾಜು, ವ್ಯವಸಾಯ ಸೇವಾ ಕೃಷಿ ಪತ್ತಿನ ಸಹಕಾರ ಸಂಘದ ಸುಜೇಂದ್ರ, ವಾಣಿ ಮಾದಪ್ಪ, ನಾಗಣ್ಣ, ಸಿವಿಲ್ ಕಂಟ್ರ್ಯಾಕ್ಟರ್ ಪಟೇಲ್ ನಂದೀಶ್, ಹಾಲು ಉತ್ಪಾದಕರ ಸಹಕಾರ ಸಂಘದ ಉಪಾಧ್ಯಕ್ಷ ಜವರೇಗೌಡ, ಬಸವಣ್ಣ, ನಾಗಣ್ಣ, ಸಿದ್ದಪ್ಪ, ಸಿದ್ದಮ್ಮ, ಮಹದೇವಸ್ವಾಮಿ, ಮಹಾದೇವ, ಮಂಜು ಮತ್ತಿತರಿದ್ದರು.

ದೇವಸ್ಥಾನದಷ್ಟೇ ಸಹಕಾರ ಸಂಘ ಸಹ ಮುಖ್ಯ....!

ಊರಿಗೆ ದೇವಸ್ಥಾನಗಳು ಎಷ್ಟು ಮುಖ್ಯವೋ ಹಾಲು ಉತ್ಪಾದಕರ ಸಹಕಾರ ಸಂಘಗಳೂ ಸಹ ಅಷ್ಟೇ ಮುಖ್ಯವಾಗುತ್ತವೆ. ದೇವಸ್ಥಾನಕ್ಕೆ ವಾರಕ್ಕೊಮ್ಮೆ ಅಥವಾ ಹಬ್ಬ-ಹುಣ್ಣಿಮೆಗಳಲ್ಲಿ ಹೋದರೆ ಸಹಕಾರ ಸಂಘಗಳಿಗೆ ದಿನಕ್ಕೆರಡು ಬಾರಿ ಭೇಟಿ ನೀಡಬೇಕಾಗುತ್ತೆ. ಅದೇ ರೀತಿ ಎಂತಹ ಕಷ್ಟದ ಸಂದರ್ಭದಲ್ಲಿ ಸಂಘ ಹೈನುಗಾರರೊಂದಿಗೆ ಸದಾ ಇರುತ್ತೆ ಎಂದು ತಿಳಿಸಿದರು.

ಸುಬ್ಬನಾಯಕ ನಿಧನ

ಸಾಲಿಗ್ರಾಮ, ಸೆ.1– ತಾಲೂಕಿನ ಭೇರ್ಯ ಪಿಎಸಿಎಸ್ ನಿರ್ದೇಶಕ ಸುಬ್ಬನಾಯಕ (60) ಭಾನುವಾರ ನಿಧನರಾದರು.



ಮೃತರು ಪತ್ನಿ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಅಭಿಮನ್ಯುವಿಗೆ ಭಾರ ಹೊರುವ ತಾಲೀಮು

ಗಜಪೂಜೆ ಸಲ್ಲಿಸಿ ತಾಲೀಮಿಗೆ ಚಾಲನೆ: 600 ಕೆಜಿ ಭಾರ ಹೊತ್ತು ಸಾಗಿದ ಕ್ಯಾಪ್ಟನ್

ಮೈಸೂರು,ಸೆ.1(ಎಂಟಿವೈ)– ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ಭಾರ ಹೊರುವ ತಾಲೀಮು ಯಶಸ್ವಿಯಾಗಿ ನಡೆದಿದೆ. ಮೊದಲ ದಿನವಾದ ಭಾನುವಾರ ಮರಳು ಮೂಟೆ ಸೇರಿದಂತೆ ಸುಮಾರು 600 ಕೆಜಿ ಭಾರ ಹೊತ್ತು ಅಭಿಮನ್ಯು ಯಶಸ್ವಿಯಾಗಿ ಹೆಜ್ಜೆ ಹಾಕಿದ.

ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗಜಪಡೆಯನ್ನು ಸಜ್ಜುಗೊಳಿಸಲು ಅರಣ್ಯ ಇಲಾಖೆ ಜಂಬೂಸವಾರಿ ಮಾರ್ಗದಲ್ಲಿ ಮೊದಲ ಹಂತದಲ್ಲಿ ಯಾವುದೇ ಭಾರ ಹೊರಿಸದೆ ತಾಲೀಮು ನಡೆಸಿತ್ತು. ಇಂದಿನಿಂದ ಅಂಬಾರಿ ಆನೆ ಅಭಿಮನ್ಯು, ಪರ್ಯಾಯ ಆನೆಗಳಾದ ಧನಂಜಯ, ಗೋಪಿ ಹಾಗೂ ಮಹೇಂದ್ರ ಆನೆಗೂ ಭಾರ ಹೊರಿಸುವ ತಾಲೀಮು ನಡೆಸಲಾಯಿತು.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಭಾನುವಾರ ಬೆಳಗ್ಗೆ 7.15ಕ್ಕೆ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ಲಕ್ಷ್ಮೀ, ವರಲಕ್ಷ್ಮೀ ಆನೆಗೆ ಪಾದ ತೊಳೆದು ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ ಪೂಜೆ ಮಾಡಿದರು. ಬಳಿಕ ಗಾದಿ, ನಮ್ದಾ ಹಾಗೂ ತೊಟ್ಟಿಲಿಗೆ ಪೂಜೆ ಮಾಡಿದರು. ನಂತರ ಅಭಿಮನ್ಯುವಿನ ಮೇಲೆ ಗಾದಿ, ನಮ್ದಾ ಕಟ್ಟಿ ಅದರ ಮೇಲೆ ಕಬ್ಬಿಣದ ತೊಟ್ಟಿಲನ್ನು ಕಟ್ಟಲಾಯಿತು. ಬಳಿಕ 320 ಕೆಜಿ ತೂಕದ ಮರಳಿನ ಮೂಟೆಯನ್ನು ಇಟ್ಟು ತಾಲೀಮಿಗೆ ಕರೆದೊಯ್ಯಲಾಯಿತು.

ಜಂಬೂಸವಾರಿ ದಿನ ಆನೆಗಳು ಸಾಗುವ ಮಾರ್ಗ ಪರಿಚಯ ಮಾಡಿಕೊಡುವ ನಿಟ್ಟಿನಲ್ಲಿ ಕೋಡಿ ಸೋಮೇಶ್ವರ ದೇವಾಲಯದ ಆವರಣದಿಂದ ಹೊರಟ ಅಭಿಮನ್ಯುವನ್ನು ಅರಮನೆಯಲ್ಲಿರುವ ಪ್ರಮೋದಾದೇವಿ ಒಡೆಯರ್ ನಿವಾಸದ ಮುಂಭಾಗ ಅಂಬಾರಿ ಕಟ್ಟುವ ಕ್ರೇನ್ ಸ್ಥಳಕ್ಕೆ ಕರೆತಂದು ಬಳಿಕ, ಗಣ್ಯರು ಪುಷ್ಪಾರ್ಚನೆ ಮಾಡುವ ಸ್ಥಳದಿಂದ ತಾಲೀಮು ಆರಂಭಿಸಲಾಯಿತು.

ಮರಳು ಮೂಟೆಯೊಂದಿಗೆ ತೊಟ್ಟಿಲನ್ನು ಹೊತ್ತು ಕೋಟೆ ಆಂಜನೇಯಸ್ವಾಮಿ ದೇವಾಲಯ ಪಕ್ಕದ ದ್ವಾರದಿಂದ ಹೊರಗೆ ಬಂದ ಆನೆಗಳು ಸೊಂಡಿಲೆತ್ತಿ ಸೆಲ್ಯೂಟ್ ಹೊಡೆದು ಮುನ್ನಡೆದವು. ಕೆ.ಆರ್.ವೃತ್ತ, ಸಂಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು, ಆರ್‌ಎಂಸಿ ವೃತ್ತ, ಬಂಬೂಬಜಾರ್, ಹೈವೇ ವೃತ್ತ, ನೆಲ್ಸನ್ ಮಂಡೇಲ ರಸ್ತೆ ಮೂಲಕ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನ ತಲುಪಿತು. ಅರಮನೆಯಿಂದ ಪಂಜಿನ ಕವಾಯತ್ ಮೈದಾನದವರೆಗೆ 5 ಕಿ.ಮಿ ಅಂತರವನ್ನು 1.15 ಗಂಟೆ ಅವಧಿಯಲ್ಲಿಯೇ ತಲುಪಿದ ಅಭಿಮನ್ಯು ಗಮನ ಸೆಳೆಯಿತು.

ಬಳಿಕ ಅಭಿಮನ್ಯು ಮೈಮೇಲೆ ಇಟ್ಟಿದ್ದ ಮರಳು ಮೂಟೆ ಕೆಳಗಿಳಿಸಿ, ತೊಟ್ಟಿಲು, ಗಾದಿ, ನಮ್ದಾ ಬಿಚ್ಚಿ ಅರಣ್ಯ ಇಲಾಖೆಯ ವಾಹನದಲ್ಲಿಡಲಾಯಿತು. ಕೆಲ ಸಮಯ ವಿಶ್ರಾಂತಿ ನೀಡಿ, ಮಾವುತ, ಕಾವಾಡಿಗಳಿಗೆ ಉಪಾಹಾರ ನೀಡಲಾಯಿತು. ನಂತರ ಎಲ್ಲಾ ಆನೆಗಳಿಗೂ ನೀರು ಕುಡಿಸಿ, ಸ್ನಾನ ಮಾಡಿಸಿ, ಅರಮನೆಗೆ ವಾಪಸು ಕರೆತರಲಾಯಿತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಅರಮನೆ ಭದ್ರತಾ ವಿಭಾಗ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಂ, ಮೈಸೂರು ವಲಯದ ಅರಣ್ಯ ಇಲಾಖೆಯ ಕಚೇರಿ ಅಧೀಕ್ಷಕ ಸುದೀಪ್ ಸೇರಿದಂತೆ ಇನಿತರರು ಉಪಸ್ಥಿತರಿದ್ದರು.

ಜನರ ದಂಡು: ಭಾನುವಾರವಾದ ಹಿನ್ನೆಲೆಯಲ್ಲಿ ದಸರಾ ಗಜಪಡೆಯನ್ನು ನೋಡಲು ಅರಮನೆ ಮುಂಭಾಗ ಹಾಗೂ ಪಂಜಿನ ಕವಾಯತ್ ಮೈದಾನದಲ್ಲಿ ಜನರ ದಂಡೇ ನೆರೆದಿತ್ತು. ಶಾಲಾ–ಕಾಲೇಜುಗಳಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ಮಕ್ಕಳೊಂದಿಗೆ ಆನೆಗಳನ್ನು ನೋಡಲು ಪೋಷಕರು ಆಗಮಿಸಿದ್ದರು. ಅರಮನೆಯಿಂದ ಹೊರಗೆ ಬರುತ್ತಿದ್ದಂತೆ ಚಿಣ್ಣರು ಚೀರುತ್ತಾ ಗಜಪಡೆಯನ್ನು ಸ್ವಾಗತಿಸಿದರು. ಪಂಜಿನ ಕವಾಯತ್ ಮೈದಾನದಲ್ಲಿ ಆನೆ ನೀರು ಕುಡಿಯಲು ನಿರ್ಮಿಸಿರುವ ತೊಟ್ಟಿ ಸುತ್ತಲೂ ನೆರದಿದ್ದ ಮಕ್ಕಳು ಆನೆ ಮೈಮೇಲೆ ಸೊಂಡಿಲಿನಿಂದ ನೀರು ಎರಚಿಕೊಳ್ಳುವುದನ್ನು ಕಂಡು ಖುಷಿಯಿಂದ ಸಂಭ್ರಮಿಸಿದರು.

ದಾರಿಯುದ್ದಕ್ಕೂ ನಮನ: ಭಾರ ಹೊತ್ತು ತಾಲೀಮಿನಲ್ಲಿ ಭಾಗಿಯಾಗಿದ್ದ ಅಭಿಮನ್ಯು ಪಡೆಗೆ ಸಯ್ಯಾಜಿರಾವ್ ರಸ್ತೆಯುದ್ದಕ್ಕೂ ವ್ಯಾಪಾರಿಗಳು ಸೇರಿದಂತೆ ಸಾರ್ವಜನಿಕರು ಹೂವು, ಹಣ್ಣು ನೀಡಿ ಗೌರವ ಸಮರ್ಪಿಸಿದರು. ಅಲ್ಲದೆ, ಆನೆಗಳಿಗೆ ಕೈ ಮುಗಿದು ನಮಿಸುವ ಮೂಲಕ ಭಕ್ತಿ ಪ್ರದರ್ಶಿಸಿದರು.


ಭಾರ ಹೊರುವ ತಾಲೀಮಿನಲ್ಲಿ ಸಾಗುತ್ತಿರುವ ಕ್ಯಾಪ್ಟನ್ ಅಭಿಮನ್ಯು

ಅತ್ಯುತ್ತಮ ಪ್ರದರ್ಶನ ನೀಡಿದೆ

ಮೊದಲ ಬಾರಿಗೆ ಅಭಿಮನ್ಯು ಮೇಲೆ ಸುಮಾರು 320 ಕೆಜಿ ಮರಳಿನ ಮೂಟೆ ಸೇರಿದಂತೆ 575ರಿಂದ 600 ಕೆಜಿ ತೂಕ ಹೊರಿಸಿ ತಾಲೀಮು ನಡೆಸಲಾಗಿದೆ. ಮೊದಲ ದಿನದ ತಾಲೀಮು ಯಶಸ್ವಿಯಾಗಿದೆ. ಅಭಿಮನ್ಯು ಪಡೆ ಅತ್ಯುತ್ತಮ ಪ್ರದರ್ಶನ ನೀಡಿದೆ.

– ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಅಪರಿಚಿತ ವ್ಯಕ್ತಿಗಳ ಶವ ಪತ್ತೆ

ಮೈಸೂರು, ಸೆ.1–ನಂಜನಗೂಡಿನ ಕಪಿಲಾ ನದಿಯ ಪಕ್ಕದಲ್ಲಿ ಸುಮಾರು 60–65 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿ 5.5 ಅಡಿ ಎತ್ತರ, ದುಂಡು ಮುಖ, ಸಾಧಾರಣ ಶರೀರ, ಎಣ್ಣೆಗೆಂಪು ಕಪ್ಪು ಮೈಬಣ್ಣ, ಕಪ್ಪು ಮತ್ತು ಬಿಳಿ ತಲೆ ಕೂದಲು, ಬಿಳಿ ಗಡ್ಡ ಮೀಸೆ ಬಿಟ್ಟಿರುತ್ತಾರೆ. ತಲೆ ಕೂದಲು ಉದುರಿದ್ದು ಅರ್ಧ ಬೋಳು ತಲೆಯಾಗಿರುತ್ತದೆ.

ಮತ್ತೊಂದು ಶವ: ನಂಜನಗೂಡಿನ ಪರಶುರಾಮ ದೇವಸ್ಥಾನದಲ್ಲಿ ಸುಮಾರು 60–65 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ಈ ಸಂಬಂಧವೂ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಹರೆ: ಮೃತ ವ್ಯಕ್ತಿ 5.2 ಅಡಿ ಎತ್ತರ, ದುಂಡು ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ, ಎರಡು ಕೈಗಳಲ್ಲಿ ಅಂಗೈ ಇರುವುದಿಲ್ಲ. ಮೃತನ ಮೈ ಮೇಲೆ ಬೂದು ಕೆಂಪು ಬಿಳಿ ಬಣ್ಣದ ಅಡ್ಡ ಗೆರೆಯಿರುವ ಟೀ ಶರ್ಟ್ ಹಾಗೂ ನೀಲಿ ಬಣ್ಣದ ಶಾರ್ಟ್ ನಿಕ್ಕರ್ ಧರಿಸಿರುತ್ತಾರೆ.

ಈ ಇಬ್ಬರ ಮಾಹಿತಿ ದೊರೆತಲ್ಲಿ ಮೈಸೂರು ಜಿಲ್ಲೆ ಎಸ್‌ಪಿ ಅವರ ದೂ.ಸಂ: 0821–2520040, ಜಿಲ್ಲಾ ನಿಸ್ತಂತು ಕೊಠಡಿ ಸಂ: 0821–2444800 ಸಂಪರ್ಕಿಸಬಹುದು.

ಸಂಗೊಳ್ಳಿ ರಾಯಣ್ಣನ ಬಗ್ಗೆ ಬ್ರಿಟಿಷರಿಗೂ ಗೌರವವಿತ್ತು!

● ಪ್ರಾಧ್ಯಾಪಕ ಹರದನಹಳ್ಳಿ ನಂಜುಂಡಸ್ವಾಮಿ ಅಭಿಮತ ● ಸಂಗೊಳ್ಳಿ ರಾಯಣ್ಣ ಜಯಂತ್ಯುತ್ಸವ; ಸಾಧಕರಿಗೆ ಸನ್ಮಾನ

ಮೈಸೂರು, ಸೆ.1– ಸ್ವಾತಂತ್ರ್ಯ ಹೋರಾಟಗಾರ, ವೀರ ದೇಶಭಕ್ತ, ಕನ್ನಡ ನಾಡಿನ ಕುಲಪುತ್ರ ಸಂಗೊಳ್ಳಿ ರಾಯಣ್ಣ ಎಂದು ಪ್ರಾಧ್ಯಾಪಕ ಹರದನಹಳ್ಳಿ ನಂಜುಂಡಸ್ವಾಮಿ ಅಭಿಪ್ರಾಯಪಟ್ಟರು

ಇಲ್ಲಿನ ಮೈಸೂರು ಕನ್ನಡ ವೇದಿಕೆ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಜಯಂತ್ಯುತ್ಸವ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಪ್ರಧಾನ ಭಾಷಣಕಾರರಾಗಿ ಅವರು ಮಾತನಾಡಿದರು.

ಕಿತ್ತೂರು ಸಂಸ್ಥಾನದ ವೀರ ರಾಯಣ್ಣನ ಶೌರ್ಯ ಪರಾಕ್ರಮ ಬ್ರಿಟಿಷರ ಆಡಳಿತವನ್ನು ನಿದ್ದೆಗೆಡಿಸುತ್ತಿತ್ತು. ಆತನನ್ನು ಸೆರೆಹಿಡಿಯಲು ಪ್ರಯತ್ನಿಸುತ್ತಿದ್ದರೆ, ಆತ ಸೈನ್ಯವನ್ನು ಕಟ್ಟಿ ಕ್ರಾಂತಿಕಾರಿಯಾಗಿ ಹೋರಾಡುತ್ತಾನೆ. ಕಿತ್ತೂರು ಸಂಸ್ಥಾನಕ್ಕೆ ರಕ್ಷಕನಾಗಿ, ಕನ್ನಡ ನಾಡಿನ ಕೆಚ್ಚೆದೆಯ ವೀರನಾಗಿ, 1857ಕ್ಕಿಂತ ಮೊದಲು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣ. ವಿಕ್ಟೋರಿಯ ರಾಣಿಗೆ ಸಿಂಹಸ್ವಪ್ನವಾಗಿದ್ದ ವೀರ. ಗೆರಿಲ್ಲಾ ಮಾದರಿಯ ಯುದ್ಧ ಮಾಡಿದ ಪ್ರಮುಖರಲ್ಲಿ ಶಿವಾಜಿ ಮಹಾರಾಜ್ ಮತ್ತು ಸಂಗೊಳ್ಳಿ ರಾಯಣ್ಣ ಅಪ್ರತಿಮರು. ನಾಡಿನ ಪ್ರೇಮ, ಸಮಾನತೆ, ಸ್ವಾತಂತ್ರ್ಯವನ್ನು ಯುವ ಜನಾಂಗದಲ್ಲಿ ಉಳಿಸಿ, ಬೆಳೆಸಬೇಕಾದರೆ ಸಂಗೊಳ್ಳಿ ರಾಯಣ್ಣನ ಚರಿತ್ರೆ ಸಾರಬೇಕು. ಜನವರಿ 26 –1831ರಂದು ಗಲ್ಲಿಗೇರಿಸಿದ ಹತ್ತು ನಿಮಿಷದ ನಂತರ ಮದ್ರಾಸಿನ ಈಸ್ಟ್ ಇಂಡಿಯಾ ಕಂಪನಿಯಿಂದ ಒಂದು ಪತ್ರ ಬರುತ್ತದೆ. ರಾಯಣ್ಣ ಸಿಕ್ಕರೆ ಆತನನ್ನು ಸೆರೆಹಿಡಿದು ಗೌರವಯುತವಾಗಿ ನೋಡಿಕೊಳ್ಳಬೇಕೆಂದು. ಇಂತಹ ವೀರನನ್ನು ಬ್ರಿಟಿಷರು ಕೊಂದರು ಎಂದರೆ ಈ ಭಾರತ ನಮ್ಮನ್ನು ಕ್ಷಮಿಸುವುದಿಲ್ಲ ಎಂದು ಪತ್ರದಲ್ಲಿ ಬರೆದಿರುತ್ತದೆ. ಇದು ಸಂಗೊಳ್ಳಿ ರಾಯಣ್ಣನ ಶೌರ್ಯ ಪರಾಕ್ರಮ ಎಂದು ಶ್ಲಾಘಿಸಿದರು.



ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ಯೋಧ ಬಿದ್ದಪ್ಪ ಮಾತನಾಡಿ, ಇಂಥ ಮಹಾವೀರರೇ ಚೀನಾ ಮತ್ತು ಪಾಕಿಸ್ತಾನದ ಗಡಿ ಭಾಗದಲ್ಲಿ ಹೋರಾಡಲು ಪ್ರೇರಣೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಸ್ವೀಕರಿಸುತ್ತಿರುವುದು ತುಂಬಾ ಸಂತೋಷ ತಂದಿದೆ. ರಾಯಣ್ಣ ಕೇವಲ ಕರ್ನಾಟಕಕ್ಕೆ ಮಾತ್ರ ಮೀಸಲಲ್ಲ, ಭಾರತ ದೇಶಕ್ಕೆ ಅನ್ವಯವಾಗುತ್ತಾರೆ. ಇಂತಹ ಮಾನ್ಯರನ್ನು ವರ್ಷಪೂರ್ತಿ ನೆನೆಯುವ ಕೆಲಸ ಮಾಡಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಶಸ್ತಿಯನ್ನು ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಡಾ. ಷಾಭಟ್ – ಸಮಾಜ ಸೇವೆ, ಬಿದ್ದಪ್ಪ – ನಿವೃತ್ತ ಯೋಧ, ರವಿ – ಹಾಲಿ ಯೋಧರು, ಲೋಕೇಶ್ – ಸಮಾಜ ಸೇವೆ, ಪ್ರಜ್ವಲ್ ಎನ್– ಪತ್ರಕರ್ತರು, ಪುರುಷೋತ್ತಮ್ –ಗಾಯಕರು, ಡಾ. ಸೌಮ್ಯ ಮೂರ್ತಿ – ಔಷಧ ತಜ್ಞ, ಶ್ರೀಮತಿ ರೇಖಾ ಮನಶಾಂತಿ – ಮನೋವೈದ್ಯ, ಶ್ರೀಮತಿ ವಿಜಯಶ್ರೀ – ಸಂಗೀತ, ಶ್ರೀಮತಿ ಎಚ್ ಕೆ ಕೋಮಲ– ಸೌಂದರ್ಯ ತಜ್ಞ, ಶ್ರೀಮತಿ ಭಾರತಿ ಶಿರೂರು –ಕ್ರೀಡೆ, ಶ್ರೀಮತಿ ಪ್ರಿಯಾ ಎಸ್ – ಸುಗಮ ಸಂಗೀತ ಇವರನ್ನು ಪೊಲೀಸ್ ನಿರೀಕ್ಷಕರಾದ ಎನ್.ಸಿ.ನಾಗೇಗೌಡ ಸನ್ಮಾನಿಸಿದರು. ಅಧ್ಯಕ್ಷತೆಯನ್ನು ಮೈಸೂರು ಕನ್ನಡ ವೇದಿಕೆಯ ಎಸ್.ಬಾಲಕೃಷ್ಣ ವಹಿಸಿದ್ದರು. ಪ್ರಾಸ್ತಾವಿಕ ನುಡಿ ನಾಲಾಬೀದಿ ರವಿ ನೆರವೇರಿಸಿದರು.

ನೂರಾರು ಮಂದಿಯಿಂದ 'ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್'

ಪರ್ವತಾರೋಹಿ ಡಾ. ಉಷಾ ಹೆಗ್ಡೆ ಅವರಿಂದ ಉದ್ಘಾಟನೆ


ಮೈಸೂರಲ್ಲಿ ಭಾನುವಾರ ಲೈಫ್ ಇಸ್ ಕಾಲಿಂಗ್ ಸಂಸ್ಥೆ ಆಯೋಜಿಸಿದ್ದ 'ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್'ನಲ್ಲಿ ಪಾಲ್ಗೊಂಡಿರುವ ಸ್ಪರ್ಧಿಗಳು.



ಮೈಸೂರು,ಸೆ.1(ಎಂಟಿವೈ)– ಲೈಫ್ ಇಸ್ ಕಾಲಿಂಗ್ ಸಂಸ್ಥೆಯು ಮೈಸೂರಲ್ಲಿ ಭಾನುವಾರ ಆಯೋಜಿಸಿದ್ದ 14ನೇ ಆವೃತ್ತಿಯ 'ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್'ನಲ್ಲಿ ವಿವಿಧ ವಯೋಮಾನದ ನೂರಾರು ಓಟಗಾರರು ಪಾಲ್ಗೊಂಡು ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಭಾನುವಾರ ಬೆಳಗ್ಗೆ ಆಯೋಜಿಸಿದ್ದ ಮ್ಯಾರಥಾನ್, ಹಾಫ್ ಮ್ಯಾರಥಾನ್ ಹಾಗೂ ವಿವಿಧ ವಯೋಮಾನದವರಿಗಾಗಿ 5, 10 30ಕಿ.ಮೀ ಓಟದ ಸ್ಪರ್ಧೆಯನ್ನು ಪರ್ವತಾರೋಹಿ ಡಾ.ಉಷಾ ಹೆಗ್ಡೆ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅನಿವಾರ್ಯತೆ ಇದೆ. ಮೈಸೂರಲ್ಲಿ ಮ್ಯಾರಥಾನ್, ಹಾಫ್ ಮ್ಯಾರಥಾನ್ ಹಾಗೂ ಓಟದ ಸ್ಪರ್ಧೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸಿದರೆ, ಕ್ರೀಡಾಸಕ್ತರಿಗೆ ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಬಳಿಕ ನಡೆದ ಪ್ರತ್ಯೇಕ ವಿಭಾಗದ ಓಟ, ಮ್ಯಾರಥಾನ್, ಹಾಫ್ ಮ್ಯಾರಥಾನ್‌ನಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. ಮಾರ್ಗ ಮಧ್ಯೆ ಓಟಗಾರರ ಆರೋಗ್ಯ ತಪಾಸಣೆಗಾಗಿ ಮೆಡಿಕಲ್ ತಂಡವನ್ನು ನಿಯೋಜಿಸಲಾಗಿತ್ತು. ಪ್ರತ್ಯೇಕ ವಿಭಾಗದ ಓಟಗಾರರಿಗೆ ಮಾರ್ಗಸೂಚಿ ಫಲಕ ಅಳವಡಿಸಿ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಲಾಗಿತ್ತು.

ವಿಜೇತರ ಪಟ್ಟಿ: ಪುರುಷರ ಮುಕ್ತ ವಿಭಾಗ 10 ಕಿಮೀ ಓಟ: ಎಸ್.ವೈ.ಪ್ರಜ್ವಲ್, ಎ.ಅಭಿಷೇಕ್, ಕೆ.ಕಿರಣ್ ಮೊದಲ ಮೂರು ಬಹುಮಾನ ತಮ್ಮದಾಗಿಸಿಕೊಂಡರು.

ಹಿರಿಯ ಪುರುಷರ ವಿಭಾಗ 10 ಕಿ.ಮೀ: ಚಂದ್ರಶೇಖರ್ ಸುಬ್ರಹ್ಮಣ್ಯ ಪ್ರಥಮ, ಕೆ.ಆರ್.ರಾಮಕೃಷ್ಣ ದ್ವಿತೀಯ, ಎನ್.ಟಿ.ರಂಜಿತ್ ತೃತೀಯ ಬಹುಮಾನ.

ವೆಟರನ್ ಪುರುಷ ವಿಭಾಗ 10 ಕಿ.ಮೀ: ರವೀಂದ್ರ ಗುಂಡೂರಾವ್ ಪ್ರಥಮ, ಹೊಸೂರು ಉದಯ್‌ಕುಮಾರ್ ಶೆಟ್ಟಿ ದ್ವಿತೀಯ, ಎಲ್.ಅನಂತ ತೃತೀಯ.

ಮುಕ್ತ ಮಹಿಳಾ ವಿಭಾಗ 10 ಕಿಮೀ ರನ್: ದೀಪಿಕ ಪ್ರಕಾಶ್ ಪ್ರಥಮ, ಸೀಮಾ ದಾಸಿಲಾ ದ್ವಿತೀಯ, ಸಂಧ್ಯಾ ಸತ್ಯನ್ ತೃತೀಯ.

ಹಿರಿಯ ಮಹಿಳಾ ವಿಭಾಗ 10 ಕಿಮೀ ರನ್: ಮಮತಾ ಭರಕ್ತಿಯಾ ಪ್ರಥಮ, ಶೋಭ ದ್ವಿತೀಯ, ವತ್ಸಲ ತೃತೀಯ.

ವೆಟರನ್ ಮಹಿಳಾ ವಿಭಾಗ 10 ಕಿಮೀ: ಶ್ಯಾಮಲಾ ಪದ್ಮನಾಭನ್ ಪ್ರಥಮ, ಗೀತಾ ವಿಜಯ್ ದ್ವಿತೀಯ ಬಹುಮಾನ ಪಡೆದರು.

ಮುಕ್ತ ಪುರುಷರ ವಿಭಾಗದ ಹಾಫ್ ಮ್ಯಾರಥಾನ್ 21 ಕಿಮೀ: ಮಧುಸೂದನ್ ಪ್ರಥಮ, ಸೈಯದ್ ಅತೀಫ್ ಉಮರ್ ದ್ವಿತೀಯ, ಧನಶೇಖರ್ ರಾಜೇಂದ್ರನ್ ತೃತೀಯ.

ಹಿರಿಯ ಪುರುಷರ ಹಾಫ್ ಮ್ಯಾರಥಾನ್: ಬಿ.ಕೆ.ಮಧುಕರ್ ಪ್ರಥಮ, ಭಾಗ್ಯ ಮೋಹನ್ ಕೊನ್ವಾರ್ ದ್ವಿತೀಯ, ಆರ್.ಸುಜನ್ಯ ತೃತೀಯ ಬಹುಮಾನ ಪಡೆದರು.

ವೆಟರನ್ ಪುರುಷರ ಹಾಫ್ ಮ್ಯಾರಥಾನ್: ಗಿರೀಶ್ ಗುಬ್ಬಿ ದಾಸಪ್ಪ ಪ್ರಥಮ, ಸಂಜೀವ ಬಲ್ಕುರ್ ದ್ವಿತೀಯ, ಕೃಪಾತ್ ಸುರೇಶ್ ಕುಮಾರ್ ತೃತೀಯ ಸ್ಥಾನ ಪಡೆದರು.

ಮಹಿಳಾ ಮುಕ್ತ ವಿಭಾಗದ ಹಾಫ್ ಮ್ಯಾರಥಾನ್: ಮೀರಾ ಪ್ರಥಮ, ಭಾರತಿ ಚಂದ್ರಶೇಖರ್ ದ್ವಿತೀಯ, ಕೆ.ಮಾದೇವಿ ತೃತೀಯ ಸ್ಥಾನ ಪಡೆದರು.

ಹಿರಿಯ ಮಹಿಳಾ ವಿಭಾಗದ ಹಾಫ್ ಮ್ಯಾರಥಾನ್: ದಿವ್ಯ ಮಾದಯ್ಯ ಪ್ರಥಮ, ಸರ್ವನಿಧಿ ಠಾಕೂರ್ ದ್ವಿತೀಯ, ರಶ್ಮಿ ಅರಸ್ ತೃತೀಯ.

ವೆಟರನ್ ಮಹಿಳಾ ವಿಭಾಗದ ಹಾಫ್ ಮ್ಯಾರಥಾನ್: ಎಸ್.ಜಿ.ವಿಜಯಾ ಪ್ರಥಮ ಸ್ಥಾನ ಪಡೆದರು.

ಪುರುಷರ ಮುಕ್ತ ವಿಭಾಗ 30 ಕಿ.ಮೀ ಓಟ: ಮೊಹಮದ್ ಸಾಹಿಲ್ ಅಣ್ಣಿಗೇರಿ ಪ್ರಥಮ, ಶ್ರೀಜಿನ್ ತಂಗಮಣಿ ದ್ವಿತೀಯ, ಚಾನ್ ಪಾಶ ತೃತೀಯ ಸ್ಥಾನ ಪಡೆದರು.

ಹಿರಿಯ ಪುರುಷರ ವಿಭಾಗ 30 ಕಿಮೀ ಓಟ: ರೆಜಿ ಕುಮಾರ್ ಅರವಿಂದಕ್ಷನ್ ಪ್ರಥಮ, ರವಿಕುಮಾರ್ ಯಲಗಚ್ ದ್ವಿತೀಯ, ಸಿದ್ಧಾರ್ಥ ಮೆನನ್ ತೃತೀಯ ಸ್ಥಾನ ಪಡೆದರು.

ವೆಟರನ್ ಪುರುಷರ 30 ಕಿಮೀ ಓಟ: ಜಿ.ಮೋಹನ್ ರಾವ್ ಪ್ರಥಮ, ರಾಮಕೃಷ್ಣ ದ್ವಿತೀಯ ಸ್ಥಾನ ಪಡೆದರು.

ಮುಕ್ತ ಮಹಿಳಾ ವಿಭಾಗ 30 ಕಿಮೀ: ಪ್ರಾತಿ ಗುಪ್ತಾ ಪ್ರಥಮ, ಮಮತಾ ಯಾದವ್ ದ್ವಿತೀಯ, ಬಿಂದು ಜೆಪ್ರಕಾಶ್ ತೃತೀಯ ಸ್ಥಾನ ಪಡೆದರು.

ಹಿರಿಯ ಮಹಿಳಾ ವಿಭಾಗ 30 ಕಿಮೀ ಓಟ: ಸುಮನ್ ಶ್ರೀನಿವಾಸ್ ಪ್ರಥಮ, ರಾಜಲಕ್ಷ್ಮೀ ಮಣಿ ದ್ವಿತೀಯ, ಚಿಂತನ ಎಂ. ಪಟ್ಕರ್ ತೃತೀಯ ಸ್ಥಾನ ಪಡೆದು ಗಮನ ಸೆಳೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ದ ರೂಲರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಿಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಿಸ್ಟರ್ ಬಚನ್ (ತೆ)	4 ಪ್ರದರ್ಶನಗಳು
ಪ್ರಭಾ	
ಅಹೋ ವಿಕ್ರಮಾರ್ಕ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ,
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸೆ.29ಕ್ಕೆ ಬಿಸಿಎಂ ಹಳೆ ವಿದ್ಯಾರ್ಥಿ ಸಂಘ ಉದ್ಘಾಟನೆ



ಮೈಸೂರು, ಸೆ.1– ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆಯನ್ನು ಸೆ.29ರಂದು ಕಲಾಮಂದಿರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಎಂದು ಸಂಘದ ಗೌರವ ಅಧ್ಯಕ್ಷ ಎಂ.ರಾಮಯ್ಯ ತಿಳಿಸಿದರು.

ರಾಮಕೃಷ್ಣನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂಘದ ಪೂರ್ವಭಾವಿ ಸಭೆಯಲ್ಲಿ ಸಂಘದ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿಯೂ ಆದ ಬಿ.ಶಿವಸ್ವಾಮಿ ಮಾತನಾಡಿ, ರಾಜ್ಯದಲ್ಲಿಯೇ ಪ್ರಥಮವಾಗಿ ಬಿ.ಸಿ.ಎಂ. ಹಳೆಯ ವಿದ್ಯಾರ್ಥಿಗಳ ಸಂಘವನ್ನು ಮೈಸೂರಿನಲ್ಲಿ ಅಸ್ತಿತ್ವಕ್ಕೆ ತರುತ್ತಿದ್ದೇವೆ ಬಿಸಿಎಂ ಹಾಸ್ಟೆಲ್‌ನ ಪಿತಾಮಹ ಡಿ.ದೇವರಾಜ ಅರಸು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರು ಸಹ ಮೈಸೂರು ಜಿಲ್ಲೆಯವರಾಗಿರುವುದು ಹೆಮ್ಮೆಯ ವಿಷಯ. ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಶಾಸಕರು, ಸಚಿವರು, ಭಾಗವಹಿಸಲಿದ್ದಾರೆ. ಬಿ.ಸಿ.ಎಂ. ಹಾಸ್ಟೆಲ್‌ನ ಹಳೆಯ ವಿದ್ಯಾರ್ಥಿಗಳು, ನಿವೃತ್ತ ನೌಕರರು, ಹಾಸ್ಟೆಲ್ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗುವುದು. ಹಾಗಾಗಿ ಸ್ವಾಗತ ಸಮಿತಿ, ವೇದಿಕೆ ಸಮಿತಿ, ಆಹಾರ ಸಮಿತಿ, ಆಹ್ವಾನ ಪತ್ರಿಕೆ ಸಮಿತಿ, ಮಾಧ್ಯಮ ಸಮಿತಿ, ಪ್ರಚಾರ ಸಮಿತಿಗಳನ್ನು ರಚಿಸಲಾಗಿದೆ. ಆಯಾಯ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದರು.

ಸಭೆಯಲ್ಲಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಹಾಗೂ ಸಂಘದ ಉಪಾಧ್ಯಕ್ಷ ಆರ್.ಮಹದೇವ್, ಕಾರ್ಯದರ್ಶಿ ಬಿ.ಪಿ.ರಾಜೇಶ್, ಖಜಾಂಚಿ ರುಕ್ಮಾಂಗದ ಕೆ, ಜಂಟಿ ಕಾರ್ಯದರ್ಶಿ ರಮೇಶ್ ಗೌಡ, ತಹಸಿಲ್ದಾರ್ ಮುರಡಗಳ್ಳಿ ಮಂಜುನಾಥ್, ಅಹಿಂದ ಜವರಪ್ಪ, ಡಾ. ಮಾಲೇಗೌಡ, ಪ್ರಕಾಶ್, ಶಿವಕುಮಾರ್ ಇತರರು ಉಪಸ್ಥಿತರಿದ್ದರು.





ಹೆಸರಾಂತ

ವೈಶಾಖ್ ಗ್ರೂಪ್ ಆಫ್ ಹೋಟೆಲ್ಸ್‌ನ

ಮಾಲೀಕರು (ಹೋಟೆಲ್ ವೈಶಾಖ್ ಇಂಟರ್‌ನಾಷನಲ್,
ಹೋಟೆಲ್ ವೈಶಾಖ್ ರೆಸಿಡೆನ್ಸಿ, ಹೋಟೆಲ್ ವೈಶಾಖ್ ಕಂಫರ್ಟ್,
ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ
ಹೋಟೆಲ್ ರಿಯೋ ಮೆರಿಡಿಯನ್)
ಹಾಗೂ ನೂರಾರು ಕುಟುಂಬದ ಅನ್ನದಾತರಾದ

ಶ್ರೀಮತಿ ಜಯಮ್ಮ ಗೋವಿಂದೇಗೌಡರ ಸುಪುತ್ರ
ಸರಳ ಸ್ನೇಹಜೀವಿ

ಶ್ರೀ ಅಶೋಕ್ ರವರಿಗೆ

ಹುಟ್ಟು ಹಬ್ಬದ ಶುಭಾಶಯಗಳು

ತಾಯಿ ಚಾಮುಂಡೇಶ್ವರಿ ನಿಮಗೆ
ಆಯುರಾರೋಗ್ಯ ಕರುಣಿಸಲೆಂದು ಪ್ರಾರ್ಥಿಸುವ
ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು

ಶುಭ ಕೋರುವವರು :

ಶ್ರೀ ಓಂಶಕ್ತಿ ಗ್ರೂಪ್ಸ್



ನಾರಾಯಣ ಗೌಡ್ರು



ಓಂ



ಶಕ್ತಿ



Hotel RIO MERIDIAN
your host in city of palaces

Suprabha Shades Mysuru - 98452 18266